ಮಂಗಳವಾರ, ಅಕ್ಟೋಬರ್ 8, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೋಟ

ಮುಂಬೈನಲ್ಲಿ ಸೋಮವಾರ ನಡೆದ 'ಸಿಂಘಂ ಅಗೇನ್' ಸಿನಿಮಾ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ನಟಿ ಕರೀನಾ ಕಪೂರ್ ಕಂಡಿದ್ದು ಹೀಗೆ...



ನೇಮಕಾತಿ ವ್ಯವಸ್ಥೆಯಲ್ಲಿ ಸಮಗ್ರ ಸುಧಾರಣೆಗೆ ಕ್ರಮ: ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

‘34,863 ಖಾಲಿ ಹುದ್ದೆ ಕಾಲಮಿತಿಯಲ್ಲಿ ಭರ್ತಿ’

ಪ್ರಜಾವಾಣಿ ವಾರ್ತೆ


ಸಿದ್ದರಾಮಯ್ಯ

ಬೆಂಗಳೂರು: ‘ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 34,863 ಹುದ್ದೆಗಳನ್ನು ಕಾಲಮಿತಿಯಲ್ಲಿ ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ನಡೆಸಬೇಕು’ ಎಂದು ನೇಮಕಾತಿ ಪ್ರಾಧಿಕಾರಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ವಿವಿಧ ಇಲಾಖೆಗಳ ನೇಮಕಾತಿಗಳ ಕುರಿತು ತಮ್ಮ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಸೋಮವಾರ ಪ್ರಗತಿ ಪರಿಶೀಲನೆ ನಡೆಸಿದ ಅವರು, ‘ಅಗತ್ಯ ಸೇವೆಗಳ ಇಲಾಖೆಗಳಲ್ಲಿ ನೇಮಕಾತಿಗೆ ಆದ್ಯತೆ ನೀಡಬೇಕು’ ಎಂದು ಸಲಹೆ ನೀಡಿದರು.

ಕಲ್ಯಾಣ ಕರ್ನಾಟಕದ ಸ್ಥಳೀಯ ಅಭ್ಯರ್ಥಿಗಳಿಗೆ 371ಜೆ ಅಡಿ ಮೀಸಲಿರಿಸಿರುವ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು 2023ರಲ್ಲಿ ಹೊರಡಿಸಿರುವ ಸುತ್ತೋಲೆಯನ್ನು ಅನುಸರಿಸಲು ಕ್ರಮ ತೆಗೆದುಕೊಳ್ಳಬೇಕು. ಕೇರಳ ಮಾದರಿಯಲ್ಲಿ ನೇಮಕಾತಿ ಪ್ರಕ್ರಿಯೆ ನಡೆಸುವ ಕುರಿತು ಅಲ್ಲಿಗೆ ಭೇಟಿ ನೀಡಿ ಪರಿಶೀಲಿಸಬೇಕು ಎಂದು ನಿರ್ದೇಶನ ನೀಡಿದರು.

41 ಇಲಾಖೆಗಳ ವೃಂದ ಮತ್ತು ನೇಮಕಾತಿ ನಿಯಮ ತಿದ್ದುಪಡಿಯಾಗದ ಕಾರಣ ನೇಮಕಾತಿ ವಿಳಂಬವಾಗುತ್ತಿದೆ. ಕೆಲವು ಇಲಾಖೆಗಳಲ್ಲಿ ಹಲವು ದಶಕಗಳಿಂದ ವೃಂದ ಮತ್ತು ನೇಮಕಾತಿ ನಿಯಮ ತಿದ್ದುಪಡಿ ಆಗಿಲ್ಲ. ಆ ಎಲ್ಲ ಇಲಾಖೆಗಳಿಗೆ ಅನುಕೂಲ ಆಗುವಂತೆ ಮಾದರಿ ನಿಯಮ ರೂಪಿಸಬೇಕು. ಪಿಎಸ್‌ಐ ನೇಮಕಾತಿಯಲ್ಲಿ ದೈಹಿಕ ಪರೀಕ್ಷೆ ಮೊದಲು ನಡೆಸಲಾಗುತ್ತಿದ್ದು, ಅಬಕಾರಿ ಇಲಾಖೆ ನೇಮಕಾತಿಯಲ್ಲಿ ಮೊದಲು ಲಿಖಿತ ಪರೀಕ್ಷೆ ಮಾಡಲಾಗುತ್ತದೆ. ಅಬಕಾರಿ ಇಲಾಖೆಯ ಮಾದರಿಯನ್ನು ಪಿಎಸ್‌ಐ ನೇಮಕಾತಿಯಲ್ಲೂ ಅನುಸರಿಸುವ ಕುರಿತು ಪರಿಶೀಲಿಸಬೇಕು ಎಂದು ಸೂಚನೆ ನೀಡಿದರು.

ಸಚಿವರಾದ ಜಿ. ಪರಮೇಶ್ವರ, ಎಚ್‌.ಕೆ. ಪಾಟೀಲ, ಪ್ರಿಯಾಂಕ್ ಖರ್ಗೆ, ದಿನೇಶ್ ಗುಂಡೂರಾವ್, ಡಾ. ಶರಣಪ್ರಕಾಶ ಪಾಟೀಲ, ಮಧು ಬಂಗಾರಪ್ಪ, ಬೈರತಿ ಸುರೇಶ್, ಡಾ.ಎಂ.ಸಿ. ಸುಧಾಕರ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ. ಅತೀಕ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಕಾನೂನು ಸಲಹೆಗಾರ ಎ.ಎಸ್‌. ಪೊನ್ನಣ್ಣ, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಸಭೆಯಲ್ಲಿದ್ದರು.

‘ಎ–ಬಿ’ ಗ್ರೂಪ್ ಬಿಟ್ಟು ಉಳಿದ ಹುದ್ದೆಗಳ ನೇಮಕಾತಿ ‘ಕೆಇಎ’ಗೆ

ಗ್ರೂಪ್ ‘ಎ’ ಮತ್ತು ಗ್ರೂಪ್ ‘ಬಿ’ ಹುದ್ದೆಗಳಿಗೆ ಮಾತ್ರ ಯುಪಿಎಸ್‌ಸಿ ನೇಮಕಾತಿ ನಡೆಸುತ್ತಿದೆ. ಕೆಪಿಎಸ್‌ಸಿ ಕೂಡಾ ಗ್ರೂಪ್ ‘ಎ’ ಮತ್ತು ‘ಬಿ’ ಹುದ್ದೆಗಳಿಗೆ ಮಾತ್ರ ನೇಮಕಾತಿ ಪ್ರಕ್ರಿಯೆ ನಡೆಸಿ, ಗ್ರೂಪ್ ‘ಸಿ’ಯಂಥ ಹುದ್ದೆಗಳ ನೇಮಕಾತಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ವಹಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು.

ನೇಮಕಾತಿ ವೇಳಾಪಟ್ಟಿ: ನೇಮಕಾತಿಗೆ ಸಂಬಂಧಿಸಿದಂತೆ ವಾರ್ಷಿಕ ವೇಳಾಪಟ್ಟಿ ಸಿದ್ಧಪಡಿಸಲು ಇರುವ ತೊಡಕುಗಳನ್ನು ನಿವಾರಿಸಬೇಕು. ಆರ್ಥಿಕ ವರ್ಷದ ಆರಂಭದಲ್ಲಿ ಆಯಾ ಇಲಾಖೆಗಳು ನೇಮಕಾತಿಗೆ ಖಾಲಿಯಿರುವ ಹುದ್ದೆಗಳ ಕುರಿತು ಆರ್ಥಿಕ ಇಲಾಖೆಗೆ ಪ್ರಸ್ತಾವ ಕಳುಹಿಸಬೇಕು. ಕಾಲಮಿತಿಯಲ್ಲಿ ಹಣಕಾಸು ಇಲಾಖೆಯಿಂದ ಅನುಮೋದನೆ ಪಡೆದು ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಏಕ ರೀತಿಯ ವೇಳಾಪಟ್ಟಿ ಸಿದ್ಧಪಡಿಸಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು.

ಸುದ್ದಿ 2 ನಿಮಿಷ

ನಾಪತ್ತೆಯಾಗಿದ್ದ ಅಲಿ ಮೃತದೇಹ ನದಿಯಲ್ಲಿ ಪತ್ತೆ

ಮಂಗಳೂರು: ಭಾನುವಾರ ನಾಪತ್ತೆಯಾಗಿದ್ದ ಮುಸ್ಲಿಂ ಮುಖಂಡ, ಉದ್ಯಮಿ ಬಿ.ಎಂ. ಮುಮ್ತಾಜ್ ಅಲಿ ಅವರ ಮೃತದೇಹವು ನಗರ ಹೊರವಲಯದ ಕೂಳೂರು ಸೇತುವೆ ಬಳಿ ಫಲ್ಗುಣಿ ನದಿಯಲ್ಲಿ ಸೋಮವಾರ ಪತ್ತೆಯಾಗಿದೆ.

ಅಲಿ ಅವರಿಗೆ ಮಾನಸಿಕ ಕಿರುಕುಳ ನೀಡಿ, ಆತ್ಮಹತ್ಯೆಗೆ ಪ್ರಚೋದಿಸಿದ ಹಾಗೂ ಅವರಿಂದ ₹ 50 ಲಕ್ಷ ಸುಲಿಗೆ ಮಾಡಿದ ಆರೋಪದ ಮೇಲೆ ಶಿಕ್ಷಕಿ ರೆಹಮತ್ ಎಂಬ ಮಹಿಳೆ ಸೇರಿದಂತೆ ಆರು ಮಂದಿ ವಿರುದ್ಧ ನಗರದ ಕಾವೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಕೃಷ್ಣಾಪುರದ ರೆಹಮತ್, ಕಾಟಿಪಳ್ಳದ ಅಬ್ದುಲ್ ಸತ್ತಾರ್ (ಸ್ಥಳೀಯ ಕಾಂಗ್ರೆಸ್ ಮುಖಂಡ), ಸಜಿಪಮುನ್ನೂರಿನ ಶಾಫಿ, ಕೃಷ್ಣಾಪುರ ಮಹಮ್ಮದ್ ಮುಸ್ತಫಾ, ಶೋಯಿಬ್ (ರೆಹಮತ್ ಪತಿ) ಹಾಗೂ ಸತ್ತಾರ್ ಅವರ ಕಾರು ಚಾಲಕ ಮಹಮ್ಮದ್ ಸಿರಾಜ್ ಸೇರಿಕೊಂಡು 2024ರ ಜುಲೈನಿಂದ ಮುಮ್ತಾಜ್ ಅಲಿ ಅವರನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು’ ಎಂದು ಆರೋಪಿಸಿ ಅಲಿ ಅವರ ತಮ್ಮ ಹೈದರ್ ಅಲಿ ದೂರು ನೀಡಿದ್ದರು.

‘ಅಲಿ ಅವರ ಹೆಸರು ಕೆಡಿಸಲು ಆರೋಪಿಗಳು ಷಡ್ಯಂತ್ರ ರೂಪಿಸಿದ್ದರು. ರೆಹಮತ್ ಜೊತೆ ಅಕ್ರಮ ಸಂಬಂಧ ಇದೆ ಎಂದು ಅಪಪ್ರಚಾರ ಮಾಡುತ್ತೇವೆ ಎಂದು ಬೆದರಿಸಿ ₹ 50 ಲಕ್ಷಕ್ಕಿಂತಲೂ ಹೆಚ್ಚು ಮೊತ್ತವನ್ನು ಆರೋಪಿಗಳು ಪಡೆದಿದ್ದಾರೆ. ಇದರಲ್ಲಿ ₹25 ಲಕ್ಷವನ್ನು ಚೆಕ್ ರೂಪದಲ್ಲಿ ಪಡೆದಿದ್ದಾರೆ. ಇನ್ನೂ ₹ 50 ಲಕ್ಷ ನೀಡಬೇಕು ಎಂದು ಬ್ಲಾಕ್‌ಮೇಲ್ ಮಾಡಿದ್ದಾರೆ. ಹಣ ನೀಡದಿದ್ದರೆ ಕೊಲೆ ಮಾಡುವುದಾಗಿಯೂ ಬೆದರಿಕೆ ಒಡ್ಡಿದ್ದಾರೆ. ಈ ವಿಚಾರವನ್ನು ಅಣ್ಣನೇ ನನ್ನಲ್ಲಿ ತಿಳಿಸಿದ್ದ’ ಎಂದೂ ಹೈದರ್ ದೂರಿನಲ್ಲಿ ಆರೋಪಿಸಿದ್ದರು.

‘ತಮ್ಮನ್ನು ಇಕ್ಕಟ್ಟಿನ ಪರಿಸ್ಥಿತಿಗೆ ತಳ್ಳಿದವರ ಹೆಸರನ್ನು ಉಲ್ಲೇಖಿಸಿ, ಅಲಿ ಅವರು, ಧ್ವನಿಮುದ್ರಿತ ಸಂದೇಶವನ್ನು ಬಂಧುಗಳಿಗೆ ಕಳುಹಿಸಿದ್ದರು’ ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ತಿಳಿಸಿದರು.



ಸಿ.ಎಂ ಪ್ರವಾಸದ ವೇಳೆ ಅವಘಡ: ವಾಹನ ಚಲಾಯಿಸಿದ್ದು ರೆಡ್ಡಿ?

ಗಂಗಾವತಿ (ಕೊಪ್ಪಳ ಜಿಲ್ಲೆ): ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ಗಂಗಾವತಿ ಮಾರ್ಗವಾಗಿ ಬಳ್ಳಾರಿಗೆ ತೆರಳುವಾಗ ಅವರ ಬೆಂಗಾವಲು ವಾಹನಗಳ ಎದುರುಗಡೆಯಿಂದ ಶಾಸಕ ಜನಾರ್ದನ ರೆಡ್ಡಿಯೇ ತಮ್ಮ ಕಾರು ಚಲಾಯಿಸಿಕೊಂಡು ಹೋಗಿರುವ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಸಿ.ಎಂ. ‘ಝೀರೊ ಟ್ರಾಫಿಕ್’ ನಡುವೆ ತೆರಳುವಾಗ ರೆಡ್ಡಿ ಅವರ ವಾಹನ ಸಿ.ಎಂ ಬೆಂಗಾವಲು ವಾಹನದ ಎದುರಿನಿಂದ ತೆರಳಿತ್ತು. ಕೆಲವೇ ಸೆಕೆಂಡುಗಳಲ್ಲಿ ಮುಖ್ಯಮಂತ್ರಿ ಬೆಂಗಾವಲು ವಾಹನ ಎದುರಿಗೆ ಬಂದಿತ್ತು. ರೆಡ್ಡಿಗೆ ಸಂಬಂಧಿಸಿದ ಒಟ್ಟು ಮೂರು ಕಾರುಗಳು ಸಿ.ಎಂ. ಬೆಂಗಾವಲು ವಾಹನಗಳ ಎದುರೇ ರಸ್ತೆ ವಿಭಜಕ ನುಗ್ಗಿಕೊಂಡು ಹೋಗಿವೆ. ಈ ಕುರಿತು ಗಂಗಾವತಿ ಸಂಚಾರ ಪೊಲೀಸ್ ಠಾಣೆಯಲ್ಲಿ ಎಎಸ್‌ಐ ಹಮೀದ್ ಹುಸೇನ್ ಖುದ್ದು ದೂರು ದಾಖಲಿಸಿದ್ದಾರೆ.

ಆದರೆ, ಪೊಲೀಸರು ಎಫ್‌ಐಆರ್‌ನಲ್ಲಿ ಕಾರುಗಳ ವಾಹನ ಚಾಲಕರು ಎಂದಷ್ಟೇ ನಮೂದಿಸಿದ್ದು, ಚಾಲಕರ ಹೆಸರು ಹಾಗೂ ವಿವರಗಳನ್ನು ತಿಳಿಸಿಲ್ಲ. ಆದರೆ, ಸಾಮಾಜಿಕ ಮಾಧ್ಯಮಗಳಲ್ಲಿ ಶಾಸಕ ರೆಡ್ಡಿಯೇ ಕಾರು ಚಲಾಯಿಸುತ್ತಿದ್ದ ವಿಡಿಯೊಗಳು ಹರಿದಾಡುತ್ತಿವೆ.

ದೆಹಲಿಯಲ್ಲಿ ರಿಯಾಯಿತಿ ದರದಲ್ಲಿ ಟೊಮೆಟೊ ಮಾರಾಟಕ್ಕೆ ಚಾಲನೆ

ನವದೆಹಲಿ (ಪಿಟಿಐ): ಟೊಮೆಟೊ ಬೆಲೆ ಏರಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ಟೊಮೆಟೊ ಮಾರಾಟ ಮಾಡಲು ಆರಂಭಿಸಿದೆ. ದೆಹಲಿಯಲ್ಲಿ ಪ್ರತಿ ಕೆ.ಜಿಗೆ ₹65ರಂತೆ ಟೊಮೆಟೊ ಚಿಲ್ಲರೆ ಮಾರಾಟಕ್ಕೆ ಕೇಂದ್ರ ಸರ್ಕಾರ ಸೋಮವಾರ ಚಾಲನೆ ನೀಡಿದೆ.

ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳ (ಎನ್‌ಸಿಸಿಎಫ್) ನೇರವಾಗಿ ಮಂಡಿಗಳಿಂದ ಟೊಮೆಟೊ ಖರೀದಿಸಿ ರಿಯಾಯಿತಿ ದರದಲ್ಲಿ ದೆಹಲಿಯ 50 ಪ್ರದೇಶಗಳಲ್ಲಿ ಮೊಬೈಲ್ ವ್ಯಾನ್‌ಗಳ ಮೂಲಕ ಮಾರಾಟ ಮಾಡುತ್ತಿದೆ. ಸೋಮವಾರ ದೆಹಲಿಯಲ್ಲಿ ಕೆ.ಜಿ ಟೊಮೆಟೊ ಸರಾಸರಿ ದರ ₹90ರಂತೆ ಮಾರಾಟವಾಗಿದೆ.

ಟೊಮೆಟೊ ಚಿಲ್ಲರೆ ಮಾರಾಟಕ್ಕೆ ಕೃಷಿ ಭವನದಲ್ಲಿ ಚಾಲನೆ ನೀಡಿದ ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ, ಟೊಮೆಟೊ ಬೆಲೆಯನ್ನು ತಗ್ಗಿಸಲು ಪ್ರಯತ್ನಿಸುತ್ತಿದ್ದೇವೆ. ಮೂರ್ನಾಲ್ಕು ದಿನದಲ್ಲಿ ಟೊಮೆಟೊ ಧಾರಣೆ ಕಡಿಮೆಯಾಗುವ ನಿರೀಕ್ಷೆ ಇದೆ ಎಂದು ಹೇಳಿದರು.

ಇತ್ತೀಚಿನ ವಾರಗಳಲ್ಲಿ ಮಂಡಿಗಳಿಗೆ ಉತ್ತಮ ಪ್ರಮಾಣದಲ್ಲಿ ಟೊಮೆಟೊ ನಿರಂತರವಾಗಿ ಬರುತ್ತಿದ್ದರೂ, ಚಿಲ್ಲರೆ ಬೆಲೆಯಲ್ಲಿ ಅನಗತ್ಯ ಏರಿಕೆ ಕಂಡುಬಂದಿದೆ ಎಂದು ಹೇಳಿದ್ದಾರೆ.

ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರದಂತಹ ಪ್ರಮುಖ ಟೊಮೆಟೊ ಉತ್ಪಾದನಾ ರಾಜ್ಯಗಳಲ್ಲಿ ಮಳೆ ಮತ್ತು ಹೆಚ್ಚಿನ ಆರ್ದ್ರತೆಯಿಂದ ಟೊಮೆಟೊ ಗುಣಮಟ್ಟಕ್ಕೆ ತೊಂದರೆ ಆಗಬಹುದು ಎನ್ನಲಾಗಿದೆ.

ದೇಶದಲ್ಲಿ ಸರಾಸರಿ ಆಲೂಗಡ್ಡೆ ದರ ಕೆ.ಜಿ ₹36.89 ಮತ್ತು ಈರುಳ್ಳಿ ₹54.36 ಇದೆ.

ಟೊಮೆಟೊ ದರ ಮತ್ತೆ ದುಬಾರಿ

ಕುಸಿದ ಇಳುವರಿ ● ಹೊರ ರಾಜ್ಯಗಳಿಂದ ಹೆಚ್ಚಿದ ಬೇಡಿಕೆ ● ಕೆ.ಜಿಗೆ ₹ 70ರಿಂದ ₹80

● ಕೆ.ಓಂಕಾರ ಮೂರ್ತಿ

ಕೋಲಾರ: ವಾರದ ಹಿಂದೆಯಷ್ಟೇ ₹30–₹40ರಷ್ಟಿದ್ದ ಕೆ.ಜಿ. ಟೊಮೆಟೊ ಬೆಲೆ ನಾಲ್ಕೈದು ದಿನಗಳಿಂದ ಸ್ಥಳೀಯ ಮಾರುಕಟ್ಟೆಯಲ್ಲಿ ₹70ರಿಂದ ₹80 ರಂತೆ ಮಾರಾಟವಾಗುತ್ತಿದೆ.

ಕೋಲಾರ ಎಪಿಎಂಸಿ ಮಾರುಕಟ್ಟೆ ಹರಾಜಿನಲ್ಲಿ ಉತ್ತಮ ಗುಣಮಟ್ಟದ 15 ಕೆ.ಜಿ. ತೂಕದ ಬಾಕ್ಸ್ ಟೊಮೆಟೊ ₹1,100 ರವರೆಗೆ ಮಾರಾಟವಾಗುತ್ತಿದೆ. ಕೆ.ಜಿ ಟೊಮೆಟೊಗೆ ಸರಾಸರಿ ₹73 ದರ ಇದೆ.

ಸೋಮವಾರ ಟೊಮೆಟೊ ಆವಕ ಪ್ರಮಾಣ 16,456 ಕ್ವಿಂಟಲ್ (1.10 ಲಕ್ಷ ಬಾಕ್ಸ್) ಇತ್ತು. ಕಳೆದ ತಿಂಗಳು ಸರಾಸರಿ 25 ಸಾವಿರ ಕ್ವಿಂಟಲ್ ಆವಕವಾಗುತ್ತಿತ್ತು. ಮಾರುಕಟ್ಟೆಗೆ ಟೊಮೆಟೊ ತಂದಿದ್ದ ರೈತರು ಹೆಚ್ಚಿನ ಬೆಲೆಗೆ ಮಾರಾಟವಾದ್ದರಿಂದ ನಿಟ್ಟುಸಿರು ಬಿಡುತ್ತಿದ್ದಾರೆ.

ರೋಗ ಬಾಧೆ, ಕಳಪೆ ಸಸಿಗಳಿಂದಾಗಿ ಕೋಲಾರ ಜಿಲ್ಲೆಯಲ್ಲಿ ಟೊಮೆಟೊ ಇಳುವರಿ ಭಾರಿ ಪ್ರಮಾಣದಲ್ಲಿ ತಗ್ಗಿದೆ. ಸಾಲು, ಸಾಲು ಹಬ್ಬಗಳ ಹಿನ್ನೆಲೆಯಲ್ಲಿ ಹೊರ ರಾಜ್ಯಗಳಿಂದಲೂ ಬೇಡಿಕೆ ಹೆಚ್ಚಾಗಿದೆ.

ಸದ್ಯಕ್ಕೆ ಬಾಂಗ್ಲಾದೇಶಕ್ಕೆ ಕೋಲಾರದಿಂದ ಟೊಮೆಟೊ ಪೂರೈಕೆ ಸ್ಥಗಿತಗೊಂಡಿದೆ. ತಮಿಳುನಾಡು, ತೆಲಂಗಾಣ, ಒಡಿಶಾ, ಪಶ್ಚಿಮ ಬಂಗಾಳ ರಾಜ್ಯಗಳಿಂದ ಕೋಲಾರದ ಟೊಮೆಟೊಗೆ ಹೆಚ್ಚಿನ ಬೇಡಿಕೆ ಬರುತ್ತಿದೆ. ಹಾಗಾಗಿ ನಾಲ್ಕೈದು ದಿನಗಳಿಂದ ಧಾರಣೆ ಏರುಗತಿಯಲ್ಲಿದೆ ಎನ್ನುತ್ತಾರೆ ಟೊಮೆಟೊ ಮಂಡಿ ವರ್ತಕರು.

ಟೊಮೆಟೊ ಮಾರಾಟದಲ್ಲಿ ಏಷ್ಯಾದಲ್ಲೇ ಎರಡನೇ ಅತಿದೊಡ್ಡ ಮಾರುಕಟ್ಟೆ ಎನಿಸಿರುವ ಕೋಲಾರದ ಎಪಿಎಂಸಿಯಿಂದ ಬೆಂಗಳೂರು ಅಲ್ಲದೇ ಸುಮಾರು 15ರಿಂದ 20 ರಾಜ್ಯಗಳಿಗೆ ಟೊಮೆಟೊ ಸಾಗಣೆ ಮಾಡಲಾಗುತ್ತದೆ. ಚಿತ್ರದುರ್ಗದ ಚಳ್ಳಕೆರೆ ಸೇರಿದಂತೆ ವಿವಿಧೆಡೆಯ ಟೊಮೆಟೊ ಇಲ್ಲಿನ ಮಾರುಕಟ್ಟೆಗೆ ಬರುತ್ತಿದೆ.

‘ಮಾರುಕಟ್ಟೆಗೆ ಟೊಮೆಟೊ ಪೂರೈಕೆ ಪ್ರಮಾಣ ಕಡಿಮೆ ಆಗಿದೆ. ಬೆಳೆಗೆ ವಿವಿಧ ರೋಗಗಳು ಬಾಧಿಸುತ್ತಿದ್ದು, ಗುಣಮಟ್ಟವೂ ತಗ್ಗಿದೆ. ಹೊರರಾಜ್ಯಗಳಿಂದಲೂ ಬೇಡಿಕೆ ಹೆಚ್ಚಿದ್ದ ಕಾರಣ ದರ ಹೆಚ್ಚಳವಾಗಿದೆ’ ಎಂದು ಕೋಲಾರ ಎಪಿಎಂಸಿ ಕಾರ್ಯದರ್ಶಿ ಕಿರಣ್ ‘ಪ್ರಜಾವಾಣಿ’ಗೆ ತಿಳಿಸಿದರು.


ಕೋಲಾರ ಎಪಿಎಂಸಿಯಲ್ಲಿ ಟೊಮೆಟೊ ಮಾರಾಟ

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಟೊಮೆಟೊ ನಾಟಿ ಕಡಿಮೆ ಆಗಿದೆ. ಸಮೀಕ್ಷೆ ನಡೆಯುತ್ತಿದ್ದು, ಎಷ್ಟು ನಾಟಿ ಮಾಡಿದ್ದಾರೆ, ಎಷ್ಟು ಫಸಲು ಬಂದಿದೆ ಗೊತ್ತಾಗುತ್ತದೆ

ಕುಮಾರಸ್ವಾಮಿ, ಉಪನಿರ್ದೇಶಕ, ತೋಟಗಾರಿಕೆ ಇಲಾಖೆ

ಟೊಮೆಟೊ ಇಳುವರಿ ತಗ್ಗಿದ್ದು, ಬೇಡಿಕೆಗೆ ತಕ್ಕಂತೆ ಮಾರುಕಟ್ಟೆಗೆ ಪೂರೈಕೆ ಆಗುತ್ತಿಲ್ಲ. ಕಳೆದ ತಿಂಗಳು 20ರಿಂದ 25 ಸಾವಿರ ಕ್ವಿಂಟಲ್ ಆವಕವಿದ್ದದ್ದು, ಈಗ 15 ಸಾವಿರ ಕ್ವಿಂಟಲ್‌ಗೆ ಇಳಿದಿದೆ

ಕಿರಣ್, ಕಾರ್ಯದರ್ಶಿ, ಎಪಿಎಂಸಿ, ಕೋಲಾರ

ಕಳಪೆ ಸಸಿ; ಗುಣಮಟ್ಟ ಕುಸಿತ

ಜಿಲ್ಲೆಯಲ್ಲಿ ಈ ಬಾರಿ ನಾಟಿ ಮಾಡಿದ ಬೆಳೆಯಲ್ಲಿ ಶೇ 50ರಷ್ಟು ಹಾನಿಯಾಗಿದೆ. ಎಲೆ ಮುರುಟು ರೋಗ (ಬಿಳಿ ನೊಣ ಬಾಧೆ) ಸೇರಿದಂತೆ ವಿವಿಧ ರೋಗಗಳು ಬಾಧಿಸುತ್ತಿವೆ. ಕೆಲ ನರ್ಸರಿಗಳಿಂದ ವಿತರಣೆ ಆಗುತ್ತಿರುವ ಕಳಪೆ ಸಸಿಯಿಂದಲೂ ಇಳುವರಿ ತಗ್ಗಿದೆ. ಗೋಲಿ ಗಾತ್ರದಲ್ಲಿ ಕಾಯಿ ಕಾಣಿಸಿಕೊಂಡು ಉದುರಿ ಹೋಗುತ್ತಿವೆ. ಜೊತೆಗೆ ಗುಣಮಟ್ಟವೂ ತಗ್ಗುತ್ತಿದೆ. ಹವಾಮಾನದಲ್ಲಿ ಹಠಾತ್ ಬದಲಾವಣೆ ಪರಿಣಾಮ ಬೀರಿದೆ.

‘ಜನವರಿ ತನಕ ಇದೇ ಬೆಲೆ ಸ್ಥಿರ’

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ಒಂದು ಬಾಕ್ಸ್ (14 ಕೆ.ಜಿ) ಟೊಮೆಟೊ ದರ ಸಗಟು ಮಾರುಕಟ್ಟೆಯಲ್ಲಿ ₹ 1,150 ಇದೆ. ಮಧ್ಯಮ ಗುಣಮಟ್ಟದ ಟೊಮೆಟೊ ₹ 700ರಿಂದ ₹800 ಮತ್ತು ಮೂರನೇ ದರ್ಜೆಯ ಟೊಮೆಟೊ ಒಂದು ಬಾಕ್ಸ್ ₹300ರಿಂದ ₹350 ಮಾರಾಟವಾಗುತ್ತಿದೆ.

ಚಿಲ್ಲರೆ ಮಾರುಕಟ್ಟೆಯಲ್ಲಿ ಗುಣಮಟ್ಟದ ಒಂದು ಕೆ.ಜಿ ಟೊಮೆಟೊ ಬೆಲೆ ₹80ರಿಂದ ₹85 ಇದೆ. ಮಳೆ ಬೀಳುತ್ತಿರುವುದು ಮತ್ತು ರೋಗದ ಕಾರಣದಿಂದ ಬೆಲೆ ಹೆಚ್ಚಳವಾಗುತ್ತಿದೆ ಎನ್ನುತ್ತಾರೆ ವರ್ತಕರು.

‘ಈ ವರ್ಷದ ಜೂನ್, ಜುಲೈನಲ್ಲಿ ಉತ್ತಮ ದರವಿತ್ತು. ಆ ನಂತರ ಬೆಲೆ ಕುಸಿಯಿತು. ಈಗ ಊಜಿ ನೊಣ ಮತ್ತು ಕಾಯಿಯ ಮೇಲೆ ಚುಕ್ಕೆರೋಗ ಹೆಚ್ಚಿದೆ. ಜನವರಿಯವರೆಗೂ ಈ ಬೆಲೆ ಸ್ಥಿರವಾಗಿ ಇರುತ್ತದೆ’ ಎಂದು ಗುಡಿಬಂಡೆ ತಾಲ್ಲೂಕಿನ ಕೊಂಡರೆಡ್ಡಿ ಗ್ರಾಮದ ರೈತ ಗಣೇಶ್ ಹೇಳಿದರು.

ಬಾಗೇಪಲ್ಲಿ, ಚಿಂತಾಮಣಿ ಮತ್ತು ಚಿಕ್ಕಬಳ್ಳಾಪುರ ಎಪಿಎಂಸಿಯಿಂದ ಹೊರರಾಜ್ಯಗಳಿಗೂ ಟೊಮೆಟೊ ರವಾನೆ ಆಗುತ್ತದೆ.

ಪರಿಷತ್ ಉಪಚುನಾವಣೆ ನಾಲ್ವರು ಅಭ್ಯರ್ಥಿಗಳು ಕಣದಲ್ಲಿ

ಪ್ರಜಾವಾಣಿ ವಾರ್ತೆ

ಮಂಗಳೂರು: ವಿಧಾನ ಪರಿಷತ್ ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಉಪ ಚುನಾವಣೆಯಲ್ಲಿ ನಾಲ್ವರು ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ.

ಕಿಶೋರ್ ಕುಮಾರ್ (ಬಿಜೆಪಿ), ರಾಜು ಪೂಜಾರಿ (ಕಾಂಗ್ರೆಸ್), ಅನ್ವರ್ ಸಾದತ್ ಎಸ್. (ಎಸ್‌ಡಿಪಿಐ) ಮತ್ತು ದಿನಕರ ಉಳ್ಳಾಲ್ (ಪಕ್ಷೇತರ) ಅವರು ಕಣದಲ್ಲಿರುವ ಅಭ್ಯರ್ಥಿಗಳು. ಮುಹಮ್ಮದ್ ರಿಯಾಝ್ ಪಕ್ಷೇತರರಾಗಿ ಸಲ್ಲಿಸಿದ್ದ ನಾಮಪತ್ರವನ್ನು ಹಿಂಪಡೆದರು.

ಇದೇ 21 ರಂದು ಮತದಾನ ಹಾಗೂ 24ರಂದು ಮತ ಎಣಿಕೆ ನಡೆಯಲಿದೆ ಎಂದು ಚುನಾವಣಾಧಿಕಾರಿ ಮುಲ್ಲೈ ಮುಗಿಲನ್ ತಿಳಿಸಿದ್ದಾರೆ.


ಕಿಶೋರ್ ಕುಮಾರ್


ರಾಜು ಪೂಜಾರಿ

ನಾಲಿಗೆ ಕಚಗುಳಿಯಿಡುವ ಸೀಸನ್ ಆರಂಭ..!

‘ಕರುನಾಡ ಸವಿಯೂಟ – ಆವೃತ್ತಿ 3’ರ ಹಬ್ಬದ ಋತು ಆಗಲಿದೆ ವಿಶೇಷ ಅಡುಗೆ ಭಕ್ಷ್ಯಗಳ ಸಂಭ್ರಮ

ಕರುನಾಡು ವೈವಿಧ್ಯಮಯ ಅಡುಗೆಗಳ ತವರೂರು. ನಾಡಿನ ಪ್ರತಿಯೊಂದು ಸಮುದಾಯದಲ್ಲಿ ತನ್ನದೇ ಆದ ಸಾಂಪ್ರದಾಯಿಕ ಅಡುಗೆಗಳನ್ನು ಹಾಗೂ ವಿಶಿಷ್ಟ ಶೈಲಿಯ ಭಕ್ಷ್ಯಗಳನ್ನು ಹೊಂದಿರುತ್ತವೆ. ಆಹಾರ ಪ್ರಿಯರಿಗೆ ಆನಂದ, ತೃಪ್ತಿ ನೀಡುವ ರಾಜ್ಯ ಕರ್ನಾಟಕ. ಇಂತಹ ಬಹುಮುಖತೆ ಮತ್ತು ವಿಶಿಷ್ಟ ರುಚಿಗೆ ಧ್ವನಿಯಾಗಿ, ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ‘ಕರುನಾಡ ಸವಿಯೂಟ’ ಎಂಬ ಹೆಸರಲ್ಲಿ ಪಾಕಪದ್ಧತಿಗಳನ್ನು ಪರಿಚಯಿಸುತ್ತಿರುವುದು ಜನಜನಿತ. ಈ ಬಾರಿಯ ಕರುನಾಡ ಸವಿಯೂಟ - ಆವೃತ್ತಿ 3 ಹಬ್ಬದ ಸೀಸನ್ ಅನ್ನು ಪ್ರಸಿದ್ಧ ಬಾಣಸಿಗರಾದ ಸಿಹಿ ಕಹಿ ಚಂದ್ರು, ಒಗ್ಗರಣೆ ಡಬ್ಬಿ ಮುರಳಿ ಮತ್ತು ಆದರ್ಶ ತತ್ಪತಿ ಅವರೊಂದಿಗೆ ವಿಶೇಷವಾಗಿ ಪ್ರಸ್ತುತಪಡಿಸಲಿದೆ. ರಾಜ್ಯದ ವಿವಿಧ ಪ್ರದೇಶಗಳ ಪಾಕಪದ್ಧತಿಯ ವೀಡಿಯೋಗಳನ್ನು ಈ ನಮ್ಮ ಸೆಲಿಬ್ರೆಟಿ ಶೆಫ್‌ಗಳು ಪ್ರದರ್ಶಿಸಲಿದ್ದಾರೆ. ಬಾಯಿ ಚಪ್ಪರಿಸುವ ಸವಿರುಚಿಗಳ ಮಾಹಿತಿ ಮತ್ತು ಟಿಪ್ಸ್‌ಗಳ ಮೂಲಕ ನಾಲಿಗೆಗೆ ಕಚಗುಳಿ ಇಡಲಿದ್ದಾರೆ.

ಟೇಸ್ಟಿ ಟಿಟ್‌ಬಿಟ್ಸ್: ಕರ್ನಾಟಕ ಜನತೆಯ ಆಹಾರದ ಪದ್ಧತಿಯಲ್ಲಿ ಮೊದಲು ನಿಮಗೆ ಏನು ನೆನಪಾಗುತ್ತದೆ? ಅಂದರೆ, ಅದು ಮಸಾಲೆ ದೋಸೆ ಆಗಿರಬಹುದು ಅಥವಾ ಇಡ್ಲಿ ಆಗಿರಬಹುದು ಇಲ್ಲವೇ ವಡಾ ಆಗಿರಬಹುದಲ್ಲವೇ?

ಈ ಬೆಳಗಿನ ಉಪಾಹಾರಗಳು, ನಮ್ಮ ರಾಜ್ಯದ ಹಾಗೂ ದಕ್ಷಿಣ ಭಾರತದ ಆಹಾರ ಪದ್ಧತಿ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಆದರೆ, ನಮ್ಮ ನಾಡಲ್ಲಿ ಇನ್ನೂ ಹಲವಾರು ಭಕ್ಷ್ಯಗಳಿವೆ ಎಂಬುದಂತು ನಿಜ. ವಾಸ್ತವವಾಗಿ, ಕರ್ನಾಟಕದ ಪಾಕಪದ್ಧತಿ ದೇಶದ ಅತ್ಯಂತ ಹಳೆಯ ಆಹಾರ ಸಂಪ್ರದಾಯಗಳಲ್ಲಿ ಒಂದಾಗಿದೆ. ರಾಜ್ಯದ ಪಾಕಪದ್ಧತಿ ವೈವಿಧ್ಯತೆಯಿಂದ ಕೂಡಿದ್ದು, ವಿಭಿನ್ನ ವಿನ್ಯಾಸಗಳ ಘಮಘಮಿಸುವ ರುಚಿಗಳಿಂದ ನಿರೂಪಿಸಲ್ಪಟ್ಟಿದೆ. ಪ್ರತಿಯೊಂದು ಖಾದ್ಯ ತಯಾರಿಸುವ ವಿಧಾನ ಆಯಾ ಪ್ರದೇಶದ ಇತಿಹಾಸದ ಕಥೆ ಹೇಳುತ್ತದೆ. ಸ್ಥಳೀಯ ಸಂಸ್ಕೃತಿಯ ನೋಟವನ್ನು ಪ್ರದರ್ಶಿಸುತ್ತದೆ.

‘ಫ್ರೀಡಂ ಹೆಲ್ತಿ ಅಡುಗೆ ಎಣ್ಣೆ’ ಪ್ರಸ್ತುತಪಡಿಸಲಿರುವ ಈ ‘ಕರುನಾಡ ಸವಿಯೂಟ- ಆವೃತ್ತಿ-3’ರ ಪಾಕ ಪದ್ಧತಿಗಳ ಪ್ರದರ್ಶನಕ್ಕೆ ಶ್ರೀ ಕೃಷ್ಣ ಶುದ್ಧ ಹಳ್ಳಿ ತುಪ್ಪ ‘ಶ್ರೀ ಕೃಷ್ಣ ಹಸುವಿನ ತುಪ್ಪ’ ಸಂಸ್ಥೆಯ ಸಹಯೋಗವಿದೆ.

ಹಬ್ಬದ ಋತುವಿನ 15 ಭಕ್ಷ್ಯಗಳ ತಯಾರಿಕೆ ವಿಡಿಯೋಗಳು ಎಚ್ಚರಿಕೆಯಿಂದ ಆಯ್ಕೆ ಮಾಡಿದ್ದಾಗಿದ್ದು, ಬಾಣಸಿಗರಾದ ಸಿಹಿ ಕಹಿ ಚಂದ್ರು, ಒಗ್ಗರಣೆ ಡಬ್ಬಿ ಮುರಳಿ ಮತ್ತು ಆದರ್ಶ್ ತತ್ಪತಿ ಅವರು ತಯಾರಿಸಲಿರುವ ಒಂದೊಂದು ಭಕ್ಷ್ಯಗಳ ಸೂಕ್ಷ್ಮ ವ್ಯತ್ಯಾಸಗಳನ್ನು ಅವರು ವಿವರಿಸಲಿದ್ದಾರೆ. ಶೆಫ್‌ಗಳು ತಯಾರಿಸುವ ಪ್ರತಿ ಖಾದ್ಯ ಅಥವಾ ಭಕ್ಷ್ಯದ ಹಿಂದೆ ಅಡಗಿರುವ ಕಥೆಗಳನ್ನು ಸಹ ಅವರು ಹೇಳಲಿದ್ದಾರೆ. ನಡುನಡುವೆ ಟ್ವಿಸ್ಟ್‌ಗಳನ್ನು ನೀಡುತ್ತಾ ಉಪಕಥೆಗಳನ್ನು ಅನುಸರಿಸಲಿದ್ದಾರೆ. ಕಳೆದ ಎರಡು ಸೀಸನ್‌ಗಳಲ್ಲೂ ನಮ್ಮ ಅಡುಗೆ ಮನೆಗಳಲ್ಲಿ ಈ ಪ್ರಯತ್ನ ಮಾಡಲಾಗಿದೆ.

ಅಡುಗೆ ತಯಾರಿಕೆ ಒಂದು ಕಲೆ: ಉತ್ತರ ಕರ್ನಾಟಕ, ಮಲೆನಾಡು, ಕೊಡಗು ಮತ್ತು ಕರಾವಳಿ ಭಾಗದ ನೆಚ್ಚಿನ ಭಕ್ಷ್ಯಗಳ ಆಯ್ದ ಖಾದ್ಯಗಳ ತಯಾರಿಕೆ ಕಲೆಯನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ. ಇನ್ನೂ ಇಲ್ಲಿ ಪ್ರದರ್ಶಿಸುವ ವೀಡಿಯೊಗಳು ನಮ್ಮ ಬಾಣಸಿಗರು ಆಯ್ಕೆ ಮಾಡಿದ ಕನಸಿನ ಭಕ್ಷ್ಯಗಳಾಗಿವೆ. ಇವುಗಳ ತಯಾರಿಕೆಯ ಪ್ರತಿಯೊಂದು ಹಂತವೂ ಅಡುಗೆ ಪ್ರಿಯರಿಗೆ ಮಾರ್ಗದರ್ಶಿಯಾಗಲಿದೆ.

ರುಚಿಕರ ಹಾಗೂ ಉತ್ತಮ ಭಕ್ಷ್ಯ ಮೂಡಿಬರಲು ತಯಾರಿಕೆ ಕ್ರಮದಲ್ಲಿ ಆಹಾರ ಪದಾರ್ಥಗಳನ್ನು ಹೇಗೆ ಬೇಯಿಸಲಾಗುತ್ತದೆ, ಹೇಗೆ ಅಲಂಕರಿಸಲಾಗುತ್ತದೆ ಮತ್ತು ಹೇಗೆ ಉಣ ಬಡಿಸಲಾಗುತ್ತದೆ ಎಂಬುದನ್ನು ಕಲಿಯಲು ಇದೊಂದು ಉತ್ತಮ ಅವಕಾಶ. ಭಕ್ಷ್ಯಗಳ ತಯಾ ರಿಕೆಯ ಎಲ್ಲ ವಿಡಿಯೊಗಳು ಶೀಘ್ರದಲ್ಲೇ ಆನ್‌ಲೈನ್‌ಗೆ ಬರಲಿವೆ. ಪಾಕವಿಧಾನದ ಹಿನ್ನಲೆಗಳು ಚಿಕ್ಕದಾಗಿ ಮತ್ತು ಚೊಕ್ಕದಾಗಿರಲಿವೆ. ಆದರೆ, ಈ ಚಿಕ್ಕ ವಿಡಿಯೊಗಳು ಭಕ್ಷ್ಯಗಳನ್ನು ಹೇಗೆ ತಯಾರಿಸಬೇಕು ಎಂಬುದರ ಕುರಿತು ನಿಮಗೆ ಮಾರ್ಗದರ್ಶನ ಮಾಡಲಿವೆ.

ಮೆನುವಿನಲ್ಲಿ ಏನಿದೆ?

ಸಿಹಿ ಕಹಿ ಚಂದ್ರು



ಸಜ್ಜಿಗೆಯೊಂದಿಗೆ

ಚಂದ್ರು ಅವರು ಒಬ್ಬ ನಟ, ನಿರ್ಮಾಪಕ ಮತ್ತು ನಿರ್ದೇಶಕ. ಅವರು ತಮ್ಮ ಪಾಕಶಾಲೆಯ ಕೌಶಲ್ಯಕ್ಕೂ ಹೆಸರುವಾಸಿ. ಈ ಸೀಸನ್‌ನಲ್ಲಿ ಅವರು ಪ್ರದರ್ಶಿಸುತ್ತಿರುವ ಅಕ್ಕಿ ಕಡ್ಲೆಬೇಳೆ ಪಾಯಸ, ಸಜ್ಜಿಗೆ, ಕರ್ಜಿಕಾಯಿ, ಪನ್ನೀರ್ ಘೀ ರೋಸ್ಟ್ ಮತ್ತು ಹುರಳಿಕಾಳು ಬಸ್ಸಾರುಗಳನ್ನು ನೀವು ಮಿಸ್ ಮಾಡಿಕೊಳ್ಳಲು ಬಯಸುವುದಿಲ್ಲ ಎನಿಸುತ್ತದೆ.

ಆದರ್ಶ್ ತತ್ಪತಿ



ದಾಂಡೇಲಿ ಚಿಕನ್ ರೋಸ್ಟ್

ಆದರ್ಶ್ ಒಬ್ಬ ಟಿವಿ ಪರ್ಸನಾಲಿಟಿ ಮತ್ತು ಆಹಾರ ಉದ್ಯಮಿ. ಅವರು ರುಚಿಕರ ಭಕ್ಷ್ಯಗಳಿಗೆ ತಯಾರಿಕೆಗೆ ಹೆಸರುವಾಸಿ. ಮಲೆನಾಡು ಕೋಳಿ ಸಾರು, ದಾಂಡೇಲಿ ಸ್ಪೆಷಲ್ ಚಿಕನ್ ಕಡಾಯಿ ರೋಸ್ಟ್, ಹುಬ್ಬಳ್ಳಿ ಸ್ಪೆಷಲ್ ಮಟನ್ ಗ್ರೀನ್ ಕರಿ, ಉಪ್ಪಿನಂಗಡಿ ಸ್ಪೆಷಲ್ ರಾ ಬಾಳೆ ಕರಿ ಮತ್ತು ಬೀಟ್ರೂಟ್ ಸೋಯಾ ವೆಜ್ ಪುಲಾವ್ ತಿಂದರೆ ಸ್ವರ್ಗಕ್ಕೆ ಕಿಚ್ಚು ಹಚ್ಚಿದಂತ ಅನುಭವ ನೀಡುತ್ತದೆ.

ಸುಚಿತ್ರಾ -ಮುರಳಿ



ಬೋನ್ ಲೆಸ್ ಚಿಕನ್

ಟಿವಿ ನಿರೂಪಕರಾದ ಮುರಳೀಧರ್ ಅವರು ತಮ್ಮ ಅಡುಗೆ ಕಾರ್ಯಕ್ರಮ ಒಗ್ಗರಣೆ ಡಬ್ಬಿ, ಯಶಸ್ಸಿನಿಂದ ‘ಒಗ್ಗರಣೆ ಡಬ್ಬಿ ಮುರಳಿ’ ಎಂತಲೇ ಖ್ಯಾತರಾಗಿದ್ದಾರೆ. ಅವರು ತಯಾರಿಸುವ ಪ್ರಾನ್ ಪುಲಿಮುಂಚಿ, ಸಾವೋಜಿ ಮಟನ್ ಬೋಟಿ ಖಾರಾ, ಮಟನ್ ಚಾಪ್ಸ್, ಬೋನ್‌ಲೆಸ್ ಚಿಕನ್ ಸ್ಪೆಷಲ್ ಫ್ರೈ ಮತ್ತು ನಲ್ಲಿ ಫ್ರೈಗಳು ನಿಮ್ಮ ನಾಲಿಗೆಗೆ ಕಚಗುಳಿ ಇಡಲಿವೆ. ಮುರಳಿ ಅವರು ಕರುನಾಡ ಸವಿಯೂಟದಲ್ಲಿ ತಮ್ಮ ಪತ್ನಿ ಸುಚಿತ್ರಾ ಅವರೊಂದಿಗೆ ಇರಲಿದ್ದಾರೆ.

ಬಿಟ್‌ಕಾಯಿನ್: ಡಿವೈಎಸ್‌ಪಿ ಶ್ರೀಧರ್ ಬಂಧನ

ಪ್ರಜಾವಾಣಿ ವಾರ್ತೆ


ಶ್ರೀಧರ್ ಕೆ. ಪೂಜಾರ್

ಬೆಂಗಳೂರು: ಬಿಟ್‌ಕಾಯಿನ್ ಅಕ್ರಮ ಪ್ರಕರಣದಲ್ಲಿ ವಿಶೇಷ ತನಿಖಾ ದಳದ (ಎಸ್‌ಐಟಿ) ತನಿಖಾಧಿಕಾರಿಗಳು ಡಿವೈಎಸ್‌ಪಿ ಶ್ರೀಧರ್ ಕೆ.ಪೂಜಾರ್ (47) ಅವರನ್ನು ಸೋಮವಾರ ಬಂಧಿಸಿದರು.

ಸಿಐಡಿ ಕಚೇರಿಗೆ ಶ್ರೀಧರ್ ವಿಚಾರಣೆಗೆ ಬಂದಿದ್ದರು. ವಿಚಾರಣೆ ನಡೆಸಿದ ಬಳಿಕ ಎಸ್‌ಐಟಿ ಅಧಿಕಾರಿಗಳು ವಶಕ್ಕೆ ಪಡೆದುಕೊಂಡು ಬಂಧಿಸಿದರು. ಕಾಟನ್‌ಪೇಟೆ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ಸಂಬಂಧ ಬಂಧಿಸಲಾಗಿದೆ.

‘ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ನ್ಯಾಯಾಲಯವು ಆರೋಪಿಯನ್ನು ಮೂರು ದಿನ ಎಸ್‌ಐಟಿ ಕಸ್ಟಡಿಗೆ ನೀಡಿ ಆದೇಶಿಸಿದೆ’ ಎಂದು ಮೂಲಗಳು ತಿಳಿಸಿವೆ.

ಶ್ರೀಧರ್ ಅವರು ವಿಚಾರಣೆಗೆ ಸಹಕರಿಸದೇ ತಲೆಮರೆಸಿಕೊಂಡಿದ್ದರು. ನ್ಯಾಯಾಲಯವು ಘೋಷಿತ ಆರೋಪಿ ಎಂದು ವಾರಂಟ್ ಜಾರಿ ಮಾಡಿತ್ತು.

ಎಸ್‌ಐಟಿ ತಂಡದ ತನಿಖಾಧಿಕಾರಿಯಾಗಿರುವ ಡಿವೈಎಸ್‌ಪಿ ಕೆ.ರವಿಶಂಕರ್ ಅವರು ನೀಡಿದ್ದ ದೂರಿನ ಮೇರೆಗೆ ಎಚ್‌ಎಸ್‌ಆರ್ ಲೇಔಟ್‌ನ ಜಿಸಿಐಡಿ ಟೆಕ್ನಾಲಜೀಸ್ ಸಿಇಒ ಕೆ.ಎಸ್.ಸಂತೋಷ್ ಕುಮಾರ್, ಸಿಸಿಬಿ ಇನ್‌ಸ್ಪೆಕ್ಟರ್‌ಗಳಾದ ಲಕ್ಷ್ಮೀಕಾಂತಯ್ಯ ಹಾಗೂ ಚಂದ್ರಾಧರ ಹಾಗೂ ಆಡುಗೋಡಿ ಟೆಕ್ನಿಕಲ್ ಸಪೋರ್ಟ್ ಸೆಂಟರ್‌ನ ಇನ್‌ಸ್ಪೆಕ್ಟರ್ ಡಿ.ಎಂ.ಪ್ರಶಾಂತ್ ಬಾಬು ಹಾಗೂ ಡಿವೈಎಸ್‌ಪಿ ಶ್ರೀಧರ್ ಕೆ. ಪೂಜಾರ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಈ ಹಿಂದೆ ಸಂತೋಷ್, ಡಿ.ಎಂ.ಪ್ರಶಾಂತ್ ಬಾಬು, ಚಂದ್ರಾಧರ ಹಾಗೂ ಲಕ್ಷ್ಮೀಕಾಂತಯ್ಯ ಅವರನ್ನು ಬಂಧಿಸಲಾಗಿತ್ತು. ಶ್ರೀಧರ್ ಅವರನ್ನು ಸೋಮವಾರ ಬಂಧಿಸಲಾಗಿದೆ. ಇದುವರೆಗೂ ಬಿಟ್ ಕಾಯಿನ್ ಪ್ರಕರಣದಲ್ಲಿ ನಾಲ್ವರು ಪೊಲೀಸ್ ಅಧಿಕಾರಿಗಳ ಬಂಧನ ಆದಂತಾಗಿದೆ.

‘ಬಿಟ್‌ಕಾಯಿನ್ ಅಕ್ರಮದ ತನಿಖೆ ನಡೆಸಿದ್ದ ಕೆಂಪೇಗೌಡ ನಗರ ಠಾಣೆ ಪೊಲೀಸರು, ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಸೇರಿದಂತೆ ಆರು ಮಂದಿಯನ್ನು ಬಂಧಿಸಿದ್ದರು. ಈ ಆರೋಪಿಗಳು ಡಾರ್ಕ್‌ವೆಬ್ ಮೂಲಕ ವಿದೇಶಗಳಿಂದ ಮಾದಕ ವಸ್ತುಗಳನ್ನು ತರಿಸುತ್ತಿದ್ದರು. ಅದಕ್ಕಾಗಿ ಕ್ರಿಪ್ಟೊ ಕರೆನ್ಸಿ ಮತ್ತು ಬಿಟ್‌ಕಾಯಿನ್ ಮೂಲಕ ಹಣಕಾಸಿನ ವ್ಯವಹಾರ ನಡೆಸುತ್ತಿದ್ದರು. ರಾಬಿನ್ ಖಂಡೇನ್‌ವಾಲ್ ಜೊತೆ ಸೇರಿಕೊಂಡು ಕೆಲ ಗೇಮ್ ಆ್ಯಪ್‌ಗಳನ್ನು ಹ್ಯಾಕ್ ಮಾಡಿ, ಅವುಗಳ ಮಾಲೀಕರಿಂದ ಹಣ ವಸೂಲಿ ಮಾಡುತ್ತಿದ್ದರು ಎಂಬುದು ತನಿಖೆಯಲ್ಲಿ ಪತ್ತೆಯಾಗಿತ್ತು. ಬಳಿಕ ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿತ್ತು. ಹೆಚ್ಚಿನ ತನಿಖೆಗೆ ಎಸ್‌ಐಟಿ ರಚಿಸಲಾಗಿತ್ತು. ತನಿಖೆ ವೇಳೆ ಸಿಸಿಬಿ ತನಿಖಾಧಿಕಾರಿಗಳು ಹಾಗೂ ಇತರರು ಅಕ್ರಮದಲ್ಲಿ ಶಾಮೀಲಾಗಿರುವುದು ಪತ್ತೆಯಾಗಿತ್ತು. ಕಾಟನ್‌ಪೇಟೆ ಠಾಣೆಗೆ ದೂರು ನೀಡಲಾಗಿತ್ತು’ ಎಂದು ಮೂಲಗಳು ತಿಳಿಸಿವೆ.

‘ಆರೋಪಿಗಳಿಂದ ಪೆನ್‌ಡ್ರೈವ್, ಹಾರ್ಡ್‌ಡಿಸ್ಕ್, ಮ್ಯಾಕ್‌ಬುಕ್‌ಗಳನ್ನು ಸಿಸಿಬಿ ಪೊಲೀಸರು ಜಪ್ತಿ ಮಾಡಿಕೊಂಡಿದ್ದರು. ಜಪ್ತಿ ಮಾಡಿಕೊಂಡಿದ್ದ ಸಾಧನಗಳನ್ನು ನಿಯಮಾನುಸಾರ ಸುರಕ್ಷಿತವಾಗಿಡದೇ ಅವುಗಳನ್ನು ಸ್ವತಃ ಬಳಕೆ ಮಾಡಿದ್ದರು. ಆ ಸಾಧನಗಳಲ್ಲಿ ಹೊಸ ಕಡತಗಳನ್ನು ಸೃಷ್ಟಿಸುವ ಮೂಲಕ ಸಾಕ್ಷ್ಯ ನಾಶ ಮಾಡಿದ್ದರು. ಒಳಸಂಚು ರೂಪಿಸಿ, ಸಾಕ್ಷ್ಯ ನಾಶ ಮಾಡಿರುವುದು ಎಸ್‌ಐಟಿ ತನಿಖೆ ವೇಳೆ ಪತ್ತೆಯಾಗಿತ್ತು. ಈ ಕಾರಣಕ್ಕಾಗಿ ಶ್ರೀಧರ್ ಅವರನ್ನು ಬಂಧಿಸಲಾಗಿದೆ’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಕಾರು ಹತ್ತಿಸಿ ಕೊಲೆಗೆ ಯತ್ನಿಸಿದ್ದ ಶ್ರೀಧರ್

ತಮ್ಮ ವಿರುದ್ಧ ಪ್ರಕರಣ ದಾಖಲಾಗುತ್ತಿದ್ದಂತೆಯೇ ಶ್ರೀಧರ್ ಅವರು ತಲೆಮರೆಸಿಕೊಂಡಿದ್ದರು. ಫೆಬ್ರುವರಿ 27ರಂದು ನಗರದ ಸೆಂಟ್ರಲ್ ಕಾಲೇಜು ಬಳಿ ಶ್ರೀಧರ್ ಅವರಿದ್ದ ಮಾಹಿತಿ ಪಡೆದಿದ್ದ ತನಿಖಾಧಿಕಾರಿಗಳು ಬಂಧನಕ್ಕೆ ತೆರಳಿದ್ದರು.

ಮೆಟ್ರೊ ನಿಲ್ದಾಣ ಬಳಿ ವಕೀಲರ ಜತೆಗೆ ಕಾರಿನಲ್ಲಿದ್ದ ಶ್ರೀಧರ್, ತನಿಖಾಧಿಕಾರಿಗಳನ್ನು ಕಂಡ ತಕ್ಷಣ ತಪ್ಪಿಸಿಕೊಂಡು ಪರಾರಿಯಾಗಲು ಮುಂದಾಗಿದ್ದರು. ಅವರನ್ನು ಹಿಡಿಯಲು ತನಿಖಾಧಿಕಾರಿಗಳು ಬೆನ್ನಟ್ಟಿದ್ದರು. ಕಾಫಿ ಬೋರ್ಡ್ ಸಿಗ್ನಲ್ ಬಳಿ, ಶ್ರೀಧರ್ ಅವರನ್ನು ಹಿಡಿಯಲು ಮುಂದಾದಾಗ ಎಸ್‌ಐಟಿ ಅಧಿಕಾರಿಗಳ ಮೇಲೆಯೇ ಕಾರು ಹತ್ತಿಸಿ ಪರಾರಿ ಆಗಿದ್ದರು. ಈ ಸಂಬಂಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಎಎಸ್‌ಐ ಭಾಸ್ಕರ್ ಗಾಯಗೊಂಡಿದ್ದರು. ಅಂದಿನಿಂದ ಶ್ರೀಧರ್ ತಲೆ ಮರೆಸಿಕೊಂಡಿದ್ದರು.

ಮೋದಿ- ಮುಯಿಜು ಮಾತುಕತೆ; ಹಲವು ಒಪ್ಪಂದಗಳಿಗೆ ಭಾರತ- ಮಾಲ್ದೀವ್ಸ್ ಸಹಿ

ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ನಿರ್ಧಾರ

ನವದೆಹಲಿ (ಪಿಟಿಐ): ದ್ವಿಪಕ್ಷೀಯ ಸಂಬಂಧ ಬಲಪಡಿಸುವ ಉದ್ದೇಶದಿಂದ ಭಾರತ ಮತ್ತು ಮಾಲ್ದೀವ್ಸ್ ಸೋಮವಾರ ಹಲವು ಒಪ್ಪಂದಗಳಿಗೆ ಸಹಿ ಹಾಕಿದವು. ಈ ಮೂಲಕ ದ್ವೀಪರಾಷ್ಟ್ರದ ಜತೆಗಿನ ತನ್ನ ಸ್ನೇಹ ಸಂಬಂಧ ಮುಂದುವರಿಯಲಿದೆ ಎಂದು ಭಾರತ ಪ್ರತಿಪಾದಿಸಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ಅವರು ಸಮಗ್ರ ಆರ್ಥಿಕ ಹಾಗೂ ಜಲಸಾರಿಗೆ ಸಹಕಾರಕ್ಕಾಗಿ ಹೊಸ ನೀಲನಕ್ಷೆಯೊಂದನ್ನು ಸೋಮವಾರ ಅನಾವರಣಗೊಳಿಸಿದರು. ಮಾಲ್ದೀವ್ಸ್‌ನಲ್ಲಿ ಬಂದರು, ರಸ್ತೆ, ಶಾಲೆಗಳು ಮತ್ತು ವಸತಿ ನಿರ್ಮಿಸಲು ತನ್ನ ಸಹಕಾರ ಮುಂದುವರಿಸಲು ಭಾರತ ಒಪ್ಪಿದೆ.

‘ಭಾರತ ಮತ್ತು ಮಾಲ್ದೀವ್ಸ್ ನಡುವಣ ಆರ್ಥಿಕ ಸಹಕಾರ ಮತ್ತಷ್ಟು ಬಲಪಡಿಸಲು ಮುಕ್ತ ವ್ಯಾಪಾರ ಒಪ್ಪಂದದ ಕುರಿತು ಚರ್ಚೆಯನ್ನು ಪ್ರಾರಂಭಿಸಲು ನಿರ್ಧರಿಸಲಾಗಿದೆ’ ಎಂದು ಮೋದಿ ಹೇಳಿದರು.

ಮುಯಿಜು ಅವರು ಮಂಗಳವಾರದಂದು ಆಗ್ರಾ ಮತ್ತು ಮುಂಬೈಗೆ ಹಾಗೂ ಬುಧವಾರ ಬೆಂಗಳೂರಿಗೆ ಭೇಟಿ ನೀಡಲಿದ್ದಾರೆ.


ಮಾಲ್ದೀವ್ಸ್‌ನ ನವೀಕೃತ ಹಾನಿಮಾಧೂ ವಿಮಾನ ನಿಲ್ದಾಣವನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಮೊಹಮ್ಮದ್ ಮುಯಿಜು ಅವರು ವರ್ಚುವಲ್ ಆಗಿ ಉದ್ಘಾಟಿಸಿದರು –ಎಎಫ್‌ಪಿ ಚಿತ್ರ

₹3,360 ಕೋಟಿ ಸಾಲ ನೀಡಲು ಒಪ್ಪಿಗೆ

ಮಾಲ್ದೀವ್ಸ್‌ಗೆ ಅಮೆರಿಕನ್ ಡಾಲರ್‌ನಲ್ಲಿ 40 ಕೋಟಿ (ಸುಮಾರು ₹3,360 ಕೋಟಿ) ಹಾಗೂ ಭಾರತದ ರೂಪಾಯಿಯಲ್ಲಿ 3 ಸಾವಿರ ಕೋಟಿ ಸಾಲ ನೀಡಲು ಭಾರತ ಒಪ್ಪಿಕೊಂಡಿದೆ. ದ್ವೀಪ ರಾಷ್ಟ್ರವನ್ನು ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡುವ ಉದ್ದೇಶದಿಂದ ಈ ಹೆಜ್ಜೆಯಿಡಲಾಗಿದೆ.

‘ವಿದೇಶಿ ವಿನಿಮಯಕ್ಕೆ ಸಂಬಂಧಿಸಿದಂತೆ ನಾವು ಈಗ ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಈ ಒಪ್ಪಂದ ನೆರವಾಗಲಿದೆ. ಇದಕ್ಕಾಗಿ ಭಾರತ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ’ ಎಂದು ಮುಯಿಜು ಹೇಳಿದರು.

ಬೆಂಗಳೂರಿನಲ್ಲಿ ಮಾಲ್ದೀವ್ಸ್ ಕಾನ್ಸುಲೇಟ್

- ಮಾಲ್ದೀವ್ಸ್‌ನ ಅದ್ದುನಲ್ಲಿ ಭಾರತದ ಕಾನ್ಸುಲೇಟ್ ಹಾಗೂ ಬೆಂಗಳೂರಿನಲ್ಲಿ ಮಾಲ್ದೀವ್ಸ್ ಕಾನ್ಸುಲೇಟ್ ಕಚೇರಿ ಆರಂಭಿಸುವ ಬಗ್ಗೆ ಚರ್ಚೆ ನಡೆಯಿತು.
- ಮಾಲ್ದೀವ್ಸ್‌ನ ನವೀಕೃತ ಹಾನಿಮಾಧೂ ವಿಮಾನ ನಿಲ್ದಾಣವನ್ನು ಮೋದಿ ಹಾಗೂ ಮುಯಿಜು ವರ್ಚುವಲ್ ಆಗಿ ಉದ್ಘಾಟಿಸಿದರು.
- ತಿಲಾಫುಶಿಯಲ್ಲಿ ಹೊಸ ಬಂದರು ನಿರ್ಮಾಣಕ್ಕೆ ಭಾರತದ ನೆರವು
- ಮಾಲ್ದೀವ್ಸ್ ಎಕನಾಮಿಕ್ ಗೇಟ್‌ವೇ ಯೋಜನೆಗೆ ಪರಸ್ಪರ ಸಹಭಾಗಿತ್ವಕ್ಕೆ ಒಪ್ಪಿಗೆ

ಮಂಗಳವಾರ, ಅಕ್ಟೋಬರ್ 8, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 280 | ಪುಟ 18


● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ವೃತ್ತಿಯಲ್ಲಿ ನಿಮ್ಮ ಮಾನಸಿಕ ಸ್ವಾಸ್ಥ್ಯ



ಅನುಭವ ಮಂಟಪ
ಸದಾಶಿವ ಆಯೋಗದ ವರದಿ ಮಾನದಂಡವಾಗದು

'ಯಾರೂ ಕಿಂಗ್ ಮೇಕರ್ ಆಗಲು ಸಾಧ್ಯವಿಲ್ಲ' 5

ಆ್ಯಂಬ್ರೋಸ್, ರುವ್ಕನ್‌ಗೆ ವೈದ್ಯಕೀಯ ನೊಬೆಲ್ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,050	24,795	₹79,770 (ಬೆಂಗಳೂರು)	₹98,200 (ಬೆಂಗಳೂರು)	84.00

ಒಬಿಸಿ ನಾಯಕರ ಜತೆ ಮುಖ್ಯಮಂತ್ರಿ ಸಭೆ ● ಪರ–ವಿರೋಧದ ನಡುವೆಯೇ ಸರ್ಕಾರದ ಮುಂದಡಿ

18ಕ್ಕೆ ಜಾತಿಗಣತಿ ವರದಿ ಭವಿಷ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗ ಗಳ ಆಯೋಗ 2015ರಲ್ಲಿ ನಡೆಸಿದ್ದ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ'ಯ (ಜಾತಿ ಗಣತಿ) ವರದಿಯ ಕುರಿತು ಅ. 18ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ.

ಹಿಂದುಳಿದ ಸಮುದಾಯದ ಸಚಿವರು, ಶಾಸಕರು, ಮುಖಂಡರ ಜೊತೆ ಸೋಮವಾರ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಗೆ ಒಪ್ಪಿಗೆ ನೀಡುವಂತೆ ಒತ್ತಾಯಿಸಿ ವಿರೋಧ ಪಕ್ಷಗಳ ನಾಯಕರೂ ಸೇರಿದಂತೆ ಹಿಂದುಳಿದ ಸಮುದಾಯದ ಸುಮಾರು 30 ಶಾಸಕರು ಮನವಿ ಸಲ್ಲಿಸಿದ್ದಾರೆ. ವರದಿಯ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳುವುದಾಗಿ ನಾನು ಈ ಹಿಂದೆಯೇ ಹೇಳಿದ್ದೆ' ಎಂದರು.

'ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ನಾನು ಮುಖ್ಯಮಂತ್ರಿ ಆಗಿದ್ದಾಗ ಈ ಸಮೀಕ್ಷೆ ನಡೆದಿತ್ತು. ಬಹಳ ಸಮಯ ತೆಗೆದುಕೊಂಡು ಎಚ್. ಕಾಂತರಾಜ ಅಧ್ಯಕ್ಷತೆ ಆಯೋಗ ಈ ಸಮೀಕ್ಷೆ ನಡೆಸಿದೆ. ರಾಜ್ಯದ ಮನೆ ಮನೆಗಳಿಗೆ ಭೇಟಿ ನೀಡಿ ಸಮೀಕ್ಷೆ ಮಾಡಿರುವುದಾಗಿ ಕಾಂತರಾಜ ತಿಳಿಸಿದ್ದಾರೆ. ಹಿಂದೆ ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸಮೀಕ್ಷೆಯ ವರದಿ ಪೂರ್ಣಗೊಂಡಿರಲಿಲ್ಲ. ಹೀಗಾಗಿ, ಆಗ ವರದಿ ಸ್ವೀಕರಿಸಲು ಸಾಧ್ಯ ಆಗಿರಲಿಲ್ಲ. ನಂತರ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿಯವರಿಗೆ ವರದಿ ಸಲ್ಲಿಸಲು ಕಾಂತರಾಜ ಸಿದ್ಧತೆ ನಡೆಸಿದ್ದರು. ಆದರೆ, ಅವರು ವರದಿ ಸ್ವೀಕರಿಸಲು ಒಪ್ಪಿರಲಿಲ್ಲ. ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಕೂಡಾ ವರದಿಯನ್ನು ಸ್ವೀಕರಿಸಲಿಲ್ಲ' ಎಂದರು.

'ಕಾಂತರಾಜ ಅವರ ಅವಧಿ ಪೂರ್ಣಗೊಂಡ ಬಳಿಕ ಜಯಪ್ರಕಾಶ್ ಹೆಗ್ಡೆ ಆಯೋಗದ ಅಧ್ಯಕ್ಷರಾದರು. ಅವರ ಮನವಿಯಂತೆ ವರದಿಯನ್ನು ಸಲ್ಲಿಸಲು ಮೂರು ತಿಂಗಳ ಕಾಲಾವಕಾಶ ನೀಡಲಾಗಿತ್ತು' ಎಂದು ವಿವರಿಸಿದರು.

8ನೇ ಪುಟ ನೋಡಿ

ವರದಿಯನ್ನು ಒಪ್ಪಲು ಪಟ್ಟು

ಜಾತಿ ಗಣತಿ ವರದಿ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿಯೇ ಮಂಡಿಸಬೇಕು ಎಂದು ಹಿಂದುಳಿದ ವರ್ಗಗಳ ನಾಯಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದರು.

'ನೀವು ಸಾಮಾಜಿಕ ನ್ಯಾಯದ ಪರವಾಗಿದ್ದೀರಿ. ನಿಮ್ಮಂಥ ನಾಯಕರೇ ವರದಿಗೆ ಒಪ್ಪಿಗೆ ಕೊಡದಿದ್ದರೆ ಇನ್ಯಾರು ಕೊಡುತ್ತಾರೆ? ದೃಢನಿರ್ಧಾರ ತೆಗೆದುಕೊಳ್ಳಿ. ಪಕ್ಷ ಅಧಿಕಾರಕ್ಕೆ ಬಂದರೆ ಇಡೀ ದೇಶದಲ್ಲಿ ಜಾತಿಗಣತಿ ಮಾಡುತ್ತೇವೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲೂ ಈ ವಿಚಾರವಿದೆ. ಹೀಗಾಗಿ, ವರದಿಯನ್ನು ಒಪ್ಪಲೇಬೇಕು ಎಂದು ಕೆಪಿಸಿಸಿ ಉಪಾಧ್ಯಕ್ಷ ವಿ.ಆರ್. ಸುದರ್ಶನ್ ಸೇರಿದಂತೆ ಕಾಂಗ್ರೆಸ್‌ನ ಹಿಂದುಳಿದ ವರ್ಗಗಳ ನಾಯಕರು ಸಭೆಯಲ್ಲೇ ಪಟ್ಟು ಹಿಡಿದರು.


'ನಾಲ್ವಡಿ ಕೃಷ್ಣ ದೇವರಾಜ ಒಡೆಯರ್ ಸ್ವಾತಂತ್ರ್ಯ ಪೂರ್ವದಲ್ಲೇ ಸಮೀಕ್ಷೆ ನಡೆಸಿದ್ದರು. ಕಾಲಮಿತಿ ನಿಗದಿಪಡಿಸಿ ನಂತರ ಬಿಡುಗಡೆ ಮಾಡಿದರು. ಈಗ ನೀವು ಮೀನಮೇಷ ಎಣಿಸದೆ ಒಪ್ಪಿಗೆ ನೀಡಬೇಕು' ಎಂದು ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಪ್ರತಿಪಾದಿಸಿದರು.

ಇದು ಕೇವಲ ಹಿಂದುಳಿದ ವರ್ಗಗಳ ಜಾತಿ ಸಮೀಕ್ಷೆ ಅಲ್ಲ. ರಾಜ್ಯದ ಏಳು ಕೋಟಿ ಕನ್ನಡಿಗರ ಸಮೀಕ್ಷೆ. ದೇಶದಲ್ಲಿ ಇಂತಹ ಸಮೀಕ್ಷೆ ನಡೆಸಿದ ಪ್ರಥಮ ರಾಜ್ಯ ಕರ್ನಾಟಕ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಕಾಂಗ್ರೆಸ್ ನಾಯಕರಿಗೆ ತಾಕತ್ತು ಇದ್ದರೆ ವಿಧಾನಸಭೆ ವಿಸರ್ಜನೆ ಮಾಡಿ, ಜಾತಿ ಜನಗಣತಿಯನ್ನು ಮುಂದಿಟ್ಟುಕೊಂಡು ಮಧ್ಯಂತರ ಚುನಾವಣೆ ಎದುರಿಸಲಿ
ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಮುಖ್ಯಮಂತ್ರಿಗೆ ಜಾತಿಗಣತಿ ವಿಚಾರದಲ್ಲಿ ಪ್ರಾಮಾಣಿಕತೆ ಇದ್ದಿದ್ದರೆ, ಹಿಂದಿನ ಅವಧಿಯಲ್ಲೇ ಈ ವರದಿಗೆ ಒಪ್ಪಿಗೆ ನೀಡಲು ಹಿಂದೇಟು ಹಾಕುತ್ತಿರಲಿಲ್ಲ. ಅವರಿಗೆ ಪ್ರಾಮಾಣಿಕತೆಯ ಕೊರತೆಯಿದೆ
ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಜಾತಿ ಗಣತಿಗೆ ಹಿಂದಿನಿಂದಲೂ ವೀರಶೈವ ಲಿಂಗಾಯತ ಮಹಾ ಸಭಾದ ವಿರೋಧ ಇದೆ. ಈಗಲೂ ಅದೇ ನಿಲುವಿಗೆ ಬದ್ಧ
ಶಾಮನೂರು ಶಿವಶಂಕರಪ್ಪ
ಶಾಸಕ, ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ



ಚಿನಕುರುಳಿ

ಪ್ರಕಾಶ್ ಶೆಟ್ಟಿ



ಶಿವಮೂರ್ತಿ ಶರಣರ ಬಿಡುಗಡೆ

ಪ್ರಜಾವಾಣಿ ವಾರ್ತೆ



ಶಿವಮೂರ್ತಿ ಶರಣರು

ಚಿತ್ರದುರ್ಗ: ಪೋಕ್ಸೊ ಪ್ರಕರಣದ ಸಂತ್ರಸ್ತೆಯರು ಹಾಗೂ ಪ್ರಮುಖ ಸಾಕ್ಷಿಗಳ ವಿಚಾರಣೆ ಪ್ರಕ್ರಿಯೆ ಪೂರ್ಣಗೊಂಡಿದ್ದರಿಂದ, ಪ್ರಮುಖ ಆರೋಪಿಯಾದ ಮುರುಘಾ ಮಠದ ಶಿವಮೂರ್ತಿ ಶರಣರು ಸೋಮವಾರ ಇಲ್ಲಿನ ಜಿಲ್ಲಾ ಕಾರಾಗೃಹದಿಂದ ಬಿಡುಗಡೆಯಾದರು.

'ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ, ಇಬ್ಬರು ಸಂತ್ರಸ್ತೆಯರು ಸೇರಿದಂತೆ ಒಟ್ಟು 13 ಸಾಕ್ಷಿಗಳ ವಿಚಾರಣೆ ಕೊನೆಗೊಂಡಿದೆ. ಹೀಗಾಗಿ ಶರಣರ ಜಾಮೀನಿಗೆ ಸುಪ್ರೀಂ ಕೋರ್ಟ್ ನೀಡಿದ್ದ ತಡೆ ತೆರವುಗೊಂಡಿದೆ' ಎಂದು 2ನೇ ಜಿಲ್ಲಾ ಹೆಚ್ಚುವರಿ ಮತ್ತು ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ ಚನ್ನಬಸಪ್ಪ ಹಡಪದ ಆದೇಶಿಸಿದರು. ಸೋಮವಾರ ಸಂಜೆ ಅಗತ್ಯ ಪ್ರಕ್ರಿಯೆ ಪೂರ್ಣಗೊಳಿಸಿದ ಶರಣರು ಕಾರಾಗೃಹದಿಂದ ಹೊರಬಂದರು.

ಪ್ರಕರಣ ಸಂಬಂಧ 2023, ನ.8ರಂದು ಹೈಕೋರ್ಟ್, ಶರಣರಿಗೆ ಷರತ್ತುಬದ್ಧ ಜಾಮೀನು ನೀಡಿತ್ತು. ನಂತರ ಪೋಕ್ಸೊದ 2ನೇ ಪ್ರಕರಣ ಸಂಬಂಧ ಅವರು ಮತ್ತೆ ಬಂಧನಕ್ಕೊಳಗಾಗಿದ್ದರು. ಜಾಮೀನು ಪರಿಗಣಿಸಿದ್ದ ಹೈಕೋರ್ಟ್ ನ.20ರಂದು ಅವರ ಬಿಡುಗಡೆಗೆ ಆದೇಶ ನೀಡಿತ್ತು.

8ನೇ ಪುಟ ನೋಡಿ

ಇಂದು ಮತ ಎಣಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹರಿಯಾಣ, ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆಯ ಮತ ಎಣಿಕೆ ಮಂಗಳವಾರ ನಡೆಯಲಿದೆ. ಇಲ್ಲಿ ಹೊರಹೊಮ್ಮುವ ಫಲಿತಾಂಶವು ಮುಂಬರುವ ಮಹಾರಾಷ್ಟ್ರ ಹಾಗೂ ಜಾರ್ಖಂಡ್ ವಿಧಾನಸಭಾ ಚುನಾವಣೆಗಳಿಗೆ ದಿಕ್ಸೂಚಿಯಾಗುವ ಸಾಧ್ಯತೆ ಇದೆ.

ಹರಿಯಾಣದಲ್ಲಿ ದಶಕದ ಬಳಿಕ ಅಧಿಕಾರದ ಗದ್ದುಗೆ ಏರುವ ಆಸೆಯಲ್ಲಿ ಕಾಂಗ್ರೆಸ್ ಪಾಳಯ ಇದೆ. ಕಮಲ ಪಾಳಯವು ಸತತ ಮೂರನೇ ಅವಧಿಗೆ ಸರ್ಕಾರ ರಚಿಸುವ ವಿಶ್ವಾಸದಲ್ಲಿದೆ. ಹರಿಯಾಣದಲ್ಲಿ ಕಾಂಗ್ರೆಸ್ ಬಹುಮತ ಪಡೆಯಲಿದೆ ಎಂದು ಹೆಚ್ಚಿನ ಮತಗಟ್ಟೆ ಸಮೀಕ್ಷೆಗಳು ಭವಿಷ್ಯ ನುಡಿದಿವೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಕಾಂಗ್ರೆಸ್ ಹಾಗೂ ನ್ಯಾಷನಲ್ ಕಾನ್ಫರೆನ್ಸ್ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸುತ್ತಿದ್ದು, ಸರ್ಕಾರ ರಚನೆಯ ಭರವಸೆಯಲ್ಲಿವೆ. ರಾಜ್ಯದಲ್ಲಿ ದಶಕದ ನಂತರ ನಡೆದ ಚುನಾವಣೆಯಲ್ಲಿ ಬಿಜೆಪಿ ತನ್ನ ನೇತೃತ್ವದ ಸರ್ಕಾರ ರಚಿಸುವ ನಿರೀಕ್ಷೆಯಲ್ಲಿದೆ. ರಾಜ್ಯದಲ್ಲಿ ಯಾವುದೇ ಪಕ್ಷಕ್ಕೂ ಬಹುಮತ ಸಿಗುವುದಿಲ್ಲ. ಆದರೆ, ಕಾಂಗ್ರೆಸ್–ನ್ಯಾಷನಲ್ ಕಾನ್ಫರೆನ್ಸ್ ಮೈತ್ರಿಕೂಟ ಹೆಚ್ಚಿನ ಸ್ಥಾನಗಳನ್ನು ಗಳಿಸಲಿದೆ ಎಂದು ಮತಗಟ್ಟೆ ಸಮೀಕ್ಷೆಗಳು ಹೇಳಿವೆ.

9ನೇ ಪುಟ ನೋಡಿ

‘ಇ–ಖಾತಾಗೆ ಪ್ರತ್ಯೇಕ ಕೇಂದ್ರ’

ಆಸ್ತಿ ಮಾರಾಟ ಮಾಡುವವರಿಗೆ ತುರ್ತು ಸಹಾಯಕ್ಕೆ ‘ಹೆಲ್ಪ್ ಡೆಸ್ಕ್’: ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮಳೆ ನೀರು ಹೊಸ ಕಾಲುವೆ ನಿರ್ಮಿಸಲು ಯೋಚನೆ
- ಒಳಚರಂಡಿ ನೀರು ಹರಿದು ಹಲವೆಡೆ ಸಮಸ್ಯೆ
- ‘ಇ–ಖಾತಾ ಕರಡು ಆನ್‌ಲೈನ್‌ನಲ್ಲಿ ಪ್ರಕಟ’

ಬೆಂಗಳೂರು: ‘ಆಸ್ತಿ ಮಾರಾಟಕ್ಕಾಗಿ ತುರ್ತಾಗಿ ಇ–ಖಾತಾ ಅಗತ್ಯವಿರುವವರಿಗಾಗಿ ವಾರ್ಡ್‌ಗಳಲ್ಲಿ ಪ್ರತ್ಯೇಕ ಸಹಾಯ ಕೇಂದ್ರ ತೆರೆಯಲಾಗಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಹೊಸ ವ್ಯವಸ್ಥೆ ಹಾಗೂ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಾಗ ಕೆಲವು ದಿನ ತಾಂತ್ರಿಕ ಸಮಸ್ಯೆಗಳಿರುತ್ತವೆ. ಆಸ್ತಿ ಮಾರಾಟ ಮಾಡುವವರಿಗೆ ಇ–ಖಾತಾ ಸಿಗುತ್ತಿಲ್ಲ ಎಂಬ ದೂರುಗಳಿವೆ. ಆದ್ದರಿಂದ ಅವರಿಗಾಗಿ ಪ್ರತ್ಯೇಕ ಸಹಾಯ ಕೇಂದ್ರ ತೆರೆಯಲಾಗಿದ್ದು, ಕಂದಾಯ ಅಧಿಕಾರಿಗೆ ಎಲ್ಲ ರೀತಿಯ ದಾಖಲೆಗಳನ್ನು ನೀಡಿ ಇ–ಖಾತಾ ಪಡೆದುಕೊಳ್ಳಬಹುದು’ ಎಂದು ಸುದ್ದಿಗಾರರಿಗೆ ಸೋಮವಾರ ಮಾಹಿತಿ ನೀಡಿದರು.

‘ಇ–ಖಾತಾದ ಕರಡನ್ನು ಆನ್‌ಲೈನ್‌ನಲ್ಲಿ ಪ್ರಕಟಿಸಲಾಗಿದೆ. ಯಾವ ಆಸ್ತಿಗೆ ಸಂಬಂಧಿಸಿದ ಇ–ಖಾತಾ ಸಿಗುತ್ತಿಲ್ಲ ಎಂಬುದನ್ನು ನಮ್ಮ ಅಧಿಕಾರಿಗಳ ಗಮನಕ್ಕೆ ತಂದರೆ ಸರಿಪಡಿಸಲಾಗುತ್ತದೆ. ದಾಖಲೆಗಳನ್ನು ಅಪ್‌ಲೋಡ್ ಮಾಡಲು ಆಸ್ತಿ ಮಾಲೀಕರಿಗೇ ಅವಕಾಶ ನೀಡಲಾಗಿದೆ. ಅವರಿಗೆ ಸಾಧ್ಯವಾಗದಿದ್ದರೆ, ಆಸ್ತಿ ಅಥವಾ ಕಟ್ಟಡಗಳ ಚಿತ್ರ, ಮಾಲೀಕರ ಭಾವಚಿತ್ರ ಹಾಗೂ ಜಿಪಿಎಸ್ ಮಾಹಿತಿಯೊಂದಿಗೆ ದಾಖಲೆಗಳನ್ನು ಪಾಲಿಕೆ ಸಿಬ್ಬಂದಿಯೇ ಸಂಗ್ರಹಿಸಿ ಮುಂದಿನ ದಿನಗಳಲ್ಲಿ ಅಪ್‌ಲೋಡ್ ಮಾಡಲಿದ್ದಾರೆ’ ಎಂದು ಹೇಳಿದರು.


ತುಷಾರ್ ಗಿರಿನಾಥ್

‘ಆಸ್ತಿಯ ಕ್ರಯಪತ್ರ, ಕಳೆದ ಕ್ರಯಪತ್ರದ ಅವಧಿಯಿಂದ ಈವರೆಗಿನ ಋಣಭಾರ ಪ್ರಮಾಣಪತ್ರ (ಇಸಿ), ಈಗಿರುವ ಖಾತಾ, ಆಧಾರ್, ಆಸ್ತಿ ತೆರಿಗೆ ಪಾವತಿಯ ರಸೀದಿಗಳನ್ನು ನೀಡಬೇಕು’ ಎಂದರು.

‘ಆಸ್ತಿ ಮಾರಾಟವಾದ ಮೇಲೆ ಕೆಲವರು ಖಾತಾವನ್ನು ಬದಲಿಸಿ ಕೊಂಡಿಲ್ಲ. ಹೀಗಾಗಿ, ಕ್ರಯಪತ್ರ ಹಾಗೂ ಇಸಿಗಳು ಅಗತ್ಯ. ‘ಮ್ಯಾನ್ಯುಯಲ್ ಖಾತಾ’ ಇನ್ನೂ ರದ್ದಾಗಿಲ್ಲ’ ಎಂದು ಅವರು ಮಾಹಿತಿ ನೀಡಿದರು.

‘ಗೊಂದಲಕ್ಕೆ ವಾರದಲ್ಲಿ ತೆರೆ’

‘ಇ–ಖಾತಾಗೆ ಸಂಬಂಧಿಸಿದಂತೆ ಕೆಲವು ಗೊಂದಲಗಳಿದ್ದು, ಅವುಗಳನ್ನು ಒಂದು ವಾರದಲ್ಲಿ ಪರಿಹರಿಸಲಾಗುವುದು. ಇ–ಖಾತಾ ಪಡೆಯಲು ಯಾವುದೇ ಗಡುವು ಇಲ್ಲ. ನಾಗರಿಕರು ಊಹಾಪೋಹಗಳಿಗೆ ಕಿವಿಗೊಡದೆ, ಆತಂಕಗೊಳ್ಳದೆ ಇ–ಖಾತಾ ಮಾಡಿಸಿಕೊಳ್ಳಬಹುದು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

‘ಇ–ಖಾತಾ ಮಾಡಿಸಿಕೊಡುವುದಾಗಿ ಸುಲಿಗೆ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ನಾಗರಿಕರು ಅಂತಹವರನ್ನು ನಂಬಬಾರದು, ಯಾರಿಗೂ ಹಣ ಕೊಡಬಾರದು. ಪಾಲಿಕೆಯ ಅಧಿಕಾರಿಗಳನ್ನು ಭೇಟಿ ಮಾಡಿ ಇ–ಖಾತಾ ಪಡೆದುಕೊಳ್ಳಬಹುದು. ಮಧ್ಯವರ್ತಿಗಳ ಹಾವಳಿ, ನಕಲಿ ನೋಂದಣಿಗಳನ್ನು ತಡೆಯಲು, ಆಸ್ತಿ ಮಾಲೀಕತ್ವವನ್ನು ರಕ್ಷಿಸಲು ಇ–ಖಾತಾ ವ್ಯವಸ್ಥೆ ಶಾಶ್ವತ ಪರಿಹಾರವಾಗಿದೆ’ ಎಂದರು.

ರಸ್ತೆ ಗುಂಡಿ: ನಿತ್ಯ 800 ದೂರು

‘ರಸ್ತೆ ಗುಂಡಿ ಗಳನ್ನು ಮುಚ್ಚುವ ಕಾರ್ಯ ನಿತ್ಯವೂ ನಡೆಯುತ್ತಿದೆ. ಮೂರು ದಿನಗಳಿಂದ ಮಳೆಯಾಗುತ್ತಿರುವುದರಿಂದ ಹಿನ್ನಡೆ ಯಾಗಿದೆ. ಪ್ರತಿದಿನ 800ಕ್ಕೂ ಹೆಚ್ಚು ಹೊಸ ಗುಂಡಿಗಳ ದೂರುಗಳು ಬರುತ್ತಿವೆ. ಎಲ್ಲವನ್ನೂ ಮುಚ್ಚುತ್ತೇವೆ’ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

‘ಮಹದೇವಪುರದಲ್ಲಿ ರಸ್ತೆ ಗುಂಡಿಯಿಂದ ಸಂಚಾರ ದಟ್ಟಣೆಯಾಗಿಲ್ಲ. ಮಳೆಯಿಂದಾಗಿ ಅಲ್ಲಿ ಸಮಸ್ಯೆಯಾಗಿದೆ. ಯಲಹಂಕದಲ್ಲಿ ಮಳೆ ನೀರು ನುಗ್ಗಿ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ತೊಂದರೆಯಾಗಿದ್ದು, ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲು ವಲಯ ಆಯುಕ್ತರಿಗೆ ಸೂಚಿಸಲಾಗಿದೆ’ ಎಂದರು.

‘ಒಳಚರಂಡಿ ನೀರು ನುಗ್ಗಿರುವುದರಿಂದ ಬಸವೇಶ್ವರನಗರ, ವಿಜಯನಗರದಲ್ಲಿ ಸಮಸ್ಯೆಯಾಗಿದೆ. ನಗರದ ಹೊರ ಭಾಗದಲ್ಲಿ ಹಿಂದೆ ಕೃಷಿ ಉದ್ದೇಶಕ್ಕೆ ನೀರು ಪೂರೈಕೆಗಾಗಿ ಕಾಲುವೆಗಳನ್ನು ನಿರ್ಮಿಸಲಾಗಿತ್ತು. ಅವುಗಳ ವಿಸ್ತೀರ್ಣದ ಮಾಹಿತಿ ಇಲ್ಲ. ಯೋಜನೆ ಇಲ್ಲದೆ ಅಭಿವೃದ್ಧಿಯಾಗಿರುವುದರಿಂದ ಸಮಸ್ಯೆಯಾಗಿದೆ. ಆ ಪ್ರದೇಶ ಗಳಲ್ಲಿ ಹೊಸದಾಗಿ ಕಾಲುವೆಗಳನ್ನು ನಿರ್ಮಿಸಲು ಯೋಚಿಸಲಾಗುತ್ತಿದೆ’ ಎಂದು ತಿಳಿಸಿದರು.

‘ಹೈ ಲೈಫ್’ ಪ್ರದರ್ಶನ ಇಂದಿನಿಂದ ಶುರು

ಬೆಂಗಳೂರು: ದಸರಾ– ದೀಪಾವಳಿ ಹಬ್ಬದ ಅಂಗವಾಗಿ ‘ಹೈ ಲೈಫ್’ ಪ್ರದರ್ಶನ ನಗರದ ಲಲಿತ್ ಅಶೋಕದಲ್ಲಿ ಅಕ್ಟೋಬರ್ 8ರಿಂದ 10ರವರೆಗೆ ನಡೆಯಲಿದೆ.

ಐಷಾರಾಮಿ ಮತ್ತು ಫ್ಯಾಷನ್ ಉತ್ಪನ್ನಗಳನ್ನು ಹಬ್ಬದ ಸಂಗ್ರಹದಲ್ಲಿ ಪ್ರದರ್ಶಿಸಲಾಗಿದ್ದು, ಡಿಸೈನರ್ ವೇರ್, ವಧುವಿನ ಉಡುಪುಗಳು ಹಾಗೂ ಹಬ್ಬದ ಸಂದರ್ಭಕ್ಕೆ ಅತ್ಯಾಧುನಿಕ, ವಿಶೇಷ ವಿನ್ಯಾಸಗಳು ಲಭ್ಯವಿವೆ. ಕಸೂತಿ ಉಡುಪುಗಳು ಹಬ್ಬದ ಸಂಭ್ರಮವನ್ನು ಆಕರ್ಷಗೊಳಿಸಲಿವೆ. ದೀಪಾವಳಿ, ಮದುವೆ ಸಂಭ್ರಮಗಳಿಗೆ ಸೂಕ್ತವೆನಿಸುವ ಉಡುಪುಗಳು, ಆಭರಣಗಳ ಉತ್ಕೃಷ್ಟ ಸಂಗ್ರಹಗಳನ್ನು ಹೊಂದಿದ್ದು, ಫ್ಯಾಷನ್, ಜೀವನಶೈಲಿ, ಕರಕುಶಲ ಉತ್ಪನ್ನಗಳು ಪ್ರತಿ ಆಚರಣೆಯನ್ನು ದುಪ್ಪಟ್ಟುಗೊಳಿಸಲಿವೆ ಎಂದು ಪ್ರಕಟಣೆ ತಿಳಿಸಿದೆ.



ನಗರದ ಲಲಿತ್ ಅಶೋಕದಲ್ಲಿ ಆಯೋಜಿಸಲಾಗಿರುವ ‘ಹೈ ಲೈಫ್’ ಪ್ರದರ್ಶನ

ಸುದ್ದಿ 2 ನಿಮಿಷ

ಏಕಕಾಲಕ್ಕೆ ಚುನಾವಣೆ: ನಾಳೆ ರಾಜ್ಯ ಮಟ್ಟದ ವಿಚಾರ ಸಂಕಿರಣ

ಬೆಂಗಳೂರು: ‘ಒಂದು ದೇಶ, ಒಂದು ಚುನಾವಣೆ ನಿರಂಕುಶ ಪ್ರಜಾಪ್ರಭುತ್ವದ ಭಾರತ’ ಕುರಿತು ಅ.9 ರಂದು ರಾಜ್ಯ ಮಟ್ಟದ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ದಲಿತ ಸಂಘರ್ಷ ಸಮಿತಿ ಮುಖಂಡ ಇಂದೂಧರ ಹೊನ್ನಾಪುರ ತಿಳಿಸಿದರು.

ನಗರದ ಕೊಂಡಜ್ಜಿ ಬಸಪ್ಪ ಮೆಮೋರಿಯಲ್ ಸಭಾಂಗಣದಲ್ಲಿ ಅಂದು ಬೆಳಿಗ್ಗೆ 11 ಗಂಟೆಗೆ ವಿಚಾರ ಸಂಕಿರಣವನ್ನು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಉದ್ಘಾಟಿಸಲಿದ್ದು, ಸಮಿತಿಯ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು ಅಧ್ಯಕ್ಷತೆ ವಹಿಸುವರು. ಲೇಖಕ ಎ.ನಾರಾಯಣ ಅವರು ವಿಷಯ ಮಂಡಿಸಲಿದ್ದಾರೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.



‘ಪ್ರಧಾನಿ ನರೇಂದ್ರ ಮೋದಿ ಅವರು ಸರ್ವಾಧಿಕಾರಿಯಂತೆ ವರ್ತಿಸುತ್ತಾ, ಒಂದು ದೇಶ, ಒಂದು ಸಂಸ್ಕೃತಿ, ಒಂದು ಭಾಷೆ, ಒಂದು ಪಕ್ಷ, ಒಬ್ಬ ನಾಯಕ, ಒಂದು ಚುನಾವಣೆ ಎಂದು ಮಾತನಾಡುತ್ತಿದ್ದಾರೆ. ಇದು ಆರ್‌ಎಸ್‌ಎಸ್, ಬಿಜೆಪಿ ಕಾರ್ಯಸೂಚಿ ಆಗಿದೆ’ ಎಂದು ಆರೋಪಿಸಿದರು.

ಗೋಷ್ಠಿಯಲ್ಲಿ ಸಮಿತಿ ಮುಖಂಡರಾದ ಶಿವಲಿಂಗಯ್ಯ, ಕೃಷ್ಣಮೂರ್ತಿ, ಎನ್.ವೆಂಕಟೇಶ್ ಇದ್ದರು.

‘ರಸ್ತೆ ಗುಂಡಿ ಮುಚ್ಚುವ ಹೆಸರಲ್ಲಿ ಹಣ ಲೂಟಿ’

ಬೆಂಗಳೂರು: ‘ಮೂರು ವರ್ಷಗಳಲ್ಲಿ ₹7,300 ಕೋಟಿ ಖರ್ಚು ಮಾಡಿದ್ದರೂ, ಬಿಬಿಎಂಪಿ ವ್ಯಾಪ್ತಿಯಲ್ಲಿ ಪರಿಪೂರ್ಣವಾಗಿ ಗುಂಡಿಗಳನ್ನು ಮುಚ್ಚುವ ಕೆಲಸವಾಗಿಲ್ಲ’ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ ಆರೋಪಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಸ್ತೆ ಗುಂಡಿಗಳನ್ನು ಮುಚ್ಚುವ ಹೆಸರಲ್ಲಿ ಹಣ ಲೂಟಿ ಮಾಡಲಾಗಿದೆ. ಬೆಂಗಳೂರಿನ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆ ಗುಂಡಿಗಳು ಇರುವ ಕಡೆ ಆಮ್ ಆದ್ಮಿ ಪಕ್ಷದಿಂದ ಜನಾಂದೋಲನ ನಡೆಸಲು ನಿರ್ಧರಿಸಲಾಗಿದೆ’ ಎಂದು ತಿಳಿಸಿದರು.

‘ನ್ಯಾಯಾಲಯ ಸೂಚಿಸಿದರೂ ಸರ್ಕಾರ ಬಿಬಿಎಂಪಿಗೆ ಚುನಾವಣೆ ನಡೆಸಲು ಆಸಕ್ತಿ ತೋರುತ್ತಿಲ್ಲ. ಪಾಲಿಕೆಗೆ ಚುನಾಯಿತ ಸದಸ್ಯರು ಇಲ್ಲದೆ ಜನರ ಸಮಸ್ಯೆ ಕೇಳುವವರೇ ಇಲ್ಲದಂತಾಗಿದೆ. ಶಾಸಕರೇ ಬಿಬಿಎಂಪಿ ಚುನಾವಣೆ ನಡೆಸಲು ಅಡ್ಡಿಯಾಗಿದ್ದಾರೆ. ಸರ್ಕಾರ ತಕ್ಷಣ ಬಿಬಿಎಂಪಿ ಚುನಾವಣೆ ನಡೆಸಲು ಕ್ರಮ ತೆಗೆದುಕೊಳ್ಳಬೇಕು’ ಎಂದು ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ.ಸದಂ ಒತ್ತಾಯಿಸಿದರು.

ನಗರ ಘಟಕದ ಉಪಾಧ್ಯಕ್ಷ ಅಶೋಕ್ ಮೃತ್ಯುಂಜಯ, ಯುವ ಘಟಕದ ಅಧ್ಯಕ್ಷ ಉಮೇಶ್ ಪಿಳ್ಳೆಗೌಡ ಹಾಗೂ ಆಟೊ ಘಟಕದ ಅಧ್ಯಕ್ಷ ಅನಿಲ್ ಕುಮಾರ್ ಹಾಜರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ವನ್ಯಜೀವಿ ಮಂಡಳಿ ಸಭೆ ಒಪ್ಪಿಗೆ

ಹೆಸರಘಟ್ಟ ಸಂರಕ್ಷಿತ ಹುಲ್ಲುಗಾವಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದ ಹೆಸರಘಟ್ಟ ಹುಲ್ಲುಗಾವಲು ಪ್ರದೇಶವನ್ನು 'ಗ್ರೇಟರ್ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು ಪ್ರದೇಶ' ಎಂದು ಘೋಷಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ರಾಜ್ಯ ವನ್ಯಜೀವಿ ಮಂಡಳಿ ಸಭೆ ಒಪ್ಪಿಗೆ ನೀಡಿದೆ.

ಸಭೆಯ ಬಳಿಕ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

'ಹೆಸರಘಟ್ಟವನ್ನು ಸಂರಕ್ಷಿತ ಹುಲ್ಲು ಗಾವಲು ಎಂದು ಘೋಷಿಸಬೇಕು ಎಂಬುದು ಬಹು ದಿನಗಳ ಬೇಡಿಕೆ ಯಾಗಿತ್ತು. ಈ ಬಗ್ಗೆ ಆಂದೋಲನವೂ ನಡೆದಿತ್ತು. ಪರಿಸರ ಸಂರಕ್ಷಣೆಗೆ ಶ್ರಮಿಸುತ್ತಿರುವ ಸರ್ಕಾರ ಈ ಮಹತ್ವದ ತೀರ್ಮಾನ ಕೈಗೊಂಡಿದೆ' ಎಂದರು.

'2021ರ ಜನವರಿ 19 ರಂದು ನಡೆದಿದ್ದ 15ನೇ ರಾಜ್ಯ ವನ್ಯಜೀವಿ ಮಂಡಳಿಯ ಸಭೆಯಲ್ಲಿ ಈ ಪ್ರಸ್ತಾವವನ್ನು ತಿರಸ್ಕರಿಸಲಾಗಿತ್ತು. ರಾಜ್ಯ ಹೈಕೋರ್ಟ್ ಈ ಕುರಿತು ಪುನರ್ ನಿರ್ಣಯ ಕೈಗೊಳ್ಳುವಂತೆಯೂ ಸೂಚಿಸಿತ್ತು. ಬೆಂಗಳೂರು ಕಾಂಕ್ರೀಟ್ ಕಾಡಾಗಿ ಮಾತ್ರ ಬೆಳೆಯದೆ, ಹಚ್ಚ ಹಸುರಿನ ತಾಣವಾಗಿಯೂ ಉಳಿಯಬೇಕು ಎಂಬ ಮಹತ್ವದ ಉದ್ದೇಶದಿಂದ ನಮ್ಮ ಸರ್ಕಾರ ಈ ನಿರ್ಧಾರ ಕೈಗೊಂಡಿದೆ' ಎಂದರು.

'ಹೆಸರಘಟ್ಟ ಹುಲ್ಲುಗಾವಲಿನ 356 ಎಕರೆ, ಬೈರಾಪುರ ಕೆರೆಯ 383 ಎಕರೆ, ಬ್ಯಾತ ಕೆರೆಯ 165 ಎಕರೆ, ಹೆಸರಘಟ್ಟ ಕೆರೆಯ 1,356 ಎಕರೆ ಮತ್ತು ಪಶುಸಂಗೋಪನಾ ಇಲಾಖೆಯ ಸ್ವಾಧೀನದಲ್ಲಿರುವ 2,750 ಎಕರೆ ಸೇರಿ ಒಟ್ಟು 5,010 ಎಕರೆ ಪ್ರದೇಶವನ್ನು ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ಸೆಕ್ಷನ್ 36 ಎ ಪ್ರಕಾರ ಗ್ರೇಟರ್ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು ಪ್ರದೇಶವನ್ನಾಗಿ ಘೋಷಿಸಲು ಸಭೆ ಸಮ್ಮತಿಸಿದೆ' ಎಂದು ವಿವರಿಸಿದರು.

'1,912 ಎಕರೆಯಷ್ಟು ವಿಸ್ತಾರವಾದ ಹೆಸರಘಟ್ಟ ಕೆರೆಯಂಗಳವಿದೆ. ಈ ಕೆರೆಯಂಗಳದ ಸುತ್ತ ಇರುವ 356 ಎಕರೆ ಪ್ರದೇಶ ಬೆಂಗಳೂರಿನಲ್ಲಿ ಉಳಿದಿರುವ ಕೊನೆಯ ಹುಲ್ಲುಗಾವಲು ಆವಾಸಸ್ಥಾನ. ಈ ಪ್ರದೇಶದಲ್ಲಿ 235 ಪ್ರಭೇದದ ಪಕ್ಷಿಗಳು, 400 ಪ್ರಭೇದದ ಕೀಟಗಳು, 100 ವಿಧದ ಚಿಟ್ಟೆಗಳು ಕಾಣಸಿಗುತ್ತವೆ ಎಂಬುದು ಅಧ್ಯಯನದಿಂದ ದೃಢಪಟ್ಟಿದೆ. ಅದನ್ನು ಹಾಗೆಯೇ ಉಳಿಸಿಕೊಳ್ಳಬೇಕು' ಎಂಬುದು ಪರಿಸರ ಪ್ರೇಮಿಗಳ ವಾದ.

ಹೆಸರಘಟ್ಟ ಪ್ರದೇಶದ ಮಹತ್ವ

- ಹೆಸರಘಟ್ಟದ ಹುಲ್ಲುಗಾವಲು ಪರಿಸರ ಸೂಕ್ಷ್ಮ ವಲಯ
- ಅಂತರ್ಜಲ ವೃದ್ಧಿಗೆ ಇಂತಹ ಹುಲ್ಲುಗಾವಲು ಪ್ರದೇಶ ತೀರಾ ಅವಶ್ಯಕ
- ದಕ್ಷಿಣ ಭಾರತದ ಪ್ರಮುಖ ಕನ್ನೌಲ್ ಹಕ್ಕಿ (ಲೆಸ್ಸೆರ್ ಫ್ಲೋರಿಕನ್), ಜವುಗು ಸೆಳೆವ (ಮಾರ್ಷ್ ಹ್ಯಾರಿಯರ್), ಮೊಂಟಾಗು ಹ್ಯಾರಿಯರ್, ನೆಲಗುಬ್ಬಿ (ಲಾರ್ಕ್) ಸೇರಿದಂತೆ 120 ಕ್ಕೂ ಹೆಚ್ಚು ಪಕ್ಷಿ ಪ್ರಭೇದಗಳು ಇಲ್ಲಿವೆ
- ರಷ್ಯಾ– ಮಧ್ಯ ಏಷ್ಯಾದಿಂದ ಪಕ್ಷಿಗಳು ಇಲ್ಲಿಗೆ ವಲಸೆ ಬರುತ್ತವೆ
- ಕಾಡುಪಾಪ, ಗುಳ್ಳೇನರಿ, ಮುಂಗುಸಿಯಂತಹ ಹಲವು ವನ್ಯಜೀವಿಗಳ ವಾಸಸ್ಥಾನ
- ಅಪರೂಪದ ಲೈಲ್ಯಾಕ್ ಸಿಲ್ವರ್ ಲೈನ್ ಚಿಟ್ಟೆಗಳು ಈ ಪ್ರದೇಶದಲ್ಲಿವೆ



ಸರ್ಕಾರಿ ನೌಕರರ ಸಂಘಕ್ಕೆ ಆಡಳಿತಾಧಿಕಾರಿ ನೇಮಕ

ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ಆಡಳಿತಾಧಿಕಾರಿ ನೇಮಿಸಿ ಸಹಕಾರ ಇಲಾಖೆ ಆದೇಶ ಹೊರಡಿಸಿದೆ.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಪ್ರಧಾನ ವ್ಯವಸ್ಥಾಪಕ (ಕೆಎಎಸ್ ಆಯ್ಕೆ ಶ್ರೇಣಿ) ಸಿ.ಎನ್. ಮಂಜುನಾಥ್ ಅವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲಾಗಿದೆ.

ಸಂಘದ ಆಡಳಿತ ಮಂಡಳಿ ಅವಧಿ ಮುಕ್ತಾಯವಾಗಿದೆ. ಚುನಾವಣೆ ನಡೆಸಲು ಚುನಾವಣಾಧಿಕಾರಿ ನೇಮಿಸಲಾಗಿದೆ. ಈಗಾಗಲೇ ಚುನಾವಣಾ ಪ್ರಕ್ರಿಯೆಗಳೂ ಆರಂಭವಾಗಿವೆ. ಹಾಗಾಗಿ, ಆಡಳಿತಾಧಿಕಾರಿ ನೇಮಿಸಲಾಗಿದ್ದು, ಚುನಾವಣಾ ಫಲಿತಾಂಶ ಪ್ರಕಟವಾಗಿ ಹೊಸ ಆಡಳಿತ ಮಂಡಳಿ ನೇಮಕವಾಗುವವರೆಗೂ ಮುಂದುವರಿಯಲಿದ್ದಾರೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಸರ್ಕಾರಿ ನೌಕರರ ಸಂಘದ ಚುನಾವಣಾ ಪ್ರಕ್ರಿಯೆ ಸೆ. 17ರಿಂದ ಆರಂಭವಾಗಿದ್ದು, ತಾಲ್ಲೂಕು ಶಾಖೆಯಿಂದ ಆರಂಭಗೊಂಡು ರಾಜ್ಯ ಸಂಘದ ಅಧ್ಯಕ್ಷರು, ಪದಾಧಿಕಾರಿಗಳವರೆಗಿನ ಚುನಾವಣೆ ಡಿ. 27ರವರೆಗೆ ವಿವಿಧ ಹಂತದಲ್ಲಿ ನಡೆಯಲಿದೆ. ಚುನಾವಣಾಧಿಕಾರಿ ಎ. ಹನುಮನರಸಯ್ಯ ಕಾರ್ಯನಿರ್ವಹಿಸುತ್ತಿದ್ದಾರೆ.

ಜಯದೇವ ಆಸ್ಪತ್ರೆ: ನರ್ಸ್ ಸೇವೆ ಕಾಯಂಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಯದೇವ ಹೃದ್ರೋಗ ಸಂಸ್ಥೆಗೆ, ಅದರ ಹೃದಯವೇ ಸರಿಯಾದ ಸ್ಥಳದಲ್ಲಿ ಇಲ್ಲ' ಎಂದು ಕುಟುಕಿರುವ ಹೈಕೋರ್ಟ್, 'ಸಂಸ್ಥೆಯಲ್ಲಿ 20 ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸಿದ್ದ 10ಕ್ಕೂ ಹೆಚ್ಚು ಅರ್ಜಿದಾರ ನರ್ಸ್‌ಗಳನ್ನು ಕಾಯಂಗೊಳಿಸುವಂತೆ ಆದೇಶಿಸಿದೆ.

ಈ ಕುರಿತಂತೆ ಬಿ.ಜೆ.ರಾಣಿ ಸೇರಿದಂತೆ 10ಕ್ಕೂ ಹೆಚ್ಚು ಸಿಬ್ಬಂದಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್.ಎಸ್. ಸಂಜಯಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ನಿಮ್ಮ ಸೇವೆಯನ್ನು ಕಾಯಂಗೊಳಿಸಲು ಆಗದು' ಎಂದು ಸಂಸ್ಥೆಯು ಅರ್ಜಿದಾರರಿಗೆ ನೀಡಿದ್ದ ಹಿಂಬರಹವನ್ನು ರದ್ದುಗೊಳಿಸಿದೆ.

'ಅರ್ಜಿದಾರರು 2004 ರಿಂದ 2007ರ ನಡುವಿನ ಅವಧಿಯಲ್ಲಿ ಗುತ್ತಿಗೆ ಆಧಾರದಡಿ ನೇಮಕಗೊಂಡು ಸ್ಟಾಫ್ ನರ್ಸ್‌ಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಗಾಗಿ, 10 ವರ್ಷ ಸೇವೆ ಪೂರೈಸಿದ ದಿನದಿಂದ ಅನ್ವಯವಾಗುವಂತೆ ಅವರ ಸೇವೆಯನ್ನು ಕಾಯಂಗೊಳಿಸಬೇಕು. ಹತ್ತು ವರ್ಷ ಪರಿಗಣಿಸುವಾಗ ಮಧ್ಯದಲ್ಲಿ ಒಂದೆರಡು ದಿನಗಳ ಬ್ರೇಕಿಂಗ್ ಅವಧಿಯನ್ನು ನಿರ್ಲಕ್ಷಿಸಬೇಕು' ಎಂದು ನ್ಯಾಯಪೀಠ, ಜಯದೇವ ಸಂಸ್ಥೆಗೆ ನಿರ್ದೇಶಿಸಿದೆ.

'ರಾಜ್ಯದ ಅತ್ಯುತ್ತಮ ವೈದ್ಯಕೀಯ ಸಂಸ್ಥೆಗಳಲ್ಲಿ ಒಂದೆನಿಸಿರುವ ಜಯದೇವ ಸಂಸ್ಥೆಯು ರಾಜ್ಯಕ್ಕೆ ಮಾದರಿಯಾಗಿ ನಡೆದುಕೊಳ್ಳಬೇಕು. ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವರು ಅಧ್ಯಕ್ಷರಾಗಿರುವ ಇದರ ಆಡಳಿತ ಮಂಡಳಿಯು ತನ್ನದೇ ಆಸ್ಪತ್ರೆಯ ನರ್ಸ್‌ಗಳ ವಿಚಾರದಲ್ಲಿ ಅನ್ಯಾಯದಿಂದ ನಡೆದುಕೊಳ್ಳುವುದು ಸರಿಯಲ್ಲ. ಸಿಬ್ಬಂದಿಯ ಅನುಭವವನ್ನು ಕಾನೂನಾತ್ಮಕವಾಗಿ ಪರಿಗಣಿಸಿ ಅವರ ಸೇವೆ ಕಾಯಂ ಬಗ್ಗೆ ಪರಿಶೀಲಿಸಿ ಸೂಕ್ತ ತೀರ್ಮಾನ ಕೈಗೊಳ್ಳಬೇಕು' ಎಂದು ಹೇಳಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್.ರಂಗನಾಥ ಜೋಯಿಸ್ ವಾದ ಮಂಡಿಸಿದ್ದರು.



ಕೋರಿಕೆ ಏನಿತ್ತು?

'ನಮ್ಮ ಸೇವೆ ಕಾಯಮಾತಿಗೆ ಸಂಬಂಧಿಸಿದಂತೆ 'ಜಯದೇವ ಹೃದಯ ರಕ್ತನಾಳದ ವಿಜ್ಞಾನಗಳು ಮತ್ತು ಸಂಶೋಧನಾ ಸಂಸ್ಥೆ'ಯು ಜೂನ್ 2ರಂದು ನೀಡಿರುವ ಹಿಂಬರಹ ಏಕಪಕ್ಷೀಯ, ಕಾನೂನು ಬಾಹಿರವಾಗಿದ್ದು, ಸಂವಿಧಾನದ 14ನೇ ವಿಧಿಯ ಉಲ್ಲಂಘನೆಯೂ ಆಗಿದೆ. ಆದ್ದರಿಂದ ಇದನ್ನು ರದ್ದುಗೊಳಿಸಬೇಕು. ನಮ್ಮ ಸೇವೆಯನ್ನು ಕಾಯಂಗೊಳಿಸಲು ಹಾಗೂ ಕಾನೂನು ಬದ್ಧವಾಗಿ ಸಲ್ಲಬೇಕಾದ ಎಲ್ಲ ಸೌಲಭ್ಯ ನೀಡಲು ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.



ವೃತ್ತಿಯಲ್ಲಿ ನಿಮ್ಮ ಮಾನಸಿಕ ಸ್ವಾಸ್ಥ್ಯ

ಡಾ. ಸುಜ್ಞಾನಿ ದೇವಿ ಪಾಟೀಲ್

ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಪ್ರತಿ ವರ್ಷ ಅಕ್ಟೋಬರ್ 10ರಂದು ಆಚರಿಸಲಾಗುತ್ತದೆ. ವಿಶ್ವದಾದ್ಯಂತ ಮಾನಸಿಕ ಆರೋಗ್ಯ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಮಾನಸಿಕ ಆರೋಗ್ಯವನ್ನು ಬೆಂಬಲಿವುದು ವಿಶ್ವ ಮಾನಸಿಕ ಆರೋಗ್ಯ ದಿನದ ಉದ್ದೇಶ. ಈ ವರ್ಷದ ವಿಶ್ವ ಮಾನಸಿಕ ಆರೋಗ್ಯ ದಿನದ ವಿಷಯವೆಂದರೆ 'ಕೆಲಸದ ಸ್ಥಳದಲ್ಲಿ ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡುವ ಸಮಯ' ಜನರು, ಸಂಸ್ಥೆಗಳು ಮತ್ತು ಸಮುದಾಯಗಳ ಅನುಕೂಲಕ್ಕಾಗಿ ಕೆಲಸದ ಸ್ಥಳದಲ್ಲಿ ಮಾನಸಿಕ ಆರೋಗ್ಯದ ಮಹತ್ವವನ್ನು ಈ ಥೀಮ್ ಸೂಚಿಸುತ್ತದೆ.

ಸುರಕ್ಷಿತ ಮತ್ತು ಆರೋಗ್ಯಕರ ಕೆಲಸದ ವಾತಾವರಣವು ಮಾನಸಿಕ ಆರೋಗ್ಯಕ್ಕೆ ರಕ್ಷಣಾತ್ಮಕ ಅಂಶವಾಗಿ ಕಾರ್ಯನಿರ್ವಹಿಸುತ್ತದೆ. ಕಳಂಕ, ತಾರತಮ್ಯ, ಕಿರುಕುಳ ಮತ್ತು ಇತರ ಅನಾರೋಗ್ಯಕರ ಪರಿಸ್ಥಿತಿಗಳು ಮಾನಸಿಕ ಆರೋಗ್ಯಕ್ಕೆ ಅಪಾಯ ಉಂಟುಮಾಡಬಹುದು.

ಮಾನಸಿಕ ಆರೋಗ್ಯಕ್ಕೆ ಅಪಾಯಗಳು

ಕೌಶಲ್ಯಗಳ ಕಡಿಮೆ ಬಳಕೆ ಅಥವಾ ಕೆಲಸಕ್ಕೆ ಕಡಿಮೆ ಕೌಶಲ್ಯ ಹೊಂದಿರುವುದು. ಅತಿಯಾದ ಕೆಲಸದ ಹೊರೆ, ಅತಿಯಾದ ಕೆಲಸದ ವೇಗ, ಕಡಿಮೆ ಸಿಬ್ಬಂದಿ, ಕಡಿಮೆ ಸಂಬಳ, ದೀರ್ಘ ಗಂಟೆಗಳ ಉದ್ಯೋಗ. ಅಸುರಕ್ಷಿತ ಮತ್ತು ಅನಾರೋಗ್ಯಕರ ವಾತಾವರಣ ಸಹೋದ್ಯೋಗಿಗಳು ಅಥವಾ ಮೇಲ್ವಿಚಾರಕರಿಂದ ಸೀಮಿತ ಬೆಂಬಲ; ಹಿಂಸಾಚಾರ, ಕಿರುಕುಳ ಅಥವಾ ಬೆದರಿಸುವಿಕೆ. ಜಾಗತಿಕವಾಗಿ ಅರ್ಧಕ್ಕಿಂತ ಹೆಚ್ಚು ಕಾರ್ಮಿಕರು ಸಾಮಾನ್ಯವಾಗಿ ಅಸುರಕ್ಷಿತ ಕೆಲಸದ ಪರಿಸರದಲ್ಲಿ ಕೆಲಸ ಮಾಡುತ್ತಾರೆ, ದೀರ್ಘಕಾಲ ಕೆಲಸ ಮಾಡುತ್ತಾರೆ, ಸಾಮಾಜಿಕ ಅಥವಾ ಆರ್ಥಿಕ ರಕ್ಷಣೆಗೆ ಕೊರತೆ ಮತ್ತು ತಾರತಮ್ಯವನ್ನು ಎದುರಿಸುತ್ತಾರೆ, ಇವೆಲ್ಲವೂ ಮಾನಸಿಕ ಆರೋಗ್ಯವನ್ನು ದುರ್ಬಲಗೊಳಿಸಬಹುದು.

ಕೆಲಸವು ಜನಾಂಗ, ಲಿಂಗ, ಲೈಂಗಿಕ ದೃಷ್ಟಿಕೋನ, ಅಂಗವೈಕಲ್ಯ, ವಲಸೆ ಸ್ಥಿತಿ, ಧರ್ಮ ಅಥವಾ ವಯಸ್ಸಿನಂತಹ ಅಂಶಗಳ ಆಧಾರದ ಮೇಲೆ ತಾರತಮ್ಯ ಮತ್ತು ಅಸಮಾನತೆ ಮಾನಸಿಕ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತವೆ.

ತೀವ್ರ ಮಾನಸಿಕ ಅನಾರೋಗ್ಯ ಹೊಂದಿರುವ ಜನರು ಉದ್ಯೋಗದಿಂದ ಹೊರಗುಳಿಯುವ ಸಾಧ್ಯತೆ ಹೆಚ್ಚು, ಮತ್ತು ಉದ್ಯೋಗದಲ್ಲಿದ್ದಾಗ, ಅವರು ಕೆಲಸದಲ್ಲಿ ಅಸಮಾನತೆಯನ್ನು ಅನುಭವಿಸುವ ಸಾಧ್ಯತೆ ಹೆಚ್ಚು. ಕೆಲಸದಿಂದ ದೂರವಿರುವುದು ಮಾನಸಿಕ ಆರೋಗ್ಯಕ್ಕೂ ಅಪಾಯವನ್ನುಂಟು ಮಾಡುತ್ತದೆ. ನಿರುದ್ಯೋಗ,ಆರ್ಥಿಕ ಅಭದ್ರತೆ ಮತ್ತು ಇತ್ತೀಚಿನ ಉದ್ಯೋಗ ನಷ್ಟಗಳು ಆತ್ಮಹತ್ಯೆಯ ಪ್ರಯತ್ನಗಳಿಗೆ ಅಪಾಯಕಾರಿ ಅಂಶಗಳಾಗಿವೆ ❖



ಮಾನಸಿಕ ಆರೋಗ್ಯಕ್ಕಾಗಿ ಕ್ರಮಗಳು

ಮಾನಸಿಕ ಅನಾರೋಗ್ಯ ಹೊಂದಿರುವ ಜನರನ್ನು ಬೆಂಬಲಿಸಲು, ಉಳಿಸಿಕೊಳ್ಳಲು ಮತ್ತು ಕೆಲಸದಲ್ಲಿ ಭಾಗವಹಿಸಲು ಡಬ್ಲ್ಯುಎಚ್‌ಒ ಮೂರು ಶಿಫಾರಸು ಮಾಡುತ್ತದೆ.

ಮಾನಸಿಕ ಆರೋಗ್ಯಕ್ಕೆ ಅಪಾಯ ಉಂಟುಮಾಡಬಹುದಾದ ಪರಿಸ್ಥಿತಿಗಳನ್ನು ತಡೆಗಟ್ಟುವುದು.
ಕೆಲಸದಲ್ಲಿ ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮವನ್ನು ರಕ್ಷಿಸಿ ಮತ್ತು ಉತ್ತೇಜಿಸಿಸುವುದು.
ಮಾನಸಿಕ ಅನಾರೋಗ್ಯ ಹೊಂದಿರುವ ಕೆಲಸಗಾರರಿಗೆ ಕೆಲಸದಲ್ಲಿ ಭಾಗವಹಿಸಲು ಮತ್ತು ಅಭಿವೃದ್ಧಿ ಹೊಂದಲು ಬೆಂಬಲಿಸುವುದು;
ಮಾನಸಿಕ ಅನಾರೋಗ್ಯವು ಕೆಲಸಗಾರರ ಸಾಮರ್ಥ್ಯಗಳು, ಅಗತ್ಯತೆಗಳು ಮತ್ತು ಆದ್ಯತೆಗಳಿಗೆ ಅನುಗುಣವಾಗಿ ಕೆಲಸದ ವಾತಾವರಣವನ್ನು ಒದಗಿಸುವುದು. ಕೆಲಸದ ಸ್ಥಳದಲ್ಲಿ ಸಮಂಜಸವಾದ ವಸತಿ ಸೌಕರ್ಯಗಳು, ಆಗಾಗ್ಗೆ ವಿರಾಮಗಳನ್ನು ನಿಗದಿಪಡಿಸುವುದು, ಕಾರ್ಮಿಕರಿಗೆ ಹೊಂದಿಕೊಳ್ಳುವ ಕೆಲಸದ ಸಮಯವನ್ನು ನೀಡುವುದು, ಕಾರ್ಯಗಳನ್ನು ಪೂರ್ಣಗೊಳಿಸಲು ಹೆಚ್ಚುವರಿ ಸಮಯ ನೀಡುವುದು, ಒತ್ತಡವನ್ನು ಕಡಿಮೆ ಮಾಡಲು ಮಾರ್ಪಡಿಸಿದ ಕಾರ್ಯಯೋಜನೆಗಳು ನೀಡುವುದು.

ಮಾನಸಿಕ ಆರೋಗ್ಯವನ್ನು ಬೆಂಬಲಿಸಲು ವ್ಯವಸ್ಥಾಪಕರಿಗೆ ತರಬೇತಿ ನೀಡುವುದು. ಉದ್ಯೋಗದಾತರು ಕೆಲಸದ ಸ್ಥಳದಲ್ಲಿ ಒತ್ತಡವನ್ನು ಗುರುತಿಸಲು ಮತ್ತು ಪರಿಹರಿಸಲು ವ್ಯವಸ್ಥಾಪಕರಿಗೆ ತರಬೇತಿಯನ್ನು ನೀಡಬೇಕು. ತರಬೇತಿ ಪಡೆದ ವ್ಯವಸ್ಥಾಪಕರು ತಮ್ಮ ತಂಡಗಳನ್ನು ಪರಿಣಾಮಕಾರಿಯಾಗಿ ಬೆಂಬಲಿಸಬಹುದು ಮತ್ತು ಆರೋಗ್ಯಕರ, ಹೆಚ್ಚು ಬೆಂಬಲ ನೀಡುವ ಕೆಲಸದ ವಾತಾವರಣವನ್ನು ಬೆಳೆಸಬಹುದು. ಕೆಲಸಗಾರರು ಸ್ವಂತ ಮಾನಸಿಕ ಆರೋಗ್ಯವನ್ನು ನೋಡಿಕೊಳ್ಳಬೇಕು.

ಕೆಲಸಗಾರರು ಒತ್ತಡವನ್ನು ನಿರ್ವಹಿಸುವ ತಂತ್ರಗಳನ್ನು ಕಲಿಯಿರಿ ಮತ್ತು ನಿಮ್ಮ ಮಾನಸಿಕ ಆರೋಗ್ಯದಲ್ಲಿನ ಬದಲಾವಣೆಗಳ ಬಗ್ಗೆ ಜಾಗರೂಕರಾಗಿರಿ. ಅಗತ್ಯವಿದ್ದರೆ, ವಿಶ್ವಾಸಾರ್ಹ ಸ್ನೇಹಿತ, ಕುಟುಂಬದ ಸದಸ್ಯರು, ಸಹೋದ್ಯೋಗಿಗಳು, ಮೇಲ್ವಿಚಾರಕರು ಅಥವಾ ಆರೋಗ್ಯ ವೃತ್ತಿಪರರ ಬೆಂಬಲವನ್ನು ಪಡೆಯಿರಿ. ಸುರಕ್ಷಿತ ಮತ್ತು ಆರೋಗ್ಯಕರ ಕೆಲಸದ ಪರಿಸರವು ಮೂಲಭೂತ ಹಕ್ಕು ಮಾತ್ರವಲ್ಲದೆ, ಕೆಲಸದಲ್ಲಿ ಒತ್ತಡ ಮತ್ತು ಘರ್ಷಣೆಗಳನ್ನು ಕಡಿಮೆ ಮಾಡುತ್ತದೆ ಮತ್ತು ಸಿಬ್ಬಂದಿಯನ್ನು ಉಳಿಸಿಕೊಳ್ಳುವುದು, ಕೆಲಸದ ಕಾರ್ಯಕ್ಷಮತೆ ಮತ್ತು ಉತ್ಪಾದಕತೆಯನ್ನು ಸುಧಾರಿಸುತ್ತದೆ.

ಮಧುಮೇಹಿಗಳು ಬೆಲ್ಲವನ್ನು ತಿನ್ನಬಹುದೇ?

ಡಾ. ಬ್ರಹ್ಮಾನಂದ ನಾಯಕ್

ಬೆಲ್ಲವೆಂಬುದು ಮಧುಮೇಹಿಗಳ ಪಾಲಿಗೆ ಮಧುರ ಮೋಸ. ಗ್ಲೈಸೆಮಿಕ್ ಸೂಚ್ಯಂದ 84.4, ಶುದ್ಧ ಸಕ್ಕರೆಗಿಂತ ಕಡಿಮೆಯಲ್ಲ. ಭಾರತದ 77 ದಶಲಕ್ಷ ಮಧುಮೇಹಿಗಳಿಗೆ ಇದು ಗಂಭೀರ ಆರೋಗ್ಯ ಬೆದರಿಕೆ. ಅಖಿಲ ಭಾರತೀಯ ಆಯುರ್ವಿಜ್ಞಾನ ಸಂಸ್ಥೆ ನಡೆಸಿದ ಇತ್ತೀಚಿನ ಅಧ್ಯಯನವು ಅಘಾತಕಾರಿ ಸತ್ಯವನ್ನು ಬಹಿರಂಗಪಡಿಸಿದೆ.

ಸಮೀಕ್ಷೆಯಲ್ಲಿ ಪಾಲ್ಗೊಂಡ ಮಧುಮೇಹಿಗಳ ಪೈಕಿ ಶೇ 62 ಮಂದಿ ಬೆಲ್ಲ ಸುರಕ್ಷಿತ ಎಂದು ನಂಬುತ್ತಾರೆ. ಇದು ವೈಜ್ಞಾನಿಕ ಸತ್ಯಕ್ಕೆ ವಿರುದ್ಧವಾಗಿದೆ. ಎಚ್‌ಬಿಎ1ಸಿ ಮಟ್ಟ ನಿಜ ಸ್ಥಿತಿ ತೋರಿಸುತ್ತದೆ. ಈಗ ನಿರ್ಧರಿಸಿ. ಸಾಂಪ್ರದಾಯಿಕ ನಂಬಿಕೆ ಅಥವಾ ವೈಜ್ಞಾನಿಕ ಸಾಕ್ಷ್ಯ - ಯಾವುದು ನಿಮ್ಮ ಆರೋಗ್ಯವನ್ನು ಕಾಪಾಡುತ್ತದೆ?

'ಡಾಕ್ಟರ್, ನನ್ನ ಚಹಾದಲ್ಲಿ ಸಕ್ಕರೆ ಬದಲು ಬೆಲ್ಲ ಹಾಕ್ತಿದ್ದೀನಿ. ನೈಸರ್ಗಿಕ ಅಂತ. ನನ್ನ ಮಧುಮೇಹಕ್ಕೆ ಒಳ್ಳೇದು ಅಲ್ವಾ?" ಎಂದು 55 ವರ್ಷದ ರಮೇಶ ಹೇಳಿದಾಗ, ನನ್ನ ಮನಸ್ಸಿನಲ್ಲಿ ಅವರ ಗ್ಲೂಕೋಮೀಟರ್ 'ಅಯ್ಯೋ' ಎಂದು ಅಳುತ್ತಿರುವ ದೃಶ್ಯ ಕಂಡಿತು. ಅವರ ಮಾತಿನಲ್ಲಿದ್ದ ವಿಶ್ವಾಸಕ್ಕೆ ನಾನು ನಕ್ಕೆ , ಆದರೆ ಅದರ ಹಿಂದಿನ ಅಜ್ಞಾನ ನನ್ನನ್ನು ಚಿಂತೆಗೀಡುಮಾಡಿತು . ಬೆಲ್ಲದ ಬಗ್ಗೆ ಇಂತಹ ತಪ್ಪು ಕಲ್ಪನೆಗಳು ನಮ್ಮ ಸಮಾಜದಲ್ಲಿ ಎಷ್ಟು ಆಳವಾಗಿ ಬೇರೂರಿವೆ ಎಂದು ಯೋಚಿಸಿ ನನಗೆ ಆಶ್ಚರ್ಯವಾಯಿತು. 'ನೈಸರ್ಗಿಕ' ಎಂಬ ಪದವೇ ಮಧುಮೇಹಿಗಳಿಗೆ ಮಾರಣಾಂತಿಕ ಬಲೆಯಾಗಿದೆ.

ಬೆಲ್ಲದ ಸತ್ಯ ಕಹಿಯಾಗಿದೆ. ಅದರಲ್ಲಿ ಸ್ವಲ್ಪ ಖನಿಜಗಳಿವೆ, ಗ್ಲೈಸೆಮಿಕ್ ಸೂಚ್ಯಂಕ ಕೊಂಚ ಕಡಿಮೆ ಎಂದು ಹೇಳುತ್ತಾರೆ. ಆದರೆ ಇದೆಲ್ಲ ಮಧುಮೇಹಿಗಳಿಗೆ ಮೋಸದ ಬಲೆ. ನಿಮ್ಮ ದೇಹಕ್ಕೆ ಬೆಲ್ಲ ಮತ್ತು ಸಕ್ಕರೆ ಒಂದೇ. ಬೆಲ್ಲವನ್ನು ತಿಂದರೆ, ನಿಮ್ಮ ರಕ್ತದಲ್ಲಿ ಸಕ್ಕರೆ ಸುನಾಮಿ ಬರುತ್ತದೆ. ಅದು ಚಿನ್ನದ ಬಣ್ಣದ ಬೆಲ್ಲವೋ, ಬಿಳಿ ಸಕ್ಕರೆಯೋ - ನಿಮ್ಮ ಶರೀರಕ್ಕೆ ಎರಡೂ ಒಂದೇ. ಬೆಲ್ಲ ತಿಂದು ಮಧುಮೇಹವನ್ನು ಮೋಸಗೊಳಿಸಲು ಸಾಧ್ಯವಿಲ್ಲ. ನಿಮ್ಮ ಆರೋಗ್ಯದ ಜೊತೆ ಆಟವಾಡಬೇಡಿ. ಬೆಲ್ಲದ ಮಾಯೆಯನ್ನು ಮೀರಿ, ವಾಸ್ತವವನ್ನು ಅರಿಯಿರಿ.

ಹೈದರಾಬಾದ್‌ನ ರಾಷ್ಟ್ರೀಯ ಪೌಷ್ಟಿಕಾಂಶ ಸಂಸ್ಥೆಯ ಸಂಶೋಧನೆ ನಮ್ಮ ಕಣ್ಣು ತೆರೆಸಿದೆ. ಬೆಲ್ಲ ಮತ್ತು ಸಕ್ಕರೆ - ಮಧುಮೇಹಿಗಳಿಗೆ ಎರಡೂ ವಿಷವೇ ಸರಿ. ಆದರೂ ನಾವು ಬೆಲ್ಲದ ಮೋಹದಿಂದ ಹೊರಬರುತ್ತಿಲ್ಲ. ಗುಜರಾತಿ ಥಾಲಿಯ ಸಿಹಿ ತುತ್ತಿನಿಂದ ಹಿಡಿದು, ಚಳಿಯ ಬೆಳಗಿನ ಬೆಲ್ಲದ(ಗುರ್)-ಚಹಾದವರೆಗೆ - ಬೆಲ್ಲ ನಮ್ಮ ಜೀವನದ ಭಾಗವಾಗಿದೆ. ಆದರೆ ಮಧುಮೇಹಿಗಳಿಗೆ ಇದು ಮರಣಾಂತಿಕ ಆಹ್ವಾನ. ನಮ್ಮ ಸಂಸ್ಕೃತಿ ಮತ್ತು ಆರೋಗ್ಯದ ನಡುವೆ ನಾವು ಸಿಕ್ಕಿಬಿದ್ದಿದ್ದೇವೆ. ನಮ್ಮ ಅಜ್ಜಿ ಹೇಳಿದ್ದು ಸುಳ್ಳಲ್ಲ, ಆದರೆ ವಿಜ್ಞಾನ ಹೇಳುವುದು ಬೇರೆ. ಈಗ ನಾವು ಯಾರನ್ನು ನಂಬಬೇಕು? ನಮ್ಮ ಸಂಪ್ರದಾಯವನ್ನಾ? ಅಥವಾ ನಮ್ಮ ಆರೋಗ್ಯವನ್ನಾ? ಇದು ಕೇವಲ ಸಿಹಿಯ ಪ್ರಶ್ನೆಯಲ್ಲ, ನಮ್ಮ ಜೀವನದ ಪ್ರಶ್ನೆ.

ಅಂಜಲಿಯ ಕಥೆ ನಮಗೆಲ್ಲ ಪಾಠ. ಬೆಲ್ಲ ತನ್ನ ಮಧುಮೇಹಕ್ಕೆ 'ಔಷಧಿ' ಎಂದು ನಂಬಿದ್ದಳು. ಆದರೆ ಅವಳ HbA1c ಮಟ್ಟ ಮೂರು ತಿಂಗಳು ನಿರಂತರ ಏರುತ್ತಲೇ ಹೋಯಿತು. ಕೊನೆಗೆ ಬೆಲ್ಲ ಬಿಟ್ಟಾಗ, ಅವಳ ರಕ್ತದ ಸಕ್ಕರೆ ನಾಟಕೀಯವಾಗಿ ಇಳಿಯಿತು. ಇದು ಅವಳಿಗೆ ಆಘಾತ, ನನಗೆ ನಿರಾಳ.

ಬೆಲ್ಲ ಸಂಪೂರ್ಣ ಕೆಟ್ಟದ್ದಲ್ಲ. ಮಧುಮೇಹವಿಲ್ಲದವರಿಗೆ, ಅದರಲ್ಲಿರುವ ಖನಿಜಗಳಿಂದಾಗಿ ಸಕ್ಕರೆಗಿಂತ ಸ್ವಲ್ಪ ಉತ್ತಮ. ಆಯುರ್ವೇದದಲ್ಲಿ ಅದರ ಜೀರ್ಣಕ್ರಿಯೆ ಲಾಭಗಳ ಬಗ್ಗೆ ಹೇಳುತ್ತಾರೆ. ಆದರೆ ಮಧುಮೇಹಿಗಳಿಗೆ? ಈ ಸಣ್ಣ ಲಾಭಗಳು ರಕ್ತದ ಸಕ್ಕರೆ ಏರಿಕೆಯ ದೊಡ್ಡ ಅಪಾಯದ ಮುಂದೆ ನಿಲ್ಲಲಾರವು.

ಮಧುಮೇಹಿಗಳೇ, ನಿಮ್ಮ ಆಯ್ಕೆ ಸ್ಪಷ್ಟ. ಕ್ಷಣಿಕ ರುಚಿ ಅಥವಾ ದೀರ್ಘಕಾಲೀನ ಆರೋಗ್ಯ? ಬೆಲ್ಲದ ಸಿಹಿ ಮಾತುಗಳಿಗೆ ಮರುಳಾಗಬೇಡಿ. ನಿಮ್ಮ ಜೀವನದ ಗುಣಮಟ್ಟ ನಿಮ್ಮ ಕೈಯಲ್ಲಿದೆ. ಬೆಲ್ಲದ ಬಗ್ಗೆ ನಿಮ್ಮ ನಿಲುವು ಏನು?

ಮಧುಮೇಹಿಗಳೇ, ನಿಮ್ಮ ಆಹಾರ ನಿಮ್ಮ ಆಯುಧ. ಕೊಬ್ಬಿಲ್ಲದ ಪ್ರೋಟೀನ್‌ಗಳು, ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳು - ಇವೇ ನಿಮ್ಮ ಬಲ. ಸಿಹಿ ಬೇಕೇ? ಸ್ಟೀವಿಯಾ ಅಂತಹ ನೈಸರ್ಗಿಕ, ಕಡಿಮೆ ಕ್ಯಾಲೊರಿ ಸಿಹಿಕಾರಕಗಳತ್ತ ನೋಡಿ. ನಿಮ್ಮ ವೈದ್ಯರ ಜೊತೆ ನಿರಂತರ ಸಂವಾದ ನಡೆಸಿ, ನಿಮಗೆ ಹೊಂದುವ ಮಧುಮೇಹ ನಿರ್ವಹಣಾ ಯೋಜನೆ ರೂಪಿಸಿ.

ಮಧುಮೇಹ ನಿಯಂತ್ರಣಕ್ಕೆ ವಿಜ್ಞಾನ-ಆಧಾರಿತ ವಿಧಾನವೇ ಪರಿಣಾಮಕಾರಿ. ಸಮತೋಲಿತ ಆಹಾರ, ನಿಯಮಿತ ವ್ಯಾಯಾಮ, ಮತ್ತು ಔಷಧಿ ಸೇವನೆ ಅತ್ಯಗತ್ಯ. ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳುವುದರಿಂದ ಮಧುಮೇಹದ ತೊಡಕುಗಳನ್ನು ಶೇ 40 ರಷ್ಟು ಕಡಿಮೆ ಮಾಡಬಹುದು ಎಂದು ಸಂಶೋಧನೆಗಳು ತೋರಿಸುತ್ತವೆ.

ಬೆಲ್ಲದ ಗ್ಲೈಸೆಮಿಕ್ ಸೂಚ್ಯಂಕ 84.4. ನಿಮ್ಮ HbA1c 7 ಕ್ಕಿಂತ ಕಡಿಮೆ ಇರಲಿ. ಈ ಎರಡು ಸಂಖ್ಯೆಗಳು ನಿಮ್ಮ ಜೀವನದ ಕಥೆ ಹೇಳಲಿ. ❖




ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಗಣಿತ

ಅಧ್ಯಾಯ–6 ತ್ರಿಭುಜ

ಅಭ್ಯಾಸ –6.3

7) ಚಿತ್ರ 6.38 ರಲ್ಲಿ ΔABC ಯ ಎತ್ತರಗಳಾದ AD ಮತ್ತು CE ಗಳು ಪರಸ್ಪರ P ಬಿಂದುವಿನಲ್ಲಿ ಛೇದಿಸುತ್ತವೆ. ಆದರೆ
i) $\Delta AEP \sim \Delta CDP$
ii) $\Delta ABD \sim \Delta CBE$
iii) $\Delta AEP \sim \Delta ADB$
iv) $\Delta PDC \sim \Delta BEC$ ಎಂದು ಸಾಧಿಸಿ



ಪರಿಹಾರ: ನೀಡಿರುವ ΔABCದಲ್ಲಿ AD ಮತ್ತು CEಗಳು P ಬಿಂದುವಿನಲ್ಲಿ ಸಂಧಿಸುತ್ತವೆ.


(i) ΔAEP ಮತ್ತು ΔCDP ದಲ್ಲಿ
$\angle AEP = \angle CDP$ (ಪ್ರತಿಯೊಂದು 90°)
$\angle APE = \angle CPD$ (Vertically opposite angles)
ಹೀಗಾಗಿ ಕೋ. ಕೋ. ಸಿದ್ಧಾಂತದಂತೆ
$\Delta AEP \sim \Delta CDP$

(ii) ΔABD ಮತ್ತು ΔCBEದಲ್ಲಿ
$\angle ADB = \angle CEB$ (ಪ್ರತಿಯೊಂದು 90°)
$\angle ABD = \angle CBE$ (ಸಾಮಾನ್ಯ ಕೋನ)
ಹೀಗಾಗಿ ಕೋ. ಕೋ. ನಿರ್ಧಾರಕ ಗುಣದಂತೆ
$\Delta ABD \sim \Delta CBE$

(iii) In ΔAEP and ΔADBದಲ್ಲಿ
$\angle AEP = \angle ADB$ (ಪ್ರತಿಯೊಂದು 90°)
$\angle PAE = \angle DAB$ (ಸಾಮಾನ್ಯ ಕೋನ)
ಹೀಗಾಗಿ ಕೋ. ಕೋ. ನಿರ್ಧಾರಕ ಗುಣದಂತೆ
$\Delta AEP \sim \Delta ADB$


(iv) ΔPDC ಮತ್ತು ΔBEC,ದಲ್ಲಿ
$\angle PDC = \angle BEC$ (ಪ್ರತಿಯೊಂದು 90°)
$\angle PCD = \angle BCE$ (ಸಾಮಾನ್ಯ ಕೋನ)
ಹೀಗಾಗಿ ಕೋ. ಕೋ. ನಿರ್ಧಾರಕ ಗುಣದಂತೆ
$\Delta PDC \sim \Delta BEC$

8) ABCD ಸಮಾಂತರ ಚತುರ್ಭುಜದ ವೃದ್ಧಿಸಿದ AD ಬಾಹುವಿನ ಮೇಲೆ E ಬಿಂದುವಿದೆ ಮತ್ತು BE ಮತ್ತು CDಗಳು ಪರಸ್ಪರ ಈ ಬಿಂದುವಿನಲ್ಲಿ ಛೇದಿಸಿದರೆ $\Delta ABE \sim \Delta CFB$ ಎಂದು ಸಾಧಿಸಿ.



ಪರಿಹಾರ: ABCD ಸಮಾಂತರ ಚತುರ್ಭುಜದ ವೃದ್ಧಿಸಿದ AD ಬಾಹುವಿನ ಮೇಲೆ E ಬಿಂದುವಿದೆ ಮತ್ತು BE ಮತ್ತು CD ಗಳು ಪರಸ್ಪರ ಈ ಬಿಂದುವಿನಲ್ಲಿ ಛೇದಿಸಿದೆ (ದತ್ತ)
ΔABE ಮತ್ತು ΔCFBದಲ್ಲಿ
$\angle A = \angle C$(ಸಮಾಂತರ ಚತುರ್ಭುಜದ ವಿರುದ್ಧ ಕೋನಗಳು ಸಮ) $\angle AEB = \angle CBF$ (Alternate interior angles as AE || BC)
$\therefore \Delta ABE \sim \Delta CFB$ (ಕೋ. ಕೋ. ನಿರ್ಧಾರಕ ಗುಣದಂತೆ)


9) ಚಿತ್ರ 6.39 ರಲ್ಲಿ ΔABC ಮತ್ತು ΔAMP ಗಳು ಕ್ರಮವಾಗಿ B ಮತ್ತು M ಗಳಲ್ಲಿ ಲಂಬ ಕೋನಗಳನ್ನು ಹೊಂದಿರುವ ಲಂಬಕೋನ ತ್ರಿಭುಜಗಳು ಆದರೆ: i) $\Delta ABC \sim \Delta AMP$
ii) $\frac{CA}{PA} = \frac{BC}{MP}$ ಎಂದು ಸಾಧಿಸಿ



ಪರಿಹಾರ:– ΔABC ಮತ್ತು ΔAMPಗಳು ಕ್ರಮವಾಗಿ B ಮತ್ತು Mಗಳಲ್ಲಿ ಲಂಬ ಕೋನಗಳನ್ನು ಹೊಂದಿರುವ ಲಂಬಕೋನ ತ್ರಿಭುಜಗಳಾಗಿವೆ
(i) ΔABC and ΔAMPದಲ್ಲಿ
$\angle CAB = \angle MAP$ (ಸಾಮಾನ್ಯ ಕೋನ)
$\angle ABC = \angle AMP = 90^\circ$ (ಪ್ರತಿಯೊಂದು 90°)
$\therefore \Delta ABC \sim \Delta AMP$ (ಕೋ. ಕೋ. ನಿರ್ಧಾರಕ ಗುಣದಂತೆ)
(ii) , $\Delta ABC \sim \Delta AMP$ (ಕೋ. ಕೋ. ನಿರ್ಧಾರಕ ಗುಣದಂತೆ)
. ಸಮಕೋನ ತ್ರಿಭುಜದ ಅನುರೂಪ ಬಾಹುಗಳು ಸದಾ ಸಮನಾಗಿರುತ್ತವೆ
ಹೀಗಾಗಿ $\frac{CA}{PA} = \frac{BC}{MP}$

10) CD ಮತ್ತು GHಗಳು ಕ್ರಮವಾಗಿ $\angle ACB$ ಮತ್ತು $\angle EGF$ಗಳ ಕೋನಾರ್ಧಕ ರೇಖೆಗಳಾಗಿರುವಂತೆ D ಮತ್ತು H ಬಿಂದುಗಳು ಕ್ರಮವಾಗಿ ΔABC ಮತ್ತು ΔEFGಯ ಬಾಹುಗಳಾದ AB ಮತ್ತು FE ಮೇಲೆ ಇವೆ. $\Delta ABC \sim \Delta EFG$ ಆದರೆ ಗಳಾಗಿವೆ
(i) CD/GH = AC/FG (ii) $\Delta DCB \sim \Delta HGE$
(iii) $\Delta DCA \sim \Delta HGF$

ಪರಿಹಾರ:: CD ಮತ್ತು GHಗಳು ಕ್ರಮವಾಗಿ $\angle ACB$ ಮತ್ತು $\angle EGF$ಗಳ ಕೋನಾರ್ಧಕ ರೇಖೆಗಳಾಗಿರುವಂತೆ D ಮತ್ತು H ಬಿಂದುಗಳು ಕ್ರಮವಾಗಿ ΔABC ಮತ್ತು ΔEFGಯ ಬಾಹುಗಳಾದ AB ಮತ್ತು FE ಮೇಲೆ ಇವೆ. $\Delta ABC \sim \Delta EFG$ ಗಳಾಗಿವೆ (ದತ್ತ) ಮತ್ತು



(i) $\Delta ABC \sim \Delta FEG$.
$\therefore \angle A = \angle F$, $\angle B = \angle E$, ಮತ್ತು $\angle ACB = \angle FGE$
$\angle ACB = \angle FGE$
$\therefore \angle ACD = \angle FGH$ (ಸಮರೂಪ ತ್ರಿಭುಜದ ಅನುರೂಪಬಾಹುಗಳು)
And, $\angle DCB = \angle HGE$(ಸಮರೂಪ ತ್ರಿಭುಜದ ಅನುರೂಪಬಾಹುಗಳು)

(ಮುಂದುವರಿಯುವುದು)


ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ


II PUC PHYSICS

CURRENT ELECTRICITY

9. Find equivalent resistance of the network shown in fig between the points *a* & *b*.



Soln:- 1- The equivalent circuit of the network is shown in fig A, which is a ***wheatstone bridge***.



Since $\frac{P}{Q} = \frac{R}{S}$ (or) $\frac{r}{r} = \frac{r}{r}$

So the resistance between *c* and *d* can be removed without affecting the circuit. Thus the circuit reduced as in fig (B).

Now the resistor *ac* and *cb* are in series, so they can be replaced by a single resistor of resistance $(r + r) = 2r$.

Similarly, resistors *ad* and *cb* can also be replaced by a single resistor of resistance $r + r = 2r$.

These two resistors of resistances 2*r* each are in parallel as shown in fig (C).

2 - The equivalent resistance between a and b is

$$\frac{1}{R_{eq}} = \frac{1}{2r} + \frac{1}{2r} = \frac{2}{2r} = \frac{1}{r} \Rightarrow R_{eq} = r$$

10. A potentiometer wire of length 300 cm has a resistance of 20 ohm. It is connected in series with a resistance and a cell of e.m.f 4 volts of negligible internal resistance. A source of e.m.f 20 mV is balanced against a length of 60 cm of the potentiometer wire. What is the value of the external resistance?

Soln:- Let R = Value of the external resistance
Resistance of a wire = 20 Ω
Total resistance = (R + 20) Ω
E.M.F of the cell, E = 4 volt

Current through the wire, $I = \frac{E}{R+20} = \frac{4}{R+20} A$

Length of the wire = 300 cm

∴ Potential difference across the wire = IR

$$V = \frac{4}{R+20} \times 20 = \frac{80}{R+20} V$$

Potential difference per unit length of the wire

$$\Rightarrow \frac{V}{1} = \frac{80}{R+20} \times \frac{1}{300}$$

$$= \frac{4}{15(R+20)} V cm^{-1}$$

∴ Potential difference across 60 cm of the wire

$$\Rightarrow \frac{4}{15(R+20)} \times 60 = \frac{16}{(R+20)} V$$

But potential difference across 60 cm of the wire $= 20\ mV = 20 \times 10^{-3}\ V = 2 \times 10^{-2}\ V$ (given)

$$\therefore \frac{16}{R+20} = 2 \times 10^{-2}$$

$$\Rightarrow R + 20 = \frac{16}{2 \times 10^{-2}} = \frac{1600}{2} = 800$$

$$\Rightarrow R = 780 \Omega$$

Some more questions:-

1. What is a Galvanic cell?

Ans:- A device in which electricity is produced using a spontaneous chemical reaction involving oxidation and reduction is called an electrochemical or Galvanic cell.

Eg:- Daniel cell, Leclanche cell etc.,

2. What are galvanic ells?

Ans:- The galvanic cells are the cells that convert chemical energy into the electrical energy. *Eg:-* Dry cell

3. What are electrolytic cells?

Ans:- The electrolytic cells are the cells that convert electrical energy into the chemical energy.

4. What is electrolysis?

Ans:- Electrolysis is defined as a process of chemical decomposition of an electrolyte because of the passage of electricity through its molten state or dissolved state.

5. What is the device used for electrolysis called?

Ans:- Electrolytic cell.

6. State Faraday's I law of electrolysis.

Ans:- ***Faraday's I law of electrolysis*** states that - the amount of a substance liberated at an electrode is directly proportional to the quantity of electricity passing through the electrolytic solution.

7. State Faraday's II law of electrolysis.

Ans:- ***Faraday's II law of electrolysis*** states that - When the same quantity of electricity passes through solutions of different electrolytes the amounts of substances liberated at the electrodes are directly proportional to their chemical equivalents.

(Contd........)

ಗುತ್ತಿಗೆದಾರರ ಸಂಘಕ್ಕೆ ಜಗನ್ನಾಥ ಪ್ರಭಾರ ಅಧ್ಯಕ್ಷ



ಬೆಂಗಳೂರು: ರಾಜ್ಯ ಗುತ್ತಿಗೆದಾರರ ಸಂಘದ ಪ್ರಭಾರ ಅಧ್ಯಕ್ಷರಾಗಿ ಕಲಬುರಗಿಯ ಜಗನ್ನಾಥ ಜಿ. ಶೇಗ್‌ಜಿ ಆಯ್ಕೆ ಯಾಗಿದ್ದಾರೆ.

ಡಿ.ಕೆಂಪಣ್ಣ ಅವರು 'ಸೆಪ್ಟೆಂಬರ್ 19ರಂದು ನಿಧನರಾಗಿದ್ದರಿಂದಾಗಿ, ಅಧ್ಯಕ್ಷ ಸ್ಥಾನ ತೆರವಾಗಿತ್ತು. ಅ.7ರ ಸೋಮವಾರದಂದು ನಡೆದ ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಂಘದ ಹಿರಿಯ ಕಾರ್ಯಾಧ್ಯಕ್ಷರಾಗಿದ್ದ ಜಗನ್ನಾಥ್ ಅವರನ್ನು ಪ್ರಭಾರ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎಂ. ರವೀಂದ್ರ ತಿಳಿಸಿದ್ದಾರೆ.

ಡಿಕೆಶಿ ಮಾತಿಗೆ ಪ್ರತಿಕ್ರಿಯಿಸಿದ ಸತೀಶ ಜಾರಕಿಹೊಳಿ • 'ಮುಖ್ಯಮಂತ್ರಿ ಪಟ್ಟಕ್ಕೆ ಸ್ಪರ್ಧೆಯ ಸನ್ನಿವೇಶ ಇಲ್ಲ'

'ಯಾರೂ ಕಿಂಗ್ ಮೇಕರ್ ಆಗಲು ಸಾಧ್ಯವಿಲ್ಲ'

ಪ್ರಜಾವಾಣಿ ವಾರ್ತೆ



ಸತೀಶ ಜಾರಕಿಹೊಳಿ

ಬೆಂಗಳೂರು: 'ಕಾಂಗ್ರೆಸ್ ಪಕ್ಷದಲ್ಲಿ ಯಾರೂ ಕಿಂಗ್ ಮೇಕರ್ ಆಗಲು ಸಾಧ್ಯವಿಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ನಾನು ಕಾಂಗ್ರೆಸ್ ಪಕ್ಷಕ್ಕಾಗಿ ನಿಂತಿದ್ದೇನೆ. ಪಕ್ಷದ ಕೆಲಸಕ್ಕೆ ನಿತ್ಯ 12 ಗಂಟೆ ಸಮಯ ನೀಡುತ್ತಿದ್ದೇನೆ. ಹೆದರುವ ಪರಿಸ್ಥಿತಿ ಇಲ್ಲ' ಎಂದರು.

'ರಾಜ್ಯದಲ್ಲಿ ರಾಜಕೀಯ ಬೆಳವಣಿಗೆಗಳ ಮಾಹಿತಿ ಹೈಕಮಾಂಡ್‌ಗೆ ಹೋಗುತ್ತದೆ' ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತಿಗೆ ಪ್ರತಿಕ್ರಿಯಿಸಿದ ಅವರು, 'ತುಮಕೂರಿನಲ್ಲೂ ನಾನು ಮತ್ತು ಪರಮೇಶ್ವರ ಭಾನುವಾರ ಭೇಟಿ ಆಗಿದ್ದೆವು. ಈ ಹಿಂದೆ ಸಚಿವ ಎಚ್.ಸಿ. ಮಹದೇವಪ್ಪ ಅವರ ಮನೆಯಲ್ಲೂ ಭೇಟಿ ಆಗಿದ್ದೆವು. ನಾವ್ಯಾಕೆ ಭಯ ಪಡಬೇಕು. ಪಕ್ಷಕ್ಕೆ ಯಾರೆಲ್ಲ ನಿಷ್ಠೆಯಿಂದಿದ್ದಾರೆ ಎನ್ನುವುದನ್ನೂ ಹೈಕಮಾಂಡ್‌ಗಮನಿಸುತ್ತದೆ' ಎಂದರು.

'ಪಕ್ಷಕ್ಕಾಗಿ ಕೆಲವರು ತೆರೆಮರೆಯಲ್ಲಿ ದುಡಿಯುತ್ತಾರೆ. ಅವರಲ್ಲಿ ಕೆಲವರು ಮುಂಚೂಣಿಯಲ್ಲಿ ಕಾಣಿಸಿಕೊಳ್ಳುತ್ತಾರೆ. ಇನ್ನೂ ಕೆಲವರು ವಿಮಾನ ನಿಲ್ದಾಣ ರಸ್ತೆಯಲ್ಲಿ ಪೋಸ್ಟರ್, ಬ್ಯಾನರ್ ಹಾಕಿಸಿಕೊಂಡು ಕಾಣಿಸಿಕೊಳ್ಳುತ್ತಾರೆ. ಹಳ್ಳಿಗಳಲ್ಲಿ ಸ್ವಂತ ಹಣ ಖರ್ಚು ಮಾಡಿ ಪಕ್ಷಕ್ಕೆ ದುಡಿಯುವವರಿದ್ದಾರೆ. ಎಲ್ಲವನ್ನೂ ಹೈಕಮಾಂಡ್ ಗಮನಿಸುತ್ತದೆ' ಎಂದರು.


> **ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಸಿದ್ಧರಾಮಯ್ಯ ಪರ ಇದೆ. ಸಿದ್ದರಾಮಯ್ಯ ರಾಜೀನಾಮೆ ಕುರಿತು ಕಾಂಗ್ರೆಸ್ ಹೈಕಮಾಂಡ್ ಹೇಳಬೇಕು, ವಿಜಯೇಂದ್ರ ಕಾಂಗ್ರೆಸ್ ಹೈಕಮಾಂಡಾ?**
> **ಜಮೀರ್ ಅಹ್ಮದ್ ಖಾನ್**
> ವಸತಿ ಸಚಿವ

> **ಸಿದ್ದರಾಮಯ್ಯ ತಮ್ಮ ಹುದ್ದೆಗೆ ರಾಜೀನಾಮೆ ಕೊಡುವ ಕಾಲ ಸನ್ನಿಹಿತವಾಗಿದೆ. ಈ ಕಾರಣಕ್ಕಾಗಿ ಸಾಕಷ್ಟು ಸಚಿವರು ಕಾಂಗ್ರೆಸ್ ಅಧ್ಯಕ್ಷರನ್ನು ಭೇಟಿ ಮಾಡುತ್ತಿದ್ದಾರೆ**
> **ಬಿ.ವೈ.ವಿಜಯೇಂದ್ರ**
> ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಸಿದ್ದರಾಮಯ್ಯ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ. ಮುಖ್ಯಮಂತ್ರಿಯಾಗಿ ಅವರೇ ಮುಂದುವರಿಯಲಿದ್ದಾರೆ. ಆಸೆ ಎಲ್ಲರಿಗೂ ಇರುತ್ತದೆ. ಆದರೆ, ಸದ್ಯಕ್ಕೆ ಮುಖ್ಯಮಂತ್ರಿ ಪಟ್ಟಕ್ಕೆ ಸ್ಪರ್ಧೆಯ ಸನ್ನಿವೇಶ ಇಲ್ಲ. ಈ ವಿಚಾರ ದಲ್ಲಿ ಹೈಕಮಾಂಡ್ ತೀರ್ಮಾನವೇ ಅಂತಿಮ. ಯಾರೊಬ್ಬರ ವೈಯುಕ್ತಿಕ ತೀರ್ಮಾನ ಅಲ್ಲ' ಎಂದರು.

'ಈ ಹಿಂದೆ ಹೆಚ್ಚುವರಿ ಉಪ ಮುಖ್ಯಮಂತ್ರಿ ವಿಚಾರವಾಗಿ ಬಹಿರಂಗವಾಗಿಯೇ ಹೇಳಿದ್ದೆವು. ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆಯಿಂದ ಪಕ್ಷಕ್ಕೆ ಅನುಕೂಲವಾಗಲಿದೆ ಎಂದಿದ್ದೆವು' ಎಂದರು.

'ಸಿ.ಎಂ ಬದಲಾವಣೆಗೆ ಸ್ವಪಕ್ಷೀಯರಿಂದಲೇ ಅವಸರ'



ಗದಗ: 'ಮುಖ್ಯಮಂತ್ರಿ ಬದಲಾವಣೆಗಾಗಿ ಕಾಂಗ್ರೆಸ್ ಪಕ್ಷದಲ್ಲಿ ಬಹಳಷ್ಟು ಚಟುವಟಿಕೆಗಳು ನಡೆಯುತ್ತಿದ್ದು ವಿರೋಧ ಪಕ್ಷಕ್ಕಿಂತ ಹೆಚ್ಚಾಗಿ ಆಡಳಿತ ಪಕ್ಷದವರೇ ಸಿ.ಎಂ ಬದಲಾವಣೆಗೆ ಅವಸರ ಮಾಡುತ್ತಿದ್ದಾರೆ' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

'ವಿಶೇಷವಾಗಿ ಹಿರಿಯ ಸಚಿವರು ದೆಹಲಿಗೆ ಭೇಟಿ ನೀಡುತ್ತಿರುವುದು ನೋಡಿದರೆ ಇದು ಗೊತ್ತಾಗುತ್ತದೆ. ಇದರೊಂದಿಗೆ ಸಿದ್ದರಾಮಯ್ಯ ಕೂಡ ರಾಜೀನಾಮೆ ನೀಡಲು ಮಾನಸಿಕವಾಗಿ ಸಿದ್ಧರಾಗುತ್ತಿದ್ದಾರೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಭೇಟಿ ಮಾಡಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ಬೇರೆ ಯಾವುದೋ ಕೆಲಸಕ್ಕೆ ಭೇಟಿಯಾಗಿರಬಹುದು. ನಮ್ಮ ಹೈಕಮಾಂಡ್ ಬಹಳ ಸ್ಪಷ್ಟವಾಗಿದೆ. ಈ ಸರ್ಕಾರವನ್ನು ಅಭದ್ರಗೊಳಿಸುವ ಪ್ರಶ್ನೆ ಇಲ್ಲ. ತಾತ್ವಿಕವಾಗಿ ಮತ್ತು ಭ್ರಷ್ಟಾಚಾರದ ವಿರುದ್ಧ ನಮ್ಮ ಹೋರಾಟವಿದೆ' ಎಂದರು.

ಜಾತಿ ಗಣತಿ ವರದಿ–ಕಾಂಗ್ರೆಸ್‌ನಲ್ಲೇ ವಿರೋಧ: 'ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ವಿರುದ್ಧ ಮುಡಾ ಹಗರಣದ ಆರೋಪ ಬಂದ ಮೇಲೆ ಜಾತಿ ಗಣತಿ ವರದಿ ಬಿಡುಗಡೆ ಮಾಡುವ ಬಗ್ಗೆ ಮಾತಾಡುತ್ತಾರೆ. ಜಾತಿ ಗಣತಿ ವರದಿ ಬಿಡುಗಡೆಗೆ ಅವರ ಪಕ್ಷದಲ್ಲಿ ಮೊದಲಿನಿಂದಲೂ ವಿರೋಧ ಇದೆ. ಡಿಸಿಎಂ ಡಿ.ಕೆ. ಶಿವಕುಮಾರ್, ಶಾಸಕ ಶಾಮನೂರ ಶಿವಶಂಕರಪ್ಪ ವಿರೋಧಿಸಿ ಸಹಿ ಮಾಡಿಕೊಟ್ಟಿದ್ದಾರೆ. ಅವರಲ್ಲಿಯೇ ಹೊಂದಾಣಿಕೆ, ಸ್ಪಷ್ಟತೆ ಇಲ್ಲ. ಆದಷ್ಟು ಬೇಗ ಜಾತಿಗಣತಿ ಹೊರಬಂದು ಚರ್ಚೆಯಾಗಲಿ' ಎಂದು ಬೊಮ್ಮಾಯಿ ಹೇಳಿದರು.

'ಹಗರಣ ಮರೆಮಾಚಲು ಜಾತಿಗಣತಿ'

ತಾಕತ್ತಿದ್ದರೆ ವಿಧಾನಸಭೆ ವಿಸರ್ಜನೆ ಮಾಡಿ: ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ಹಗರಣದ ಗಮನವನ್ನು ಬೇರೆಡೆ ಸೆಳೆಯಲು ಜಾತಿಗಣತಿ ವಿಷಯವನ್ನು ಮುನ್ನೆಲೆಗೆ ತಂದು ನಾಟಕ ಮಾಡುತ್ತಿದ್ದಾರೆ ಎಂದು ಕೇಂದ್ರದ ಭಾರಿ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಕಾಂಗ್ರೆಸ್ ಸರ್ಕಾರದ ವಿರುದ್ಧ ಗುರುತರ ಆರೋಪಗಳು ಕೇಳಿ ಬಂದಾಗಲೆಲ್ಲ ಜನರ ಗಮನ ಬೇರೆಡೆಗೆ ಹೊರಳಿಸಲು ಇಂತಹದೇ ತಂತ್ರಗಾರಿಕೆ ಮಾಡುತ್ತಾರೆ. ಎಲ್ಲರನ್ನೂ ದಾರಿ ತಪ್ಪಿಸುತ್ತಾರೆ' ಎಂದು ದೂರಿದರು.

'ಕಾಂತರಾಜು ಆಯೋಗ ರಚನೆ ಮಾಡಿದ್ದು 10 ವರ್ಷಗಳ ಹಿಂದೆ. ಒಂದು ದಶಕದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಈ ಜಾತಿಗಣತಿಯಿಂದ ಯಾವ ಸಮುದಾಯಕ್ಕೂ ಅನುಕೂಲ ಆಗುವುದಿಲ್ಲ. ಇಷ್ಟು ವರ್ಷಗಳು ಏಕೆ ಸುಮ್ಮನಿದ್ದರು. ಲೋಕಸಭಾ ಚುನಾವಣೆಗೂ ಮೊದಲೇ ವರದಿ ಸ್ವೀಕರಿಸಲಾಗಿತ್ತು. ಆಗ ಏಕೆ ಕ್ರಮಕೈಗೊಳ್ಳಲಿಲ್ಲ' ಎಂದು ಪ್ರಶ್ನಿಸಿದರು.

'ನಾನು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಜಾತಿಗಣತಿ ವರದಿಯನ್ನು ಬಿಡುಗಡೆ ಮಾಡಲಿಲ್ಲ ಎಂದು ಕಾಂಗ್ರೆಸ್ ನಾಯಕರು ಆರೋಪ ಮಾಡುತ್ತಾರೆ. ಜಾತಿಗಣತಿ ವರದಿಗೆ ಒಪ್ಪಿಗೆ ನೀಡದಂತೆ ಸಿದ್ದರಾಮಯ್ಯ ಅವರನ್ನು ಹಿಡಿದುಕೊಂಡವರು ಯಾರು? ಇಷ್ಟು ದಿನ ಸುಮ್ಮನಿದ್ದು, ಈಗ ರಾಜಕೀಯ ಮಾಡುತ್ತಿದ್ದಾರೆ. ಕಾಂಗ್ರೆಸ್ ನಾಯಕರಿಗೆ ತಾಕತ್ತಿದ್ದರೆ ವಿಧಾನಸಭೆ ವಿಸರ್ಜನೆ ಮಾಡಿ, ಜಾತಿ ಗಣತಿ ಇಟ್ಟುಕೊಂಡು ಚುನಾವಣೆ ಎದುರಿಸಲಿ' ಎಂದು ಎಚ್.ಡಿ. ಕುಮಾರಸ್ವಾಮಿ ಸವಾಲು ಹಾಕಿದರು.

'ಜಾತಿಗಣತಿ ಕುರಿತು ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ದೆಹಲಿಯಲ್ಲಿ ಒಂದು ಹೇಳುತ್ತಾರೆ. ಇಲ್ಲಿ ಇವರದೇ ಪಕ್ಷದ ನಾಯಕರು ಇನ್ನೊಂದು ಹೇಳುತ್ತಾರೆ. ರಾಜ್ಯದ ಅಭಿವೃದ್ಧಿ ಕುರಿತು ಒಬ್ಬರೂ ಮಾತನಾಡುವುದಿಲ್ಲ' ಎಂದು ಟೀಕಿಸಿದರು.

'ಜಾತಿ ಗಣತಿಯಿಂದ ಯಾರಿಗೂ ಅನ್ಯಾಯ ಆಗಬಾರದು'



ಬಿ.ವೈ. ವಿಜಯೇಂದ್ರ

ಬೆಂಗಳೂರು: 'ಜಾತಿಗಣತಿ ವಿಚಾರದಲ್ಲಿ ಶೋಷಿತ ವರ್ಗಗಳು ಮತ್ತು ಹಿಂದುಳಿದವರಿಗೆ ನ್ಯಾಯ ಕೊಡಲೇಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಇದರಿಂದ ಉಳಿದ ಸಮುದಾಯಗಳಿಗೆ ಅನ್ಯಾಯ ಆಗದಂತೆ ಮುಖ್ಯಮಂತ್ರಿಯವರು ನ್ಯಾಯೋಚಿತವಾಗಿ ನಡೆದುಕೊಳ್ಳಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಜಾತಿಗಣತಿ ಬಗ್ಗೆ ಡಿ.ಕೆ.ಶಿವಕುಮಾರ್, ಒಕ್ಕಲಿಗರ ಸಂಘದ ಅಧ್ಯಕ್ಷ ಬಾಲಕೃಷ್ಣ ಹಾಗೂ ವೀರಶೈವ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಏನು ಮಾತನಾಡಿದ್ದಾರೆ ಎಂಬುದನ್ನು ಮುಖ್ಯಮಂತ್ರಿಯವರು ಗಮನಿಸಬೇಕು' ಎಂದು ಹೇಳಿದರು.

'ಜಾತಿಗಣತಿ ಮಾತ್ರವಲ್ಲ, ಒಳಮೀಸಲಾತಿ ನೀಡುವ ವಿಚಾರದಲ್ಲೂ ಮುಖ್ಯಮಂತ್ರಿ ಅವರಲ್ಲಿ ಪ್ರಾಮಾಣಿಕತೆಯ ಕೊರತೆ ಇದೆ. ಹೀಗಾಗಿ ಯಾವ ಕ್ರಮವನ್ನೂ ಕೈಗೊಳ್ಳದೇ ಸುಮ್ಮನೇ ಇದ್ದಾರೆ. ಮುಡಾ ಹಗರಣದಲ್ಲಿ ಕುರ್ಚಿ ಅಲ್ಲಾಡುತ್ತಿರುವುದರಿಂದ ಅವರಿಗೆ ಜಾತಿಗಣತಿ ವರದಿಯ ಬಗ್ಗೆ ಈಗ ಜ್ಞಾನೋದಯವಾಗಿದೆ. ಆದ್ದರಿಂದ ಸಚಿವ ಸಂಪುಟ ಸಭೆಯಲ್ಲಿಟ್ಟು ಅನುಮೋದನೆ ಪಡೆದುಕೊಳ್ಳುವುದಾಗಿ ಹೇಳುತ್ತಿದ್ದಾರೆ' ಎಂದರು.

'ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಈ ಸರ್ಕಾರ ಬಂದ ಮೇಲೆ ಅಭಿವೃದ್ಧಿ ಎಂಬುದು ಸ್ಥಗಿತವಾಗಿದೆ ಎಂಬುದಕ್ಕಿಂತ ಅಭಿವೃದ್ಧಿಗೆ ಚಾಲನೆಯೇ ಸಿಕ್ಕಿಲ್ಲ. ರಾಜ್ಯದಲ್ಲಿ ಒಂದು ರೀತಿಯ ಅರಾಜಕತೆ ಸೃಷ್ಟಿಯಾಗಿದ್ದು, ಜನರಿಗೆ ಸರ್ಕಾರದ ಮೇಲೆ ವಿಶ್ವಾಸವೇ ಹೋಗಿದೆ' ಎಂದರು.

ದಕ್ಷಿಣ ಭಾರತ ರೈತ ಮುಖಂಡರ ಸಭೆಯಲ್ಲಿ ಒತ್ತಾಯ

'ಭೂಸುಧಾರಣೆ ಕಾಯ್ದೆ ತಿದ್ದುಪಡಿ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವರಾಜು ಅರಸು ಅವರು ಜಾರಿಗೆ ತಂದಿದ್ದ ಭೂಸುಧಾರಣೆ ಕಾಯ್ದೆಗೆ ತರಲಾಗಿರುವ ತಿದ್ದುಪಡಿಯನ್ನು ರದ್ದುಪಡಿಸಬೇಕು' ಎಂದು ಮಧ್ಯಪ್ರದೇಶದ ಕಿಸಾನ್ ಸಂಘರ್ಷ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಸುನಿಲಂ ಆಗ್ರಹಿಸಿದರು.

'ಸಂಯುಕ್ತ ಕಿಸಾನ್ ಮೋರ್ಚಾ' ವತಿಯಿಂದ ಸೋಮವಾರ ಆಯೋಜಿಸಿದ್ದ ದಕ್ಷಿಣ ಭಾರತ ರೈತ ಮುಖಂಡರ ಸಭೆಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅರಸು ಅವರ ಭೂಸುಧಾರಣೆ ಕಾಯ್ದೆ ಇತರೆ ರಾಜ್ಯಗಳಿಗೂ ಮಾದರಿ. ಆದರೆ ಅದಕ್ಕೆ ತಿದ್ದುಪಡಿ ತರಲಾಗಿರುವುದರಿಂದ ರೈತರ ಭೂಮಿ ಉಳಿಯುತ್ತಿಲ್ಲ. ಆದ್ದರಿಂದ ಈ ಕಾಯ್ದೆಯನ್ನು ಹಿಂದಿನಂತೆಯೇ ಉಳಿಸಿಕೊಳ್ಳಬೇಕು' ಎಂದರು.

'ಕರ್ನಾಟಕದಲ್ಲಿ ಹೊಸ ವಿಮಾನ ನಿಲ್ದಾಣಕ್ಕೆ ಏಳು ಸಾವಿರ ಎಕರೆ, ಜಿಂದಾಲ್ ಸಂಸ್ಥೆಗೆ ಮೂರು ಸಾವಿರ ಎಕರೆ ನೀಡುವ ಯೋಜನೆ ಇದೆ. ಇದರ ವಿರುದ್ಧ ರೈತ ಮುಖಂಡರು ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಿದ್ದಾರೆ' ಎಂದು ಸುನಿಲಂ ಅವರು ಹೇಳಿದರು.

'2022ರಲ್ಲಿ ನಡೆದ ರೈತರ ಚಳವಳಿ ಸಂದರ್ಭದಲ್ಲಿ ಪೂರ್ವಸಿದ್ಧತೆಯಾಗಿರಲಿಲ್ಲ. ಆ ಸಂದರ್ಭದಲ್ಲಿ ವಿರೋಧ ಪಕ್ಷವೂ ಅತ್ಯಂತ ದುರ್ಬಲವಾಗಿತ್ತು. ಈಗ ನಾವು ಸರ್ವ ರೀತಿಯಲ್ಲೂ ಸಜ್ಜಾಗಿದ್ದು, ದೇಶದ ಎಲ್ಲೆಡೆಯೂ ಹೋರಾಟ ಮಾಡಲು ಸನ್ನದ್ಧರಾಗಿದ್ದೇವೆ' ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಸಂಚಾಲಕ ದರ್ಶನ ಪಾಲ್ ಅವರು ಹೇಳಿದರು.

ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಹಾಗೂ ಕರ್ನಾಟಕದ ಸುಮಾರು 250 ರೈತ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು. ಕಿಸಾನ್ ಮೋರ್ಚಾದ ನಾಯಕರು ತಮ್ಮ ಪ್ರಾಂತ್ಯದಲ್ಲಿನ ಹೋರಾಟ ಹಾಗೂ ಸಂಕಷ್ಟಗಳನ್ನು ವಿವರಿಸಿದರು. 'ರೈತ ಮುಖಂಡರ ಸಭೆ ಮಂಗಳವಾರ ಮುಗಿಯಲಿದೆ. ಅಂದು ಸಂಜೆ, ಮುಂದಿನ ಹೋರಾಟದ ನಿರ್ಣಯ ಕೈಗೊಳ್ಳಲಾಗುತ್ತದೆ' ಎಂದು ನಾಯಕರು ಮಾಹಿತಿ ನೀಡಿದರು.



'ಸಂಯುಕ್ತ ಕಿಸಾನ್ ಮೋರ್ಚಾ' ಆಯೋಜಿಸಿದ್ದ ದಕ್ಷಿಣ ಭಾರತ ರೈತ ಮುಖಂಡರ ಸಭೆಯಲ್ಲಿ ತೆಲಂಗಾಣ ಕಿಸಾನ್ ಮೋರ್ಚಾದ ಪದ್ಮಾ, ನವದೆಹಲಿ ಕಿಸಾನ್ ಮೋರ್ಚಾದ ಕೃಷ್ಣಪ್ರಸಾದ್, ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಪಂಜಾಬ್ ಸಂಯುಕ್ತ ಕಿಸಾನ್ ಮೋರ್ಚಾದ ಸಂಚಾಲಕ ದರ್ಶನ ಪಾಲ್, ಕರ್ನಾಟಕ ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಮಾಲಿಪಾಟೀಲ, ಕರ್ನಾಟಕ ಪ್ರಾಂತ್ಯ ರೈತ ಸಂಘದ ಅಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

> **ಕೇಂದ್ರ ಸರ್ಕಾರ ಎಂಎಸ್‌ಪಿ ಜಾರಿಗೊಳಿಸಿ, ರೈತರ ಎಲ್ಲ ಸಾಲಗಳನ್ನು ಮನ್ನಾ ಮಾಡಬೇಕು. ರೈತರಿಗೆ ತಿಂಗಳಿಗೆ ₹10 ಸಾವಿರ ಪಿಂಚಣಿ ನೀಡಬೇಕು ಎಂದು ಆಗ್ರಹಿಸುವ ಹೋರಾಟಗಳನ್ನು ನಾವು ಹಮ್ಮಿಕೊಂಡಿದ್ದೇವೆ**
> **ದರ್ಶನ ಪಾಲ್**
> ಸಂಯುಕ್ತ ಕಿಸಾನ್ ಮೋರ್ಚಾದ ಸಂಚಾಲಕ



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಮನುಷ್ಯ ಅಂದಮೇಲೆ ಮೊದಲು ಆತ್ಮಾಭಿಮಾನ ಹೊಂದಿರಬೇಕು. ಆತ್ಮಾಭಿಮಾನ ಇಲ್ಲದವನು ನಿಜಕ್ಕೂ ಮನುಷ್ಯನಾಗಿ ಬೆಳೆಯಲಾರ.

–ಶಿವರಾಮ ಕಾರಂತ

ಪಂಚಾಯಿತಿ ನೌಕರರ ಮುಷ್ಕರ ಮಾತುಕತೆ ಮೂಲಕ ಇತ್ಯರ್ಥಪಡಿಸಿ

ಮೂರು ಹಂತಗಳ ಗ್ರಾಮೀಣ ಸ್ಥಳೀಯ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರುವ ಮೂಲಕ ಅಧಿಕಾರ ವಿಕೇಂದ್ರೀಕರಣದಲ್ಲಿ ಕ್ರಾಂತಿಕಾರಿ ಹೆಜ್ಜೆ ಇರಿಸಿದ ಮುಂಚೂಣಿ ರಾಜ್ಯ ಎಂಬ ಕೀರ್ತಿ ಕರ್ನಾಟಕಕ್ಕೆ ಇದೆ. 1993ರಲ್ಲಿ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಪಂಚಾಯತ್ ರಾಜ್‌ನ ಈ ವ್ಯವಸ್ಥೆಯು ಮೂರು ದಶಕಗಳನ್ನು ಪೂರೈಸಿದೆ. 30 ವರ್ಷಗಳ ಸಂಭ್ರಮಾಚರಣೆಯ ಜೊತೆಯಲ್ಲೇ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವುದಕ್ಕಾಗಿ 'ರಾಷ್ಟ್ರೀಯ ಗ್ರಾಮ ಸ್ವರಾಜ್ ಸಮ್ಮೇಳನ' ಆಯೋಜಿಸಲು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಿದ್ಧತೆ ನಡೆಸಿದೆ. ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹತ್ತು ವೃಂದಗಳ ಅಧಿಕಾರಿಗಳು, ನೌಕರರು ಮತ್ತು ಗ್ರಾಮ ಪಂಚಾಯಿತಿಗಳ ಚುನಾಯಿತ ಸದಸ್ಯರು ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ. ಶುಕ್ರವಾರದಿಂದ ರಾಜ್ಯಾದ್ಯಂತ 5,598 ಗ್ರಾಮ ಪಂಚಾಯಿತಿಗಳ ಒಂದು ಲಕ್ಷಕ್ಕೂ ಹೆಚ್ಚಿನ ಅಧಿಕಾರಿಗಳು, ನೌಕರರು ಧರಣಿಯಲ್ಲಿ ತೊಡಗಿದ್ದಾರೆ. ಗ್ರಾಮ ಪಂಚಾಯಿತಿಗಳಲ್ಲಿ ಆಡಳಿತ ಸಂಪೂರ್ಣ ಸ್ಥಬ್ದವಾಗಿದೆ. ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು, ನೌಕರರ ಜ್ಯೇಷ್ಠತಾ ಪಟ್ಟಿ ಅಂತಿಮಗೊಳಿಸುವುದು, ಬಡ್ತಿಗೆ ಸಂಬಂಧಿಸಿದ ತೊಡಕುಗಳ ನಿವಾರಣೆ, ಕರ ವಸೂಲಿ ಮಾಡುವವರು, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳು, ನೀರುಗಂಟಿಗಳು, ಜವಾನರು ಮತ್ತು ಸ್ವಚ್ಛತಾ ಕೆಲಸದಲ್ಲಿ ತೊಡಗಿರುವವರಿಗೆ ಕಾರ್ಮಿಕ ರಾಜ್ಯ ವಿಮೆ, ಭವಿಷ್ಯ ನಿಧಿ ಸೌಲಭ್ಯ ಕಲ್ಪಿಸುವುದು, ಆರೋಗ್ಯ ವಿಮೆ ಸೇರಿದಂತೆ ಹಲವು ಬೇಡಿಕೆಗಳನ್ನು ನೌಕರರು ಮುಂದಿಟ್ಟಿದ್ದಾರೆ. ಜ್ಯೇಷ್ಠತಾ ಪಟ್ಟಿ ಅಂತಿಮಗೊಳಿಸುವುದು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಹುದ್ದೆಯನ್ನು ಬಿ ಗುಂಪಿನ ಹುದ್ದೆಗಳನ್ನಾಗಿ ಉನ್ನತೀಕರಿಸುವುದು ಸೇರಿದಂತೆ ಕೆಲವು ಬೇಡಿಕೆಗಳು ದೀರ್ಘ ಕಾಲದಿಂದಲೂ ಇವೆ. ಅವುಗಳನ್ನು ಇತ್ಯರ್ಥಪಡಿಸುವುದಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಹಿಂದೆ ಭರವಸೆಯನ್ನೂ ನೀಡಿದ್ದರು.



ಮುಷ್ಕರದಿಂದಾಗಿ ರಾಜ್ಯದ ಗ್ರಾಮೀಣ ಪ್ರದೇಶಗಳ ಸಾಮಾನ್ಯ ಜನರು ತೀವ್ರ ಸಮಸ್ಯೆ ಎದುರಿಸುವಂತಾಗಿದೆ

ಹೋರಾಟದ ಜೊತೆ ಕೈಜೋಡಿಸಿರುವ ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟವು 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ–1993'ರ ಅನ್ವಯ ಗ್ರಾಮ ಪಂಚಾಯಿತಿಗಳು ಸ್ಥಳೀಯ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ಅಗತ್ಯವಿರುವ ಜವಾಬ್ದಾರಿ ಮತ್ತು ಅಧಿಕಾರವನ್ನು ಹಂಚಿಕೆ ಮಾಡುವಂತೆ ಆಗ್ರಹಿಸಿದೆ. ಗ್ರಾಮ ಪಂಚಾಯಿತಿಗಳನ್ನು ಸ್ವಾಯತ್ತ ಸ್ಥಳೀಯ ಸರ್ಕಾರಗಳನ್ನಾಗಿ ಪರಿವರ್ತಿಸಬೇಕು ಎಂಬುದು ಗ್ರಾಮ ಪಂಚಾಯಿತಿ ಸದಸ್ಯರ ಪ್ರಮುಖ ಬೇಡಿಕೆ. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ಸಭೆಗಳಿಗೆ ಬಲ ತುಂಬುವುದು, ಗ್ರಾಮ ಪಂಚಾಯಿತಿಗಳ ಸ್ಥಾಯಿ ಸಮಿತಿಗಳನ್ನು ಸಕ್ರಿಯಗೊಳಿಸುವುದು, ಗ್ರಾಮ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳನ್ನು ರಾಜ್ಯ ಶಿಷ್ಟಾಚಾರದ ವ್ಯಾಪ್ತಿಗೆ ತರುವುದು ಹಾಗೂ ಅವರಿಗೆ ಕೇರಳ ಮಾದರಿಯಲ್ಲಿ ಗೌರವಧನ ಮತ್ತು ಸೌಲಭ್ಯಗಳನ್ನು ನೀಡಬೇಕೆಂಬ ಬೇಡಿಕೆಗಳೂ ಇವೆ. ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು, ನೌಕರರು ಮತ್ತು ಚುನಾಯಿತ ಸದಸ್ಯರು ಒಟ್ಟಾಗಿ ಮುಷ್ಕರ ಆರಂಭಿಸಿರುವುದು ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆಗಳ ತೀವ್ರತೆಯನ್ನು ತೆರೆದಿಟ್ಟಿದೆ.

ಮುಷ್ಕರ ಆರಂಭಿಸುವ ಕುರಿತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ಎಲ್ಲ ವೃಂದ ಸಂಘಗಳು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟ ಹಲವು ದಿನಗಳ ಹಿಂದೆಯೇ ಪ್ರಕಟಿಸಿದ್ದವು. ಆದರೆ, ಹೋರಾಟದ ನೇತೃತ್ವ ವಹಿಸಿರುವವರ ಜೊತೆ ಮಾತುಕತೆ ನಡೆಸಿ ಮನವೊಲಿಸುವ ಪ್ರಯತ್ನವನ್ನು ಇಲಾಖೆಯ ಅಧಿಕಾರಿಗಳು ಸಮರ್ಪಕವಾಗಿ ಮಾಡಲಿಲ್ಲ. ನಾಲ್ಕು ದಿನಗಳಿಂದ ನಡೆಯುತ್ತಿರುವ ಮುಷ್ಕರದಿಂದ ರಾಜ್ಯದ ಗ್ರಾಮೀಣ ಪ್ರದೇಶಗಳ ಸಾಮಾನ್ಯ ಜನರು ತೀವ್ರ ಸಮಸ್ಯೆ ಎದುರಿಸುವಂತಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೆಲಸಗಳು ಸಂಪೂರ್ಣ ಸ್ಥಗಿತವಾಗಿವೆ. ಇ–ಸ್ವತ್ತು ಸೇರಿದಂತೆ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ವಿತರಿಸುವ ಪ್ರಕ್ರಿಯೆ ಸ್ಥಗಿತಗೊಂಡಿರುವುದರಿಂದ ಗ್ರಾಮ ಪಂಚಾಯಿತಿಗಳ ಆದಾಯಕ್ಕೂ ಕತ್ತರಿಬಿದ್ದಿದೆ. ಕುಡಿಯುವ ನೀರು ಪೂರೈಕೆ, ಘನ ತ್ಯಾಜ್ಯ ವಿಲೇವಾರಿಯೂ ತೊಡಕಾಗಿದೆ. ಗ್ರಾಮ ಪಂಚಾಯಿತಿಗಳ ಆಡಳಿತ ವ್ಯವಸ್ಥೆಯು ಸರಾಗ ಕ್ರಿಯಾಶೀಲವಾಗಿ ಇರುವಂತೆ ನೋಡಿಕೊಳ್ಳಬೇಕಾದುದು ರಾಜ್ಯ ಸರ್ಕಾರದ ಜವಾಬ್ದಾರಿ. ಮುಷ್ಕರ ನಿರತರ ಜೊತೆ ಮಾತುಕತೆ ನಡೆಸಿ, ಅವರ ಮನವೊಲಿಸಿ ಗ್ರಾಮ ಪಂಚಾಯಿತಿಗಳ ಆಡಳಿತವನ್ನು ಹಳಿಗೆ ತರಬೇಕು. ಈ ವಿಚಾರದಲ್ಲಿ ರಾಜ್ಯ ಸರ್ಕಾರವು ಹಟಮಾರಿ ಧೋರಣೆ ತಳೆಯುವುದು ಸರಿಯಲ್ಲ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರೂ ಸೇರಿದಂತೆ ಸರ್ಕಾರದ ಪ್ರಮುಖರು ತಕ್ಷಣ ಮಧ್ಯಪ್ರವೇಶಿಸಿ ಮುಷ್ಕರ ನಿರತರ ಬೇಡಿಕೆಗಳನ್ನು ಸಹಾನುಭೂತಿಯಿಂದ ಆಲಿಸಿ, ಸಾಧ್ಯತೆಗಳ ಅನುಸಾರ ಸ್ಪಂದಿಸಬೇಕಿದೆ.

ದಿನದ ಟ್ವೀಟ್


ನಿರಾಶಾದಾಯಕ ಮಾತುಗಳು



'ಓಲಾ'ದ ವಾಹನ ಮಾರಾಟ ನಂತರದ ಸೇವೆಗಳ ಬಗ್ಗೆ ಕುನಾಲ್ ಕಮ್ರಾ ಮಾಡಿರುವ ಟೀಕೆಗೆ ಭವೀಶ್ ಅಗರ್ವಾಲ್ ಅವರ ಪ್ರತಿಕ್ರಿಯೆ ನಿರಾಶಾದಾಯಕವಾಗಿದೆ. ಉದ್ಯಮಗಳ ನಾಯಕರು ಟೀಕೆಗಳನ್ನು ಘನತೆಯಿಂದ ಸ್ವೀಕರಿಸಬೇಕೇ ವಿನಾ ದೊಡ್ಡಸ್ತಿಕೆಯ ಬಗೆಯಲ್ಲಿ ಅಲ್ಲ. ಓಲಾ ಈಗ ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿ. ಗಾಂಭೀರ್ಯವಿಲ್ಲದ ಇಂತಹ ಮಾತುಗಳು ಷೇರು ಬೆಲೆಯ ಮೇಲೆ ಪ್ರಭಾವ ಬೀರುತ್ತವೆ, ಷೇರುದಾರರ ಹೂಡಿಕೆ ಮೌಲ್ಯವನ್ನು ಕಡಿಮೆ ಮಾಡುತ್ತವೆ.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ



ಜಾತಿ ಜನಗಣತಿ ವಿಷಯವಾಗಿ ಬಿ.ಕೆ.ಹರಿಪ್ರಸಾದ್ ಮನದಾಳದ ಮಾತು ಹೇಳಿದ್ದಾರೆ. ಜಾತಿ ಜನಗಣತಿ ಮುಖ್ಯವೋ ಸರ್ಕಾರ ಮುಖ್ಯವೋ ಅನ್ನುವುದನ್ನು ಹರಿಪ್ರಸಾದ್ ಸ್ಪಷ್ಟಪಡಿಸಲಿ. ಕಾಂತರಾಜ ಸಮಿತಿ ಕೊಟ್ಟ ವರದಿಯನ್ನು ಏಕೆ ಸ್ವೀಕರಿಸಲಿಲ್ಲ? ವರದಿ ಬಿಡುಗಡೆ ಮಾಡಿ ಅಂತ ಮೊನ್ನೆಯೇ ಹೇಳಿದ್ದೇನೆ. ವರದಿ ಕೊಟ್ಟು 8-10 ತಿಂಗಳಾದವು. ಇನ್ನೂ ಏಕೆ ಸುಮ್ಮನಿದ್ದಾರೆ?

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಶುಕ್ರವಾರ, 8-10-1999

• **ಬುಧವಾರ ಮತ್ತೆ ಅಟಲ್ ಸರ್ಕಾರ**

ನವದೆಹಲಿ, ಅ. 7– ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟವು 290ಕ್ಕೂ ಹೆಚ್ಚು ಸ್ಥಾನಗಳನ್ನು ಪಡೆದಿದ್ದು ಸರಳ ಬಹುಮತದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಮುಂದಾಳುತನದ ಸರ್ಕಾರ ಬುಧವಾರ ಮತ್ತೆ ಅಧಿಕಾರಕ್ಕೆ ಬರುವುದು ಸ್ಪಷ್ಟವಾಗಿದೆ.

ಬಿಜೆಪಿಯ ನೂತನ ಲೋಕಸಭಾ ಸದಸ್ಯರು ಭಾನುವಾರ ಬೆಳಿಗ್ಗೆ ಸೇರಿ ನಂತರ ಮಧ್ಯಾಹ್ನ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ ನೂತನ ಸಂಸದೀಯ ಪಕ್ಷದ ಸಭೆಯು ಪ್ರಧಾನಿ ವಾಜಪೇಯಿ ಅವರನ್ನು ವಿಧಿವತ್ತಾಗಿ ತನ್ನ ನಾಯಕನನ್ನಾಗಿ ಆಯ್ಕೆ ಮಾಡಲಿದೆ.

• **ಕೃಷ್ಣ ಮುಖ್ಯಮಂತ್ರಿ: ಬಹುತೇಕ ಖಚಿತ**

ಬೆಂಗಳೂರು, ಅ. 7– ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಎಸ್.ಎಂ. ಕೃಷ್ಣ ಅವರೇ ರಾಜ್ಯದ ನೂತನ ಮುಖ್ಯಮಂತ್ರಿಯಾಗುವುದು ಬಹುತೇಕ ಖಚಿತವಾಗಿದೆ.

ವಿಧಾನಸಭೆಯ 224 ಸ್ಥಾನಗಳ ಪೈಕಿ ಕಾಂಗ್ರೆಸ್ ಪಕ್ಷವು 132 ಸ್ಥಾನಗಳನ್ನು ಗೆದ್ದು ನಿಚ್ಚಳ ಬಹುಮತ ಗಳಿಸಿರುವ ಹಿನ್ನೆಲೆಯಲ್ಲಿ ಪಕ್ಷದಲ್ಲಿ ಹೊಸ ಸರ್ಕಾರ ರಚನೆಗೆ ಚಾಲನೆ ದೊರೆತಿದೆ. ಮುಖ್ಯಮಂತ್ರಿ ಯಾರಾಗಬೇಕು ಎಂಬ ಬಗ್ಗೆ ಚರ್ಚೆ ಈಗಾಗಲೇ ಆರಂಭವಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 8-10-1974

• **ಹಕ್ಸರ್‌ಗೆ ಯೋಜನಾ ಖಾತೆ ಸಂಭವ ಧರ್ ಮಾಸ್ಕೋದಲ್ಲಿ ರಾಯಭಾರಿ**

ನವದೆಹಲಿ, ಅ. 7– ಪ್ರಧಾನ ಮಂತ್ರಿಯ ಮಾಜಿ ಪ್ರಧಾನ ಕಾರ್ಯದರ್ಶಿ ಪಿ.ಎನ್. ಹಕ್ಸರ್ ಅವರನ್ನು ಯೋಜನಾ ಸಚಿವರನ್ನಾಗಿ ನೇಮಕ ಮಾಡುವ ಸಂಭವವಿದೆ.

ಈಗ ಯೋಜನಾ ಸಚಿವರಾಗಿರುವ ಡಿ.ಪಿ. ಧರ್ ಅವರನ್ನು ಕೆ.ಎಸ್. ಶೆಲ್ವಂಕರ್ ಅವರ ಸ್ಥಾನದಲ್ಲಿ ಮಾಸ್ಕೋದಲ್ಲಿ ಭಾರತದ ರಾಯಭಾರಿಯನ್ನಾಗಿ ನೇಮಕ ಮಾಡಲಾಗುವುದು ಎಂದು ತಿಳಿದುಬಂದಿದೆ.

• **ಅಬಕಾರಿ ಸುಂಕಗಳ ಮೇಲೆ ಕಣ್ಣು**

ನವದೆಹಲಿ, ಅ.7– ಕೇಂದ್ರ ಅಬಕಾರಿ ಸುಂಕಗಳನ್ನು ತಪ್ಪಿಸುವುದನ್ನು ತಡೆಯಲು ವಿಧಿಸಿರುವ ಕ್ರಮ ಕೈಗೊಳ್ಳುವ ಬಗ್ಗೆ ಹಣಕಾಸು ಸಚಿವ ಖಾತೆ ಪರಿಶೀಲಿಸುತ್ತಿದೆ. ಕಳ್ಳಸಾಗಣೆದಾರರನ್ನು ಸದೆಬಡಿಯುವ ಕ್ರಮಗಳ ಮುಂದುವರಿಯುವ ಹಂತದಲ್ಲಿ ಕೇಂದ್ರ ಸರ್ಕಾರವು ಸುಂಕ ತಪ್ಪಿಸುವವರ ಪತ್ತೆಹಚ್ಚಿ ಶಿಕ್ಷಿಸುವ ಆಲೋಚನೆಯಲ್ಲಿದೆ. ಎಲ್ಲ ಆರ್ಥಿಕ ಅಪರಾಧಿಗಳಿಗೆ ಉಗ್ರ ಶಿಕ್ಷೆ ವಿಧಿಸುವಂತೆ ಕಾನೂನು ಆಯೋಗವು ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ.

ಶಿಕ್ಷಕರ ದಿನಾಚರಣೆಯನ್ನು ಇನ್ನಷ್ಟು ಅರ್ಥಪೂರ್ಣ ಆಗಿಸುವ ದಿಕ್ಕಿನಲ್ಲಿ ಪ್ರಯತ್ನ ನಡೆಯಬೇಕಿದೆ

ಶಿಕ್ಷಕರ ಸ್ಮರಣೆ: ಹೊಸ ಬಗೆ ಸಾಧ್ಯವೇ?



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಜಿಲ್ಲೆಯೊಂದರ ವಿವಿಧ ತಾಲ್ಲೂಕುಗಳಲ್ಲಿ ಮತ್ತು ಜಿಲ್ಲಾ ಕೇಂದ್ರದಲ್ಲಿ ನಡೆಯುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮಗಳ ಎಲ್ಲ ಆಮಂತ್ರಣ ಪತ್ರಿಕೆಗಳನ್ನು ಒಟ್ಟಿಗೆ ಇಟ್ಟುಕೊಂಡು ನೋಡುವುದೇ ಒಂದು ಸಂಭ್ರಮ. ಎಲ್ಲ ತಾಲ್ಲೂಕುಗಳಲ್ಲೂ ಜಿಲ್ಲಾ ಕೇಂದ್ರದಲ್ಲೂ ನಡೆಯುವ ಕಾರ್ಯಕ್ರಮಗಳಲ್ಲಿ ಅದೇ ಅಭ್ಯಾಗತರು ಇರುತ್ತಾರೆ! ಕಾರ್ಯಕ್ರಮಗಳೆಲ್ಲ ಒಂದೇ ಸಮಯಕ್ಕೆ ನಿಗದಿಯಾಗಿರುತ್ತವೆ. ಒಬ್ಬನೇ ವ್ಯಕ್ತಿ ಒಂದೇ ಸಮಯದಲ್ಲಿ ಎಲ್ಲ ಸ್ಥಳಗಳಲ್ಲೂ ಇರುವುದು ಸಾಧ್ಯವಿಲ್ಲವೆಂದು ಆಹ್ವಾನಿತರಾದವರಿಗೂ ಆಹ್ವಾನಿಸಿದವರಿಗೂ ಆಮಂತ್ರಣ ಪತ್ರಿಕೆ ನೋಡುವವರಿಗೂ ಗೊತ್ತಿರುತ್ತದೆ. ಆದರೆ ಅವು ಶಿಷ್ಟಾಚಾರದ ಪ್ರಕಾರ ನಮೂದಿಸಬೇಕಾದ ಹೆಸರುಗಳು. ನೂರು ವರ್ಷಗಳ ನಂತರದ ಜನರಿಗೆ ಈ ಆಮಂತ್ರಣ ಪತ್ರಿಕೆಗಳು ನಮ್ಮ ಚಿಂತನಾಶೂನ್ಯತೆಗೆ ಪುರಾವೆಯಾಗಿ ಸಿಗುತ್ತವೆ. ಶಿಕ್ಷಕರ ದಿನಾಚರಣೆಯ ಆಮಂತ್ರಣ ಪತ್ರಿಕೆಯೇ ಈ ಮಾದರಿಯಲ್ಲಿರುವುದು ನಮ್ಮ ಕಾಲಮಾನದ ಸುಶಿಕ್ಷಿತರ ವಿವೇಕದ ಮಟ್ಟ ಏನು ಎಂಬುದನ್ನು ಸೂಚಿಸುತ್ತದೆ. ಇಂಥವರು ಬರಲು ಸಾಧ್ಯವಿಲ್ಲ ಎಂದು ಖಚಿತವಾಗಿ ಗೊತ್ತಿರುವಾಗ ಹೆಸರನ್ನು ಕೈಬಿಡಲು ಸಾಧ್ಯವಾಗುವ ಹಾಗೆ ಶಿಷ್ಟಾಚಾರದಲ್ಲಿ ಪರಿಷ್ಕರಣೆ ತರಲು ಸಾಧ್ಯವಾದೀತೆ?

ಸರ್ವಪಲ್ಲಿ ರಾಧಾಕೃಷ್ಣನ್ ಅವರ ಅಭಿಮಾನಿಗಳಲ್ಲಿ ಕೆಲವರು 'ನಿಮ್ಮ ಜನ್ಮದಿನವನ್ನು ಆಚರಿಸುತ್ತೇವೆ' ಎಂದಾಗ, ರಾಧಾಕೃಷ್ಣನ್ ಅವರು, 'ನನ್ನ ಜನ್ಮದಿನ ಎಂದು ಬೇಡ. ಆಚರಿಸುವುದಿದ್ದರೆ ನನ್ನ ಜನ್ಮದಿನವನ್ನು ಶಿಕ್ಷಕರ ದಿನವಾಗಿ ಆಚರಿಸಿ' ಎಂದರು. ಅದರ ಪರಿಣಾಮವಾಗಿ ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ. ರಾಧಾಕೃಷ್ಣನ್ ಅವರನ್ನು ದೊಡ್ಡ ಮನುಷ್ಯ ಎಂದು ಹೊಗಳಲಾಗುತ್ತದೆ. ಆದರೆ ರಾಧಾಕೃಷ್ಣನ್ ಅವರ ತತ್ವಶಾಸ್ತ್ರೀಯ ಕೃತಿಗಳಲ್ಲಿ ಯಾವುದನ್ನೂ ಪರಿಚಯಿಸುವ ವ್ಯವಸ್ಥೆ ಶಿಕ್ಷಕರ ದಿನಾಚರಣೆಯಲ್ಲಿ ಇರುವುದಿಲ್ಲ. ಅಂದರೆ ರಾಧಾಕೃಷ್ಣನ್ ಅವರ ಚಿಂತನೆಗಳನ್ನು ತಿಳಿಯದೆಯೇ ಅವರನ್ನು ಹೊಗಳುವ ಪದ್ಧತಿಯನ್ನು ಅನುಸರಿಸಲಾಗುತ್ತದೆ! ಅಕ್ಟೋಬರ್ 5 ವಿಶ್ವ ಶಿಕ್ಷಕರ ದಿನ. ಈ ಸಂದರ್ಭವು, ಭಾರತದಲ್ಲಿ ಸೆಪ್ಟೆಂಬರ್ 5ರಂದು ಆಚರಿಸಲಾಗುತ್ತಿರುವ ಶಿಕ್ಷಕರ ದಿನದ ಬಗ್ಗೆ ಒಂದಿಷ್ಟು ಅವಲೋಕನ ನಡೆಸಲು ಕಾರಣವಾಯಿತು.

ಎಲ್ಲ ವ್ಯವಸ್ಥೆಗಳ ಹಾಗೆ ಶಿಕ್ಷಕರ ದಿನಾಚರಣೆಯೂ ಸಂಕೀರ್ಣವಾಗಿದೆ. ಶಿಕ್ಷಕರ ದಿನಾಚರಣೆ ಎಂದು ಮಾಡುವುದಾದರೆ ಅಂಗನವಾಡಿ ಕಾರ್ಯಕರ್ತೆಯರಿಂದ ತೊಡಗಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರವರೆಗೆ ಎಲ್ಲರೂ ಒಂದು ದಿನದ ಮಟ್ಟಿಗಾದರೂ ಒಟ್ಟಾಗಿ ಸೇರುವ ವಿನ್ಯಾಸದಲ್ಲಿ ಮಾಡಬೇಕು. ಆಗ ಶಿಕ್ಷಣದ ವಿವಿಧ ಸ್ತರಗಳಲ್ಲಿ ಪರಿಸ್ಥಿತಿ ಹೇಗಿದೆ ಎಂದಾದರೂ ಚರ್ಚಿಸಲು ಒಂದು ವೇದಿಕೆ ಸೃಷ್ಟಿಯಾಗುತ್ತದೆ. ಆದರೆ ಈಗ ನಡೆಯುವ ಶಿಕ್ಷಕ ದಿನಾಚರಣೆಗಳ ವಿನ್ಯಾಸವೇ ಬೇರೆ. ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಕಡ್ಡಾಯ, ಪ್ರೌಢಶಾಲೆಯವರು ಬೇಕಾದರೆ ಹೋಗಬಹುದು, ಕಾಲೇಜಿನವರಿಗೆ 'ಇಲ್ಲ' ಎನ್ನುವ ಮಾದರಿಯ ರೂಪದಲ್ಲಿದೆ. ಅಲ್ಲದೆ ಅನುದಾನರಹಿತ ಶಾಲೆಯವರಿಗೂ 'ಇಷ್ಟ ಇದ್ದರೆ ಬನ್ನಿ. ಇಲ್ಲದಿದ್ದರೆ ಬೇಡ' ಎಂಬ ಮಾದರಿ ಜಾರಿಯಲ್ಲಿದೆ. ಅಂದರೆ ಶಿಕ್ಷಕರ ದಿನಾಚರಣೆಯೇ ಶಿಕ್ಷಕರನ್ನು ಸಮಾನತೆಯ ತಳಹದಿಗೆ ತರುವ ಬದಲು ಅಸಮಾನತೆಯ ತಳಹದಿಯಲ್ಲಿ ಕಾಣುತ್ತದೆ. ಆಗ ಖಾಸಗಿ ಶಾಲೆಯವರದ್ದೊಂದು ಶಿಕ್ಷಕರ ದಿನಾಚರಣೆ, ವಸತಿ ಶಾಲೆಯವರದ್ದೊಂದು ಶಿಕ್ಷಕರ ದಿನಾಚರಣೆ, ಪದವಿಪೂರ್ವ ಕಾಲೇಜಿನವರದ್ದೊಂದು ಶಿಕ್ಷಕರ ದಿನಾಚರಣೆ, ಪದವಿಯವರದ್ದು ಮತ್ತೊಂದು, ವಿಶ್ವವಿದ್ಯಾಲಯದವರದ್ದು ಇನ್ನೊಂದು, ಖಾಸಗಿ ಶಾಲೆ–ಕಾಲೇಜು–ವಿಶ್ವವಿದ್ಯಾಲಯದವರದ್ದು ಪ್ರತ್ಯೇಕ ಶಿಕ್ಷಕ ದಿನಾಚರಣೆಗಳು ಆಗುತ್ತವೆ. ತಿಂಗಳಿಡೀ ಅಲ್ಲಲ್ಲಿ ಶಿಕ್ಷಕರ ದಿನಾಚರಣೆಗಳು ಇರುತ್ತವೆ.

ಎಲ್ಲ ಕಾರ್ಯಕ್ರಮಗಳ ಹಾಗೆ ಶಿಕ್ಷಕರ ದಿನಾಚರಣೆಗೂ ಅದ್ದೂರಿತನದ ಪ್ರವೇಶ ಆಗಿದೆ. ಕಾರ್ಯಕ್ರಮ ಅದ್ದೂರಿಯಾಗಿ ನಡೆಯಲು ಹಣ ಬೇಕು. ಸರ್ಕಾರವೇ ಸಂಪೂರ್ಣ ಖರ್ಚು ವಹಿಸಿಕೊಳ್ಳದೆ ಇದ್ದಾಗ ಸಂಘಟಕರಿಗೆ ಹಣಕ್ಕಾಗಿ ಯಾರಾದರೂ ಪ್ರಾಯೋಜಕರನ್ನು ಹುಡುಕುವ ಜವಾಬ್ದಾರಿ ಬರುತ್ತದೆ. ಕೊನೆಗೆ ಏನಲ್ಲದಿದ್ದರೆ ಆಯಾ ಭಾಗದ ಶಾಸಕರನ್ನು ಕೇಳಿಕೊಳ್ಳುವ ಕೆಲಸ ನಡೆಯುತ್ತದೆ. ಹಣ ಪಡೆದಾಗ ಹಣ ಕೊಟ್ಟವರು ಗಣ್ಯ ವ್ಯಕ್ತಿಯಾಗುವುದು ಸಹಜ. ಆದರೆ ಶಿಕ್ಷಕರ ದಿನಾಚರಣೆಯಲ್ಲಿ ಒಬ್ಬ ನಿವೃತ್ತ ಅಥವಾ ಸಮರ್ಥ ಶಿಕ್ಷಕನೇ ಗಣ್ಯ ವ್ಯಕ್ತಿಯಾಗಿ ಉಳಿಯಲು ಆಗುವುದಿಲ್ಲ ಎನ್ನುವುದೂ ಅಷ್ಟೇ ಸತ್ಯ. ಪ್ರತಿಭಾವಂತ ಶಿಕ್ಷಕರಿಗೆ, ನಿವೃತ್ತ ಶಿಕ್ಷಕರಿಗೆ ಸನ್ಮಾನ ಇರುತ್ತದೆ. ಆದರೆ ಸನ್ಮಾನಿಸುವ ಗಣ್ಯ ವ್ಯಕ್ತಿ ಬೇರೆಯೇ ಆಗಿರುತ್ತಾರೆ. ಹಣದ ವ್ಯವಹಾರ ಬಂದ ಕೂಡಲೇ ಅದರ ಉಪಉತ್ಪನ್ನವಾಗಿ ಬರುವ ಇನ್ನೂ ಅನೇಕ ಸವಾಲು- ಸಮಸ್ಯೆಗಳನ್ನು ಶಿಕ್ಷಕರ ದಿನಾಚರಣೆಯ ಸಂಘಟಕರು ಎದುರಿಸಬೇಕಾಗುತ್ತದೆ. ಕೆಲವೆಡೆಯಲ್ಲಿ 'ಶಿಕ್ಷಕರಿಗೆ ಜಯವಾಗಲಿ' ಎಂದು ಶಿಕ್ಷಕರೇ ಘೋಷಣೆ ಕೂಗಿಕೊಂಡು ಮೆರವಣಿಗೆ ಹೋಗುವಂತಹ ತಮಾಷೆಗಳೆಲ್ಲ ನಡೆಯುತ್ತವೆ. ಸಮಾರಂಭದ ಭಾಷಣಗಳು ಸಾಮಾನ್ಯವಾಗಿ ಶಿಕ್ಷಕರಿಗೆ ಸನ್ಮಾನ ಮಾಡಿ ಅಭಿನಂದಿಸಿ ಶಿಕ್ಷಕರಿಗೆ ಹೇಳುವ ಬುದ್ಧಿಮಾತುಗಳು ಅಥವಾ ಉಪದೇಶಗಳ ರೂಪದಲ್ಲಿರುತ್ತವೆ. ಇದನ್ನು ಯಾರಾದರೂ ನಿವೃತ್ತ ಶಿಕ್ಷಕರೋ ವಿದ್ವಾಂಸರೋ ಹೇಳುವುದಕ್ಕೂ, ಶಿಕ್ಷಣ ಕ್ಷೇತ್ರದ ಅನುಭವವೇ ಇಲ್ಲದ ಗಣ್ಯ ವ್ಯಕ್ತಿಗಳು ಹೇಳುವುದಕ್ಕೂ ವ್ಯತ್ಯಾಸ ಇರುತ್ತದೆ. ಅಂತಿಮವಾಗಿ ಇವೆಲ್ಲವೂ ಯಾವುದೇ ಉದ್ದೇಶ ಈಡೇರಿಸಲಾಗದ ಒಂದು ಸಂಪ್ರದಾಯವಾಗಿ ಮುಗಿಯುತ್ತವೆ. ಹೀಗಾಗಿ ಶಿಕ್ಷಕರ ದಿನಾಚರಣೆಯಲ್ಲಿ ಮುಂದಿನ ದಿನಗಳಲ್ಲಿ ಕೆಲವೊಂದು ಪರಿಷ್ಕರಣೆಗಳನ್ನು ಮಾಡಿಕೊಂಡರೆ ಶಿಕ್ಷಕರ ದಿನಾಚರಣೆಯನ್ನು ಅರ್ಥಪೂರ್ಣಗೊಳಿಸಬಹುದೇನೊ.




ವ್ಯವಸ್ಥೆ ದೊಡ್ಡದಾಗಿ ಬೆಳೆದಾಗ ಒಳ್ಳೆಯ ಶಿಕ್ಷಕರು ಎಲ್ಲಿದ್ದಾರೆ ಎಂದು ವ್ಯವಸ್ಥೆಗೇ ಗುರುತಿಸಲು ಕಷ್ಟವಾಗಬಹುದು. ಆಗ ಒಬ್ಬ ಶಿಕ್ಷಕ ತಮ್ಮ ಅರ್ಹತೆಯನ್ನು ಪರಿಗಣಿಸಿ ಎಂದು ಕೇಳುವುದರಲ್ಲಿ ತಪ್ಪೇನಿಲ್ಲ. ಅದನ್ನು ಅರ್ಜಿ ಹಾಕಿ ಪಡೆದ ಪ್ರಶಸ್ತಿ ಎಂದು ಮೂದಲಿಸಬೇಕಾಗಿಲ್ಲ. ಅರ್ಜಿ ಹಾಕಿದರೂ ಪರಿಶೀಲಿಸಲು ಪರಿಶೀಲನಾ ಸಮಿತಿ ಇರುತ್ತದಲ್ಲ? ಆದರೆ ಈ ಪ್ರಕ್ರಿಯೆ ಹೆಚ್ಚು ಗೌರವಾನ್ವಿತ ಆಗಿರಬೇಕು. ಅರ್ಜಿ ಹಾಕಿದ ಶಿಕ್ಷಕರೇ ತಾವು ಮಾಡಿದ ಕೆಲಸಗಳ ದಾಖಲೆಗಳನ್ನು ಸಿದ್ಧಪಡಿಸಿ ಕೊಡುವ ಕಾರಕೂನರಾಗದ ಹಾಗೆ ನೋಡಿಕೊಳ್ಳಬೇಕು.

ಅರ್ಜಿ ಸಲ್ಲಿಸಿದ ಶಿಕ್ಷಕರ ವಿವರಗಳನ್ನು ಆಯ್ಕೆ ಸಮಿತಿಯೇ ತರಿಸಿಕೊಳ್ಳಬೇಕು. ಆ ಶಿಕ್ಷಕರಲ್ಲಿ ಕಲಿತು ಹೋದ ವಿದ್ಯಾರ್ಥಿಗಳ ವರದಿ ತೆಗೆದುಕೊಳ್ಳಬೇಕು. ವರ್ತಮಾನದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಾದಾಗ ಅವರಿಗೆ ಪ್ರಿಯವಾದದ್ದನ್ನು ಮಾಡುವ ಶಿಕ್ಷಕರು ಮುಖ್ಯರಾಗುತ್ತಾರೆ. ಶಿಕ್ಷಕರ ಬೋಧನಾ ದಕ್ಷತೆಯನ್ನೇ ಮೌಲ್ಯಮಾಪನ ಮಾಡಬಲ್ಲಷ್ಟು ಸಮರ್ಥರಾಗಿರುವುದಿಲ್ಲ. ಕಲಿಕೆ ಮುಗಿದು ಸುಮಾರು ಹತ್ತು ವರ್ಷ ಕಳೆದ ಹಿರಿಯ ವಿದ್ಯಾರ್ಥಿಗಳಾದರೆ ಅವರಿಗೆ ಶಿಕ್ಷಕರ ಬೋಧನಾ ದಕ್ಷತೆಯನ್ನು ಅರ್ಥೈಸುವ ಸಾಮರ್ಥ್ಯ ಬಂದಿರುತ್ತದೆ. ಹೀಗೆ ಆಯ್ಕೆ ಮಾಡಿದ ನಂತರ ರಾಜ್ಯ ಮಟ್ಟದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಕೊಡಬೇಕು.

ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದ ಶಿಕ್ಷಕರ ದಿನಾಚರಣೆ ರದ್ದುಪಡಿಸುವುದು ಸೂಕ್ತ. ಬದಲಿಗೆ ರಾಧಾಕೃಷ್ಣನ್ ಅವರ ಜನ್ಮದಿನದಂದೇ ಆಯಾ ಶಾಲೆ, ಕಾಲೇಜಿನಲ್ಲಿ ಶಿಕ್ಷಕರ ದಿನಾಚರಣೆಯನ್ನು ವಿದ್ಯಾರ್ಥಿ ಸಂಘಗಳು ಹಳೆಯ ವಿದ್ಯಾರ್ಥಿ ಸಂಘದೊಂದಿಗೆ ಸೇರಿಕೊಂಡು ಶಿಕ್ಷಕರ ದಿನಾಚರಣೆಯನ್ನು ಮಾಡುವುದು ಸೂಕ್ತ. ಶಿಕ್ಷಕರ ದಿನಾಚರಣೆಯ ನೇತೃತ್ವವನ್ನು ವಿದ್ಯಾರ್ಥಿಗಳೇ ವಹಿಸುವುದು ಸಮಂಜಸ. ಅಲ್ಲಿಗೆ ಆಯಾ ಶಾಲೆ, ಕಾಲೇಜು ವ್ಯಾಪ್ತಿಯ ಸಾರ್ವಜನಿಕರು, ಜನಪ್ರತಿನಿಧಿಗಳು ಬಂದು ಶಿಕ್ಷಕರ ದಿನವನ್ನು ಸಂಭ್ರಮದಿಂದ ಆಚರಿಸಬಹುದು. ವಿದ್ಯಾರ್ಥಿಗಳು ತಮ್ಮ ಶಿಕ್ಷಕರಿಂದ ಏನನ್ನು ನಿರೀಕ್ಷಿಸುತ್ತಾರೆ ಎಂದು ವಿದ್ಯಾರ್ಥಿಗಳೊಂದಿಗೆ ಶಿಕ್ಷಕರ ಮುಕ್ತ ಸಂವಾದ ನಡೆಯಬೇಕು. ಊರಿನಲ್ಲಿರುವ ನಿವೃತ್ತ ಶಿಕ್ಷಕರು, ಶಿಕ್ಷಣ ಕ್ಷೇತ್ರದ ಅನುಭವ ಉಳ್ಳವರು, ಜನಪ್ರತಿನಿಧಿಗಳು ಸೇರಿಕೊಂಡು ಉತ್ತಮ ಶಿಕ್ಷಕರ ಲಕ್ಷಣಗಳ ಬಗ್ಗೆ, ಶಿಕ್ಷಣದ ಗುಣಮಟ್ಟದ ಬಗ್ಗೆ ಸಂವಾದಗಳನ್ನು ನಡೆಸಬೇಕು. ಜೊತೆಗೆ ಶಿಕ್ಷಕರ ಪ್ರತಿಭಾ ಪ್ರದರ್ಶನ, ಪ್ರತಿಭಾವಂತ ಶಿಕ್ಷಕರಿಗೆ ಸನ್ಮಾನ, ನಿವೃತ್ತ ಶಿಕ್ಷಕರಿಗೆ ಸನ್ಮಾನ ಇವೆಲ್ಲವನ್ನೂ ವಿದ್ಯಾರ್ಥಿಗಳ ಸಮ್ಮುಖದಲ್ಲೇ ಮಾಡುವುದು ಹೆಚ್ಚು ಅರ್ಥಪೂರ್ಣ. ಶಿಕ್ಷಕರ ದಿನಾಚರಣೆಯ ಸಂದೇಶಗಳು ವಿದ್ಯಾರ್ಥಿಗಳನ್ನು ಪರಿಣಾಮಕಾರಿಯಾಗಿ ತಲುಪಲು ಸಾಧ್ಯವಾಗುತ್ತದೆ.

ಚುರುಮುರಿ



ಹೀಗೊಂದು ಕಂಪನ!

• ಚಂದ್ರಕಾಂತ ವಡ್ಡು

'ಬೈ ಟೂ ಕಾಫಿ ಬಳಗ'ದಲ್ಲಿ ತಿಂಗಳೇಶ ಇನ್ನೇನು ಇಸ್ರೇಲ್ ಕ್ಷಿಪಣಿ ಬಿತ್ತು ಎಂಬಂತೆ ಎಚ್ಚರಿಸಿದ: 'ನಮ್ಮ ಪ್ರಜಾಪ್ರಭುತ್ವ ಅಪಾಯದಲ್ಲಿದೆ!'

'ಅದೇನು ಬ್ರೇಕಿಂಗ್ ನ್ಯೂಸ್ ಥರ ಹೇಳ್ತಿ ಬಿಡಪ್ಪೋ... ಅದು ಪ್ರಗತಿಪರರ ಹಳೆಯ ಸ್ಲೋ-ಗನ್ನು!'

'ಹಳೆಯದೇನೋ ಸರಿ. ಆದರೆ ದಸರಾ ಉದ್ಘಾಟನೆಯಲ್ಲಿ ಹಂಪನಾ ಅವರು ಸರ್ಕಾರ ಉರುಳಿಸಬಾರದು ಅಂತ ಪ್ರಜಾಪ್ರಭುತ್ವಪರ ಅನುಕಂಪನಾ ಹುಟ್ಟುಹಾಕಿದ್ದಾರೆ'.

'ಅದರಲ್ಲೇನು ತಪ್ಪಿದೆ... ಚುನಾಯಿತ ಸರ್ಕಾರ ಉರುಳಿಸಬಾರದು ಅಂತ ನಾಡೋಜರು ಸರಿಯಾಗಿಯೇ ಭಾಷಣ ಮಾಡಿದ್ದಾರೆ...'

'ಅಯ್ಯೋ ಅದು ಹಾಗಲ್ಲ, ಅವರು ಭಾಷಣ ಮಾಡುವ ಬದಲು ಲಿಖಿತ ಭಾಷಣ ಓದಿದ್ದಾರೆ ಕಣಪ್ಪಾ... ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಮಾಡಿದಂತೆ ಇವರೂ ಮಾಡಿದ್ದಾರೆ ಅಂತ ಒಂದಿಷ್ಟು ಜನ ಮಾತಾಡ್ಕಂಡವ್ರೆ'.

'ಅದೂ ತಪ್ಪಲ್ಲ ಬಿಡು. ಎಷ್ಟೆಂದರೂ ಅದು ಸರ್ಕಾರದ ಅಧಿಕೃತ ಕಾರ್ಯಕ್ರಮ, ಅಧಿಕೃತ ಉದ್ಘಾಟಕರು, ಅಧಿಕೃತ ಮಾತನ್ನೇ ಆಡಿದ್ದಾರೆ'.

'ವೇದಿಕೆಯಲ್ಲಿ ಸಾಹಿತಿ ಹುಟ್ಟಿಸಿದ ಅನುಕಂಪನಕ್ಕಿಂತ ವಿರೋಧ ಪಕ್ಷದ ಜಿಟಿಡಿ ಹೊರಡಿಸಿದ ಕಂಪನ ದೊಡ್ಡದು... ಅದು ರಿಕ್ಟರ್ ಮಾಪಕದಲ್ಲಿ ಅಳತೆಗೇ ಸಿಕ್ಕಿಲ್ಲವಂತೆ...'

'ಹೌದೌದು, ಜಿಟಿಡಿ ರಾಜೀನಾಮೆ ಕರೆಗೆ ಎಫ್‌ಐಆರ್-ರಾಜಕಾರಣಿಗಳ ಅಂತರಾತ್ಮಗಳೆಲ್ಲಾ ಬೆಚ್ಚಿಬೀಳುವಂತಾಗಿದೆ'.

'ಸಿ.ಎಂ. ಸಿದ್ರಾಮಣ್ಣ ಬೇರೆ ಆತ್ಮಸಾಕ್ಷಿ ನ್ಯಾಯಾಲಯಕ್ಕೆ ಅಪೀಲು ಹಾಕಿಕೊಂಡಿದ್ದಾರೆ... ಆ ಆತ್ಮಸಾಕ್ಷಿ ಪತ್ತೆ ಹಚ್ಚೋದ್ಹೇಗೆ ಎಂಬ ಸಮಸ್ಯೆಯ ಸುಳಿಯಲ್ಲಿ ಮಾಜಿ ಸಿ.ಎಂ. ಬಸಣ್ಣ ಸಿಲುಕಿದ್ದಾರೆ'.

'ಅದು ಬರೀ ಆತ್ಮಸಾಕ್ಷಿ ಅಲ್ಲ ಮಾರಾಯಾ, ಗಾಂಧಿ ಜಯಂತಿ ದಿನ ಹೊರಬಿದ್ದ ಮಹಾತ್ಮಸಾಕ್ಷಿ!'

'ಅದೇನೇ ಇರಲಿ, ಎಂಥ ಸಂಕಷ್ಟದ ಸಮಯದಲ್ಲೂ ಈ ರಾಜಕಾರಣಿಗಳಿಗೆ ಆತ್ಮವಿಶ್ವಾಸ ಎಂಬುದಿರುತ್ತದಲ್ಲಾ ಅದಕ್ಕೆ ಹ್ಯಾಟ್ಸಾಫ್ ಹೇಳಲೇಬೇಕು'.

'ಹಾಗೇನಿಲ್ಲ. ಆತ್ಮಸಾಕ್ಷಿ, ಆತ್ಮವಿಶ್ವಾಸ, ಆತ್ಮವಂಚನೆಗಳು ಸಿಬಿಐ, ಸಿಐಡಿ ರೆಡಾರಿಗೆ ಸಿಗೋಲ್ಲ. ಕೊನೆಗೆ 'ಮಾಫಿಸಾಕ್ಷಿ' ಆಗೋ ಹವಣಿಕೆ, ಅಷ್ಟೇ!'

ಸಂಗತ

ಮಕ್ಕಳ ಆತ್ಮವಿಶ್ವಾಸ ಕಸಿಯದಿರಿ

ಮಕ್ಕಳು ಚೈತನ್ಯದ ಚಿಲುಮೆಯಂತೆ ಇರುತ್ತಾರೆ. ಬದುಕಿನ ಬಗ್ಗೆ ಅವರಲ್ಲಿ ಭರವಸೆ ಮೂಡಿಸುವುದು ಪೋಷಕರ ಆದ್ಯ ಕರ್ತವ್ಯಗಳಲ್ಲಿ ಒಂದು

• ಲೋಕೇಶ ಬೆಕ್ಕಳಲೆ

ಮಗನ ಶಾಲೆಯಲ್ಲಿ ಮಧ್ಯವಾರ್ಷಿಕ ಪರೀಕ್ಷೆಗಳು ಶುರುವಾಗಿದ್ದವು. ಎರಡನೆಯ ತರಗತಿಯಲ್ಲಿ ಕಲಿಯುತ್ತಿದ್ದ ಅವನನ್ನು ಕುತೂಹಲಕ್ಕೆ 'ಪಾಪು, ಹೇಗೆ ಓದಿದ್ದೀಯ? ಇವತ್ತು ಯಾವುದು ಪರೀಕ್ಷೆ' ಎಂದು ಪ್ರಶ್ನಿಸಿದೆ. 'ಹಿಂದಿ... ಆದರೆ ನಾನು ಹಿಂದಿಯಲ್ಲಿ ವೀಕ್' ಅಂದ. ಪರೀಕ್ಷೆ ಬರೆಯುವ ಮುನ್ನವೇ ಮೌಲ್ಯಮಾಪನ ಮಾಡಿಕೊಂಡಿದ್ದು ಹೇಗೆ ಎಂಬ ಪ್ರಶ್ನೆ ಕಾಡಿತು. ಅವನಲ್ಲಿ ಆತ್ಮವಿಶ್ವಾಸ ಮೂಡಿಸಲು 'ನೀನು ಬುದ್ಧಿವಂತ. ಪರೀಕ್ಷೆ ಚೆನ್ನಾಗಿ ಬರೆಯುವೆ' ಎಂದು ಉತ್ತೇಜಿಸಲು ಪ್ರಯತ್ನಿಸಿದೆ. ಅವನು 'ಇಲ್ಲ ಅಪ್ಪ... ಅಮ್ಮ ಯಾವಾಗಲೂ ಹೇಳುತ್ತೆ, ನೀನು ಹಿಂದಿಯಲ್ಲಿ ವೀಕ್ ಇದ್ದೀಯ... ಅಂತ' ಎಂದು ಹೇಳುತ್ತಿದ್ದಂತೆ ಅವನ ಶಾಲೆಯ ವಾಹನದ ಸದ್ದಾಯಿತು.


ಪೋಷಕರ ನಕಾರಾತ್ಮಕ ಮಾತುಗಳು ಮಕ್ಕಳ ಆತ್ಮವಿಶ್ವಾಸವನ್ನು ಹೇಗೆ ಚಿವುಟಿ ಹಾಕುತ್ತವೆ ಎಂಬುದಕ್ಕೆ ಇದೊಂದು ನಿದರ್ಶನ. ಮಕ್ಕಳ ಶಾಲೆ ಮನೇಲಲ್ವೇ ಎಂದು ಕೈಲಾಸಂ ಹೇಳಿದ್ದಾರೆ. ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಎಂಬ ಮಾತು ಇದೆ. ತಾಯಿಯೇ ಮೊದಲ ಗುರು ಎಂಬುದು ಅಕ್ಷರಾಭ್ಯಾಸಕ್ಕೆ ಮಾತ್ರವಲ್ಲ; ಮಗುವಿನಲ್ಲಿನ ಆತ್ಮವಿಶ್ವಾಸ, ಸಕಾರಾತ್ಮಕ ಆಲೋಚನೆಗಳಿಗೂ ತಾಯಿಯೇ ಬುನಾದಿ. ಪೋಷಕರ ನಡವಳಿಕೆ, ಆಡುವ ಮಾತು ಮಗುವಿಗೆ 'ನನ್ನಿಂದ ಸಾಧ್ಯ' ಎಂಬ ಭಾವನೆ ಮೂಡಿಸಬೇಕು. ಮನೋಸ್ಥೈರ್ಯ ಕುಗ್ಗಿಸಬಾರದು. ಕೆಲವು ಸಂದರ್ಭಗಳಲ್ಲಿ ಮಕ್ಕಳು ಮಾನಸಿಕ ಖಿನ್ನತೆಗೆ ಒಳಗಾಗಲು ಪೋಷಕರ ಋಣಾತ್ಮಕ ನುಡಿಗಳೇ ಕಾರಣ.

ಪೋಷಕರು ಮಕ್ಕಳ ಮುಂದೆ ಮಾತನಾಡುವಾಗ ಎಚ್ಚರ ವಹಿಸಬೇಕು. 'ಕೆಲಸಕ್ಕೆ ಬಾರದವನು, ನಿನ್ನಿಂದ ಈ ಕೆಲಸ ಆಗದು, ನೀನು ದಡ್ಡ, ಈ ಸಲ ಖಂಡಿತ ಫೇಲಾಗುತ್ತೀಯ' ಎಂದೆಲ್ಲ ಮಕ್ಕಳೆದುರು ಆಡುವ ಮಾತುಗಳು ಅವರ ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರುತ್ತವೆ. ಮಗು ತಾನು ಅಸಮರ್ಥ ಎಂಬ ತೀರ್ಮಾನಕ್ಕೆ ಬರುತ್ತದೆ. ಅಪ್ಪಿತಪ್ಪಿಯೂ ಇಂತಹ ಯೋಚನೆಗಳು ಮಕ್ಕಳ ಮನಸ್ಸಿನಲ್ಲಿ ಬರಬಾರದು. ಆನೆಯ ಕಾಲಿಗೆ ಸರಪಳಿ ತೊಡಿಸಿ, ಗೂಟಕ್ಕೆ ಕಟ್ಟಿ ಹಾಕಿರುತ್ತಾರೆ. ಅದರ ದೈತ್ಯ ಶಕ್ತಿಯ ಮುಂದೆ ಅದು ಏನೇನೂ ಅಲ್ಲ. ಆದರೂ ಬಿಡಿಸಿಕೊಳ್ಳಲು ತನ್ನಿಂದ ಸಾಧ್ಯವಿಲ್ಲ ಎಂದು ಆನೆ ಭಾವಿಸಿರುತ್ತದೆ. ಕಾರಣ ಮರಿಯಾಗಿದ್ದಾಗ ಗೂಟದಿಂದ ಬಿಡಿಸಿಕೊಳ್ಳಲು ಯತ್ನಿಸಿ, ಸೋತಿರುತ್ತದೆ. ಆಗ ಅದರ ಮನಸ್ಸಿನಲ್ಲಿ ಮೂಡಿದ 'ನನ್ನಿಂದ ಅಸಾಧ್ಯ' ಎಂಬ ಭಾವನೆಯು ಅದು ಬೆಳೆದು ದೊಡ್ಡದಾದ ಮೇಲೂ ಕೂತಿರುತ್ತದೆ. ಆದ್ದರಿಂದ ಮಕ್ಕಳು ಬಾಲ್ಯದಲ್ಲಿ ಬೆಳೆಸಿಕೊಳ್ಳುವ ಭಾವನೆಗಳು ಅವರ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಯನ್ನು ನಿರ್ಧರಿಸುತ್ತವೆ.

ಕೆಲವಷ್ಟು ವಿಷಯಗಳಲ್ಲಿ ಮಕ್ಕಳು ಹಿಂದಿರಬಹುದು ಅಥವಾ ಕೆಲವು ದೌರ್ಬಲ್ಯಗಳನ್ನು ಹೊಂದಿರಬಹುದು. ಇಂತಹ ದೌರ್ಬಲ್ಯಗಳನ್ನು ಅಗೌರವದಿಂದ ಕಂಡು ಮಗುವನ್ನು ನಿರುತ್ಸಾಹಗೊಳಿಸುವಂತೆ ನಡೆದುಕೊಳ್ಳಬಾರದು. ಮಕ್ಕಳು ಓದುವುದಕ್ಕಷ್ಟೇ ಹುಟ್ಟಿದವರಲ್ಲ. ಇದನ್ನು ಹೆತ್ತವರು ಮನದಟ್ಟು ಮಾಡಿಕೊಳ್ಳಬೇಕು.

ಪಶ್ಚಿಮ ಲಂಡನ್‌ನಲ್ಲಿ ವಾಸಿಸುವ 125 ಇಂಗ್ಲಿಷ್ ಹಾಗೂ ಭಾರತೀಯ ಕುಟುಂಬದವರನ್ನು ಸಂದರ್ಶಿಸಿರುವ ಮನಃಶಾಸ್ತ್ರಜ್ಞರು ಇಂಗ್ಲಿಷ್ ಸಂಸ್ಕೃತಿಯ ತಾಯಂದಿರು ಹೆಚ್ಚು ಋಣಾತ್ಮಕ ಪೋಷಕರ ಲಕ್ಷಣಗಳನ್ನು ಹೊಂದಿದ್ದು, ಅದು ಮಕ್ಕಳ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ ಎಂದು ಹೇಳಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ತಂದೆಯೇ ಕುಟುಂಬದ ಮುಖ್ಯಸ್ಥನಾಗಿದ್ದು ಮಕ್ಕಳ ಮೇಲೆ ತಂದೆಯ ವರ್ತನೆ ಹೆಚ್ಚು ಪರಿಣಾಮ ಬೀರುತ್ತದೆ ಎಂದು ಹೇಳಿದ್ದಾರೆ. ಪೋಷಕರ ಅಧಿಕಾರಯುತವಾದ ವರ್ತನೆ ಮಕ್ಕಳ ಆತ್ಮವಿಶ್ವಾಸವನ್ನೇ ಕಸಿಯುತ್ತದೆ ಎಂಬುದನ್ನು ಸಂಶೋಧಕರು ಗುರುತಿಸಿದ್ದಾರೆ.

ಪೋಷಕರ ಅತಿಯಾದ ನಿರೀಕ್ಷೆ ಮಕ್ಕಳನ್ನು ಒತ್ತಡಕ್ಕೆ ದೂಡುತ್ತದೆ. ಇಂದಿನ ಮಕ್ಕಳ ಮಾನಸಿಕ ಸ್ಥಿತಿ ಹೇಗಿದೆ ಎಂದರೆ ಪರೀಕ್ಷೆ ಬಂದರೆ ಸಾಕು ಭಯ ಬೀಳುತ್ತಾರೆ. ಕಡಿಮೆ ಅಂಕ ಬಂದರೆ ಅಪ್ಪ-ಅಮ್ಮ



ಬಯ್ಯುತ್ತಾರೆ ಎಂದು ಯೋಚಿಸುತ್ತಾ, ಅಸಹಜವಾಗಿ ವರ್ತಿಸುತ್ತಾರೆ. ಮಕ್ಕಳು ಕಲಿಕೆಯಿಂದ ವಿಮುಖರಾಗಲು ಇದು ಕೂಡ ಕಾರಣ. ಲೇಖಕಿ ನೇಮಿಚಂದ್ರ ಅವರು 'ಸೋಲಿನಾಚೆಗೂ ಒಂದು ಬದುಕು ಕಾದಿದೆ. ಅದು ಕೇವಲ ಕೆಲಸ ದೊರಕಿಸಿಕೊಳ್ಳುವುದು, ಅಂಕ ಗಳಿಸುವುದು ಮಾತ್ರವಲ್ಲ. ಬದುಕಿನಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸುವುದು ಹೇಗೆ ಎನ್ನುವುದರ ಬಗ್ಗೆ ತಿಳಿಸುತ್ತದೆ' ಎಂದಿದ್ದಾರೆ.

ಪೋಷಕರು ಮಕ್ಕಳೊಂದಿಗೆ ಮುಕ್ತವಾಗಿ ಮಾತನಾಡಬೇಕು. ತಪ್ಪು ಮಾಡಿದಾಗ ತಿದ್ದಿ, ತಿಳಿಹೇಳಬೇಕು; ಮೂದಲಿಕೆಯ ಮಾತು ಆಡಬಾರದು. ಕಲಿಕೆಯಲ್ಲಾಗಲಿ, ಆಟದಲ್ಲಾಗಲಿ ಹಿಂದುಳಿದರೆ ತಪ್ಪು ಎಲ್ಲಿ ಆಗಿದೆ ಎಂದು ತೋರಿಸಿಕೊಡಬೇಕು. ಮೊದಲ ಸ್ಥಾನವೇ ಬರಬೇಕೆಂದು ಒತ್ತಡ ಹಾಕಬಾರದು. ಕಡಿಮೆ ಅಂಕ ಬಂದಾಗ ಬೇರೆ ಮಗುವಿನ ಜೊತೆ ಹೋಲಿಸಿ, ಹೀಯಾಳಿಸಿ ಮಾತನಾಡುವಂತಹ ತಪ್ಪನ್ನು ಮಾಡಲೇಬಾರದು.

ಮಕ್ಕಳು ಚೈತನ್ಯದ ಚಿಲುಮೆಯಂತಿರುತ್ತಾರೆ. ಅವರಿಗೆ ಬದುಕಿನ ಬಗ್ಗೆ ಭರವಸೆ ಮೂಡಿಸುವುದು ಪೋಷಕರ ಕರ್ತವ್ಯ. ಸೋಲಿನಲ್ಲೂ ಆತ್ಮವಿಶ್ವಾಸ ಕಳೆದುಕೊಳ್ಳದೇ, ಸಕಾರಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳಲು ಪೋಷಕರು ವರ ಆಗಬೇಕು.

ಲೇಖಕ: ಕನ್ನಡ ಉಪನ್ಯಾಸಕ, ಬಸರಾಳು, ಮಂಡ್ಯ ಜಿಲ್ಲೆ

ವಾಚಕರ ವಾಣಿ

ಹಂಪನಾ ಅವರಿಗೆ ಹಕ್ಕು ಇದೆ

ನಾರಾಯಣರಾವ ಕುಲಕರ್ಣಿಯವರು ತಮ್ಮ ಪತ್ರದಲ್ಲಿ (ವಾ.ವಾ., ಅ. 5) ದಸರಾದಂತಹ ಸಾಂಸ್ಕೃತಿಕ, ಧಾರ್ಮಿಕ ವೇದಿಕೆಯೊಂದರಲ್ಲಿ ಸಾಹಿತಿ ಹಂಪನಾ ಅವರು 'ಸರ್ಕಾರಗಳನ್ನು ಉರುಳಿಸುವ ದುರಾಲೋಚನೆಯ' ಬಗ್ಗೆ ಮಾತನ್ನಾಡಿರುವ ಕುರಿತು ಆಕ್ಷೇಪ ಎತ್ತಿದ್ದಾರೆ.

ಆದರೆ, ಹಂಪನಾ ಮಾತನಾಡಿರುವುದರಲ್ಲಿ ತಪ್ಪೇನಿದೆ? ರಾಜಕೀಯ ಕ್ಷೇತ್ರವೂ ನಾಡಿನ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕ್ಷೇತ್ರಗಳ ಜೊತೆಗೆ ಅವಿನಾಭಾವ ಸಂಬಂಧ ಹೊಂದಿದೆ. ಇತ್ತೀಚಿನ ದಿನಗಳಲ್ಲಿ ಚುನಾಯಿತ ಸರ್ಕಾರಗಳನ್ನು ಅಕ್ರಮವಾಗಿ ಉರುಳಿಸುವ ಕೆಟ್ಟ ಚಾಳಿ ಯಾವುದೋ ಒಂದು ಪಕ್ಷಕ್ಕೆ ಸೀಮಿತವಾಗದೆ, ಎಲ್ಲ ಪಕ್ಷಗಳನ್ನೂ ಕಾಡುತ್ತಿರುವ ಸಾಂಕ್ರಾಮಿಕ ರೋಗದಂತೆ ಆಗಿದೆ! ಅದು ಬೀರುವ ದುಷ್ಪರಿಣಾಮವು ಸಮಾಜದ ಎಲ್ಲ ಕ್ಷೇತ್ರಗಳನ್ನೂ ಕಲುಷಿತಗೊಳಿಸಿದೆ. ಈ ಬಗ್ಗೆ ಬಹಳಷ್ಟು ಚರ್ಚೆಗಳು ಸಾರ್ವಜನಿಕ ವೇದಿಕೆಗಳಲ್ಲಿ ನಡೆದಿವೆ, ನಡೆಯುತ್ತಿವೆ ಕೂಡ.

ಹೀಗಾಗಿ ಈ ಬಗ್ಗೆ ಸಾಹಿತ್ಯದ ಮೂಲಕ ಅಥವಾ ನಡೆ, ನುಡಿಯ ಮೂಲಕ ಆಕ್ಷೇಪವನ್ನು ಸಾರ್ವಜನಿಕವಾಗಿ ಅಭಿವ್ಯಕ್ತಿಸುವ ಸರ್ವ ಹಕ್ಕು ಹಂಪನಾರಂತಹ ಸಾಹಿತಿಗಳಿಗೆ ಇದ್ದೇ ಇದೆ!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಸರ್ಕಾರಕ್ಕೆ ಕೊಂಚ ನಾಚಿಕೆ ಎಂಬುದಿದ್ದರೆ?

ನಾನು ಮತ್ತು ನನ್ನ ಮೊಮ್ಮಗ 3-4 ದಿನಗಳ ಮಟ್ಟಿಗೆ ಮಲೆನಾಡಿನ ಶೃಂಗೇರಿ, ಕೊಲ್ಲೂರು, ಕೊಡಚಾದ್ರಿ, ಜೋಗ ಮುಂತಾದ ಸ್ಥಳಗಳನ್ನು ನೋಡಿ ಬರುವುದೆಂದು ಅ. 2ರ ರಾತ್ರಿ 11ಕ್ಕೆ ಹೊರಟು ಶಿವಮೊಗ್ಗ ತಲುಪಿದೆವು. ಅಲ್ಲಿಂದ ನಮ್ಮ ಸ್ನೇಹಿತನ ಕಾರಿನಲ್ಲಿ ಹರಿಹರಪುರಕ್ಕೆ ಹೋಗಿ, ಅಲ್ಲಿ ಮೂರು ದಿನ ತಂಗಿದ್ದೆವು. ಅ. 6ರಂದು ವಾಪಸ್ ಬರಲು ರೈಲು ಸಿಗದ ಕಾರಣ ಅದೇ ರಾತ್ರಿ ಸರ್ಕಾರಿ ಐಷಾರಾಮಿ ಬಸ್‌ನಲ್ಲಿ ಬೆಂಗಳೂರಿಗೆ ಬರಬೇಕಾಯಿತು. ಆದರೆ ಆ ಸ್ಲೀಪಿಂಗ್ ಕೋಚ್ ಪ್ರಯಾಣ ಅತ್ಯಂತ ತ್ರಾಸದಾಯಕ ಆಗಿತ್ತು.

ಅದೊಂದು ಹಳೆಯ ಲಟಾರಿ ಬಸ್! ಮಲಗುವ ಆಸನಗಳ ಪಕ್ಕದ ಪರದೆಗಳು ಗಾಳಿಗೆ ಅತ್ತಿಂದಿತ್ತ ಸರಿದು ಹೋಗುತ್ತಿದ್ದವು! ಕಿಟಕಿಯ ಗ್ಲಾಸ್ ಲಾಕರ್‌ಗಳು ಚೇಳಿನ ಕೊಂಡಿಯಂತೆ ನೆಟ್ಟಗೆ ನಿಂತುಕೊಂಡಿದ್ದು ಒಂದಕ್ಕೊಂದು ಕೂಡುವುದೇ ಇಲ್ಲವಾಗಿತ್ತು; ಸಡಿಲ ಬೋಲ್ಟು–ನಟ್ಟುಗಳು ಕರ್ಕಶವಾಗಿ ಸದ್ದು ಮಾಡುತ್ತಿದ್ದವು; ರಸ್ತೆಯೋ ಗುಂಡಿ ಗುದ್ದರಗಳ ಆಗರ; ಬಹಿರ್ದೆಸೆಗೆ ಶೌಚಾಲಯಗಳಿಗೆ ಹೋದರೆ ಅಲ್ಲಿನ ದುರ್ನಾತ ನಮ್ಮ ಜೊತೆಗೆ ಬಸ್ಸಿಗೂ ಏರುವುದು! ಚಾಲಕನಿಗೆ 'ಇದೇನಯ್ಯಾ ಇಂಥ ಪರಿಸ್ಥಿತಿ' ಎಂದರೆ ಆತ ನಾಚಿ ತಲೆ ಬಾಗಿಸಿದ. ಸರ್ಕಾರಕ್ಕಾದರೂ ಇಂಥ ನಾಚಿಕೆ-ಲಜ್ಜೆ ಎಂಬುದಿದ್ದರೆ ಅನ್ನಿಸಿತು!

ಪ್ರೊ.ಶಿವರಾಮಯ್ಯ, ಬೆಂಗಳೂರು

ಕಲಬೆರಕೆ: ಸರ್ಕಾರದ ಪಾತ್ರವೇನು?

'ಲಾಭದ ಕನವರಿಕೆ: ಆಹಾರ ಕಲಬೆರಕೆ' ಸುದ್ದಿ ಓದಿ (ಪ್ರ.ವಾ., ಅ.6) ಆಶ್ಚರ್ಯವಾಗಲಿಲ್ಲ. ಬದಲಾಗಿ, ಸರ್ಕಾರದ ಆಡಳಿತದ ಬಗ್ಗೆ ಕೋಪ ಬಂತು, ಬೇಸರವಾಯಿತು. ಮನುಷ್ಯನ ಜೀವ ಇರುವುದೇ ಆಹಾರದಿಂದ. ಆಹಾರ ಕಲಬೆರಕೆ ಆಗದಂತೆ ಕ್ರಮ ಕೈಗೊಳ್ಳುವ ಹೊಣೆ ಸರ್ಕಾರದ್ದು.

ಸಮಾಜದ ಆರೋಗ್ಯ ಉಳಿಸಲು ಪರಿಣಾಮಕಾರಿಯಾಗಿ ಇದುವರೆಗೆ ಯಾವ ಪಕ್ಷದ ನೇತೃತ್ವದ ಸರ್ಕಾರವೂ ಕ್ರಮ ಕೈಗೊಂಡಿಲ್ಲ. ಆಹಾರ ವಸ್ತುಗಳನ್ನು ಮಾರಾಟ ಮಾಡುವವರು ಮತ್ತು ಆರೋಗ್ಯ ಸೇವೆ ಒದಗಿಸುವ ವ್ಯವಸ್ಥೆಗಳು ಲಾಭದ ಉದ್ದೇಶದ ದಂಧೆಗಳಾಗಿವೆ. ಆಹಾರಕ್ಕೆ ಎಲ್ಲೆಲ್ಲಿ ಏನೇನು ಕಲಬೆರಕೆಯಾಗುತ್ತಿದೆ, ಆಹಾರಕ್ಕೆ ಹೀಗೆ ಬೆರಕೆಯಾಗುವ ವಸ್ತುಗಳಿಂದಾಗಿ ಮುಂದೆ ಅದು ಯಾವ ರೋಗಗಳನ್ನು ಹೊತ್ತು ತರಲಿದೆ ಎಂಬ ಮಾಹಿತಿ ಆರೋಗ್ಯ ಇಲಾಖೆಗೂ ತಿಳಿದಿದೆ. ಆದರೆ, ಕಲಬೆರಕೆಯನ್ನು ತಡೆಯುವ ಮನಸ್ಸು ಮತ್ತು ಪ್ರಯತ್ನವನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರ ಮಾಡುತ್ತಿಲ್ಲವಾದ್ದರಿಂದ ಕಲಬೆರಕೆಯಲ್ಲಿ ಭಾಗಿಯಾಗಿರುವವರ ಜೊತೆಯಲ್ಲಿ ಸರ್ಕಾರಗಳೂ ಸೇರಿಕೊಂಡಿವೆ ಎಂದೇ ಹೇಳಬೇಕಾಗುತ್ತದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಮಳೆಯಿಂದ ರಕ್ಷಣೆ ಇಲ್ಲವೆಂದರೆ ಹೇಗೆ?

'ಯುವ ದಸರಾಗೆ ವರುಣಾತಂಕ' (ಪ್ರ.ವಾ., ಅ. 6) ಸುದ್ದಿಯನ್ನು ಓದಿ ದಿಗಿಲಾಯಿತು. ಮೈಸೂರಿನಲ್ಲಿ ನಡೆಯುವ ಯುವ ದಸರಾ ಕಾರ್ಯಕ್ರಮ ಮಕ್ಕಳು ಮತ್ತು ಯುವಕರಿಗೆ ಅಚ್ಚುಮೆಚ್ಚು. ಇಂತಹ ಕಾರ್ಯಕ್ರಮವು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುತ್ತಿದ್ದಾಗ ಪ್ರತಿವರ್ಷ ಪೆಂಡಾಲ್ ವ್ಯವಸ್ಥೆ ಇರುತ್ತಿತ್ತು. ಮಳೆ ಬಂದರೂ ತೊಂದರೆಯಿಲ್ಲದೆ ಜನ ಕಾರ್ಯಕ್ರಮ ನೋಡುತ್ತಿದ್ದರು.

ಈ ಬಾರಿ ಕೂಡ ಮಹಾರಾಜ ಕಾಲೇಜು ಮೈದಾನದಲ್ಲೇ ಯುವ ದಸರಾ ನಡೆಸುವಂತೆ ಜನರಿಂದ ಒತ್ತಾಯ ಇದ್ದರೂ ಲೆಕ್ಕಿಸದೆ, ಲಕ್ಷ ಜನ ಸೇರುತ್ತಾರೆ ಎಂದು ಉತ್ತನಹಳ್ಳಿಯಲ್ಲಿ ನೂರು ಎಕರೆ ಜಾಗದಲ್ಲಿ ಕಾರ್ಯಕ್ರಮ ನಡೆಸುತ್ತಿದ್ದಾರೆ. ಆದರೆ ಪೆಂಡಾಲ್ ಹಾಕಿಲ್ಲ, ಮಳೆ ಬಂದರೆ ಜನ ದಿಕ್ಕಾಪಾಲಾಗಿ ಓಡಬೇಕು. ಈ ರೀತಿ ಮಾಡಿದರೆ ಮಕ್ಕಳು, ಮಹಿಳೆಯರು, ವೃದ್ಧರ ಗತಿ ಏನಾಗಬೇಕು? ದಸರೆಗೆ ₹40 ಕೋಟಿ ಖರ್ಚು ಮಾಡುವ ಸರ್ಕಾರಕ್ಕೆ, ಕಾರ್ಯಕ್ರಮ ಆಯೋಜಕರಿಗೆ ಈ ಬಗ್ಗೆ ಅರಿವು ಇರಬೇಕಾಗಿತ್ತು ಅಲ್ಲವೇ? ಜನರ ಮನರಂಜನೆಗಾಗಿ ಕಾರ್ಯಕ್ರಮ ಏರ್ಪಡಿಸಿ ಜನರಿಗೆ ಮಳೆಯಿಂದ ರಕ್ಷಣೆ ಇಲ್ಲವೆಂದರೆ ಹೇಗೆ? ಸರ್ಕಾರ ಕೂಡಲೇ ಪೆಂಡಾಲ್ ವ್ಯವಸ್ಥೆ ಮಾಡಲಿ.

ಮುಳ್ಳೂರು ಪ್ರಕಾಶ್, ಮೈಸೂರು

ಸಣ್ಣ ಮನಸ್ಸಿಗೆ...

ಮಹಾತ್ಮ ಗಾಂಧಿ ಕುರಿತಾಗಿ ಪ್ರಕಟವಾಗುತ್ತಿರುವ ಸಂವಾದ ರೂಪದ ಪತ್ರಗಳು ಮೌಲಿಕವಾಗಿವೆ. ಈ ಸಂದರ್ಭದಲ್ಲಿ ದ.ರಾ. ಬೇಂದ್ರೆ ಅವರ ಅಮೂಲ್ಯ ರೂಪಕ ನುಡಿಯನ್ನು ಮನನ ಮಾಡುವುದು ಒಳಿತು.

'ಸಣ್ಣ ಕಣ್ಣಿಗೆ ದೊಡ್ಡ ಸೂರ್ಯ ಕಂಡಾನು
ಸಣ್ಣ ಮನಸ್ಸಿಗೆ ಮಹಾತ್ಮಾ ಒಪ್ಪಿಗಾಗೋದಿಲ್ಲ'

ಜಿ. ಕೃಷ್ಣಪ್ಪ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸದಾಶಿವ ಆಯೋಗದ ವರದಿ ಮಾನದಂಡವಾಗದು

ವರದಿಯಲ್ಲಿ ಅವಾಸ್ತವಿಕ, ತಪ್ಪು ಮಾಹಿತಿ ಇದೆ; ಹೊಸ ಸಮೀಕ್ಷೆ ನಡೆಸುವುದು ಅವಶ್ಯಕ

ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಸೇರಿದಂತೆ ಹಾಲಿ ಇರುವ ಕೆಲವು ವರದಿಗಳ ಆಧಾರದ ಮೇಲೆ ರಾಜ್ಯದಲ್ಲಿ ಒಳ ಮೀಸಲಾತಿ ಜಾರಿ ಮಾಡಬೇಕೆಂದು ಕೆಲವರು ಒತ್ತಾಯಿಸುತ್ತಿದ್ದಾರೆ. ಆದರೆ, ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಈ ವರದಿಗಳಲ್ಲಿ ಹಲವು ರೀತಿಯ ಸಮಸ್ಯೆಗಳಿವೆ. ಸದಾಶಿವ ಆಯೋಗದ ವರದಿಯ ಪ್ರಮುಖ ಅಂಶಗಳು ಅವಾಸ್ತವಿಕತೆಯಿಂದ ಕೂಡಿವೆ

● ಡಿ. ಚಂದ್ರಶೇಖರಯ್ಯ



ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ನಿಗದಿಯಾಗಿರುವ ಶೇಕಡ 15ರಷ್ಟು ಮೀಸಲಾತಿಯನ್ನು ಪರಿಶಿಷ್ಟ ಜಾತಿಯ ಅಸ್ಪೃಶ್ಯರು, ಸ್ಪೃಶ್ಯರು ಮತ್ತು ಇತರರಿಗೆ ಹಂಚಿಕೆ ಮಾಡುವ ಬಗ್ಗೆ 2005ರಲ್ಲಿ ರಚನೆಯಾದ ಸದಾಶಿವ ಆಯೋಗವು 2012ರಲ್ಲಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಆ ವರದಿಯ ಪೂರ್ಣ ವಿವರವಿಲ್ಲದೆ ಪರಿಶಿಷ್ಟ ಜಾತಿಯ ಎಡಗೈ ಸಮೂಹವು ವರದಿ ಜಾರಿಗೆ ಹೋರಾಟ ಮಾಡುತ್ತಾ, ರಾಜಕೀಯ ಒತ್ತಡ ಹೇರುತ್ತಾ, ಸಮುದಾಯದ ಭಾವನೆಗಳ ಕೆರಳಿಸುವಂತಹ ಹೇಳಿಕೆಗಳನ್ನು ಪ್ರತಿನಿತ್ಯ ನೀಡುತ್ತಿದೆ. ಬಲಗೈ ಸಮೂಹ ಭಾಗಶಃ ವರದಿಯ ಜಾರಿಗೆ ಸಮ್ಮತಿಸಿದೆ. ಆದರೆ, ವರದಿಯ ಪೂರ್ಣ ಮಾಹಿತಿ ಇಲ್ಲದಿರುವುದರಿಂದ ಅರೆಮನಸ್ಸಿನಿಂದ ಒದ್ದಾಡುತ್ತಿದೆ. ಈ ಮಧ್ಯೆ ಸ್ಪೃಶ್ಯ ಮತ್ತು ಇತರ ಜನಾಂಗದವರು ಆಯೋಗದ ವರದಿಯನ್ನು ತಿರಸ್ಕರಿಸಬೇಕೆಂದು ಆಗ್ರಹಿಸುತ್ತಿದ್ದಾರೆ.

ಸದಾಶಿವ ಆಯೋಗದ ವರದಿ ಸೇರಿದಂತೆ ಹಾಲಿ ಇರುವ ಕೆಲವು ವರದಿಗಳ ಆಧಾರದ ಮೇಲೆ ಒಳ ಮೀಸಲಾತಿ ಜಾರಿ ಮಾಡಬೇಕೆಂದು ಕೆಲವರು ಒತ್ತಾಯಿಸುತ್ತಿದ್ದಾರೆ. ಆದರೆ, ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಈ ವರದಿಗಳಲ್ಲಿ ಹಲವು ರೀತಿಯ ಸಮಸ್ಯೆಗಳಿವೆ. ನಾನು ಇಲ್ಲಿ ಸದಾಶಿವ ಆಯೋಗದ ವರದಿಯಲ್ಲಿನ ಲೋಪಗಳನ್ನು ಜನರ ಗಮನಕ್ಕೆ ತರಲು ಬಯಸುತ್ತೇನೆ. ಸದಾಶಿವ ಆಯೋಗದ ವರದಿಯ ಪ್ರಮುಖ ಅಂಶಗಳು ಅವಾಸ್ತವಿಕತೆಯಿಂದ ಕೂಡಿದ್ದು, ತಪ್ಪು ಅಂಕಿಅಂಶಗಳನ್ನು ಹೊಂದಿವೆ.

ಆಯೋಗದ ವರದಿಯಲ್ಲಿನ ಲೋಪಗಳು

1. ರಾಜ್ಯದ ಚಾಮರಾಜನಗರ, ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಮುಂತಾದ ಜಿಲ್ಲೆಗಳಲ್ಲಿ ಆದಿ ಕರ್ನಾಟಕ ಎಂದರೆ ಬಲಗೈ ಸಮೂಹ ಎಂದು; ತುಮಕೂರು, ಚಿತ್ರದುರ್ಗ, ರಾಯಚೂರು, ಬಳ್ಳಾರಿ, ವಿಜಯಪುರ, ಹುಬ್ಬಳ್ಳಿ, ಧಾರವಾಡ, ಹಾವೇರಿ ಮುಂತಾದ ಜಿಲ್ಲೆಗಳಲ್ಲಿ ಆದಿ ಕರ್ನಾಟಕ ಎಂದರೆ ಎಡಗೈ ಸಮೂಹ ಎಂದು ಪರಿಗಣಿತವಾಗಿದೆ. ಹಾಗೆಯೇ ಮಂಗಳೂರು, ಉಡುಪಿ, ಕಾರವಾರ ಮುಂತಾದ ಜಿಲ್ಲೆಗಳಲ್ಲಿ ಆದಿ ದ್ರಾವಿಡ ಎಂದರೆ ಬಲಗೈ ಸಮೂಹ ಎಂದು ಪರಿಗಣಿಸಲಾಗುತ್ತಿದೆ; ಕಲಬುರಗಿ ಮತ್ತು ಬೀದರ್, ಕೊಪ್ಪಳ ಜಿಲ್ಲೆಗಳಲ್ಲಿ ಛಲವಾದಿ ಎಂದು ಕರೆಯಲಾಗುತ್ತದೆ. ಹೀಗಾಗಿ, ಸದಾಶಿವ ಆಯೋಗವು ಉಪಜಾತಿಗಳ ವರ್ಗೀಕರಣ ಹಾಗೂ ಜನಸಂಖ್ಯೆಯ ಪ್ರಮಾಣವನ್ನು ನಿಗದಿಪಡಿಸುವಲ್ಲಿ ಅನುಸರಿಸಿರುವ ಮಾರ್ಗ ಪಾರದರ್ಶಕವಾಗಿಲ್ಲ.
2. 2012ರಲ್ಲಿ ನೀಡಿರುವ ಸದಾಶಿವ ಆಯೋಗದ ವರದಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಸರ್ಕಾರಿ ಉದ್ಯೋಗದಲ್ಲಿ ದೊರೆತಿರುವ ಪ್ರಾತಿನಿಧ್ಯ 1,54,525 ಎಂದು ಉಲ್ಲೇಖಿಸಲಾಗಿದೆ. ಈ ವರದಿಯ ಬಗ್ಗೆ ಅನುಮಾನ ಬಂದ ಕಾರಣ 2015ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯವರಿಗೆ ದೊರೆತಿರುವ ಪ್ರಾತಿನಿಧ್ಯ ಪರಿಶೀಲಿಸಿದಾಗ, 97,022 ಜನರಿಗೆ ಮಾತ್ರ ಸರ್ಕಾರಿ ಉದ್ಯೋಗ ದೊರಕಿದೆ. ಸದಾಶಿವ ಆಯೋಗದ ವರದಿಯಲ್ಲಿ ಇರುವುದಕ್ಕಿಂತ 2012ರಿಂದ 2015ರ ನಡುವೆ 57,503 ಜನರಿಗೆ ಉದ್ಯೋಗ ಕಡಿಮೆಯಾಗಿರುವುದು ಕಂಡುಬರುತ್ತಿದೆ. 2012ರಿಂದ 2015ರ ನಡುವೆ 57,503 ಜನರು ನಿವೃತ್ತಿಯಾಗಿರುವುದು ಸಾಧ್ಯವೇ ಇಲ್ಲ. ಅದೇ ರೀತಿ 2016ರಲ್ಲಿ 79,401 ಮಂದಿ ಪರಿಶಿಷ್ಟ ಜಾತಿಯವರು ಸರ್ಕಾರಿ ಸೇವೆಯಲ್ಲಿದ್ದು, 2012ರಿಂದ 2016 ರವರೆಗೆ 75,124 ಜನರು ನಿವೃತ್ತಿಯಾಗಿದ್ದಾರೆ ಎಂಬುದು ಸಂಶಯಾಸ್ಪದವಾಗಿದೆ. ಆದ್ದರಿಂದ ವರದಿಯಲ್ಲಿರುವ ಅಂಕಿಅಂಶಗಳು ತಪ್ಪಾಗಿವೆ.
3. ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ 1.05 ಕೋಟಿ ಇದ್ದರೂ, ಸದಾಶಿವ ಆಯೋಗದಲ್ಲಿ 96,66,051 ಎಂದು ನಮೂದಿಸಲಾಗಿದೆ.
4. ಭೂಮಿ ಹೊಂದಿರುವ ಪರಿಶಿಷ್ಟ ಜಾತಿಯ ಸಮುದಾಯ ಆಯೋಗದ ವರದಿಯಲ್ಲಿ 3,24,800 ಎಂದು ದಾಖಲಿಸಲಾಗಿದೆ. ಆದರೆ, 2015ರ ಕೃಷಿ ಗಣತಿ ಪ್ರಕಾರ, ಭೂಮಿಯನ್ನು ಹೊಂದಿರುವ ಪರಿಶಿಷ್ಟ ಜಾತಿಯವರು 9.73 ಲಕ್ಷ.
5. ಆಯೋಗವು ಆಶ್ರಯ, ಡಾ.ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ, ಇಂದಿರಾ ಆವಾಸ್ ವಸತಿ ಯೋಜನೆ, ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಲಕರ ವೇತನ, ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಪಡೆದಿರುವ ಕುರಿ, ಕೋಳಿ, ಹಸು ಮುಂತಾದ ಸಣ್ಣಪುಟ್ಟ ಸಾಲ ಪಡೆದಿರುವ ಜನರ ಸಂಖ್ಯೆಯನ್ನು ಆಧರಿಸಿ ಮೀಸಲಾತಿಯನ್ನು ವಿಂಗಡಿಸಿದೆ.
6. ಆಯೋಗದಲ್ಲಿ 6.52 ಲಕ್ಷ ಜನರ ಉಪಜಾತಿಯನ್ನು ನಮೂದಿಸಲಾಗಿಲ್ಲ. ಹಾಗೆಯೇ, ಆಯೋಗವು 7,33,949 ಜನರನ್ನು ಗಣನೆಗೆ ತೆಗೆದುಕೊಂಡಿಲ್ಲ.
7. ಪರಿಶಿಷ್ಟ ಜಾತಿಯ ಎಡಗೈ ಸಮೂಹ 32,35,517 ಇದ್ದು, ಬಲಗೈ ಸಮೂಹ 30,93,693 ಇದ್ದು, ವ್ಯತ್ಯಾಸ 1,41,824 ಆಗಿದೆ. ವರದಿಯಲ್ಲಿ ಉಲ್ಲೇಖವಾಗಿರುವಂತೆ, ಒಟ್ಟು ಜನಸಂಖ್ಯೆಯಲ್ಲಿ ಕಡಿಮೆ ಆಗಿರುವ 13,85,949 ಜನರನ್ನು ಗಣನೆಗೆ ತೆಗೆದುಕೊಂಡರೆ, ಯಾವ ಸಮುದಾಯದ ಸಂಖ್ಯೆ ಹೆಚ್ಚಾಗುತ್ತದೆ ಎಂಬುದು ನಿಖರವಾಗಿ ತಿಳಿಯುತ್ತದೆ.
8. ಆಯೋಗದ ವರದಿಯಲ್ಲಿ ಮೂರು ಪುಟಗಳನ್ನು ಕೈನಿಂದ ಬರೆಯಲಾಗಿದೆ. ಅದನ್ನು ಯಾರು ಬರೆದರು, ಯಾಕೆ ಬರೆದರು ಎಂಬುದು ಸ್ಪಷ್ಟವಾಗಿಲ್ಲ.
9. ಗ್ರೂಪ್ 'ಎ' ಮತ್ತು 'ಬಿ' ನೌಕರ ವರ್ಗಕ್ಕೆ ಒಂದೇ ತಲೆಮಾರಿಗೆ ಮೀಸಲಾತಿ ಮಿತಿಗೊಳಿಸುವ ಪ್ರಸ್ತಾವ ವರದಿಯಲ್ಲಿದೆ. ಐಎಎಸ್, ಐಪಿಎಸ್ ಹಾಗೂ ಐಎಫ್‌ಎಸ್ ವರ್ಗದ ನೌಕರರ ಮಕ್ಕಳಿಗೆ ಮೀಸಲಾತಿ ನೀಡಬಾರದೆಂದು ಮಾಡಿರುವ ಶಿಫಾರಸು ಅವೈಜ್ಞಾನಿಕವಾಗಿದೆ. ಏಕೆಂದರೆ, ಭಾರತದಲ್ಲಿ ಆರ್ಥಿಕ ಮಾನದಂಡಕ್ಕಿಂತ ಸಾಮಾಜಿಕ ಮಾನದಂಡವೇ ವ್ಯಕ್ತಿಯ ಘನತೆಗೆ ಕುಂದು ತರುವಂತಹ ಕೆಲಸ ನಿರ್ವಹಿಸುತ್ತಿದ್ದು, ಅದರ ಆಧಾರದಲ್ಲಿಯೇ ಮೀಸಲಾತಿ ನಿಗದಿಪಡಿಸಬೇಕು.


ಕರ್ನಾಟಕದಲ್ಲಿ 1.05 ಕೋಟಿ ಜನಸಂಖ್ಯೆ ಹೊಂದಿರುವ ಏಕೈಕ ಸಮುದಾಯ ಪರಿಶಿಷ್ಟ ಜಾತಿ; ಸಮುದಾಯದಲ್ಲಿ ದಕ್ಷ, ಪ್ರಾಮಾಣಿಕ, ಸೋಲರಿಯದ ರಾಜಕಾರಣಿಗಳಿದ್ದರೂ ಈವರೆಗೂ ರಾಜ್ಯ ದಲಿತ ಮುಖ್ಯಮಂತ್ರಿಯನ್ನು ಕಂಡಿಲ್ಲ. ಇಂತಹ ರಾಜ್ಯದಲ್ಲಿ ಮೊದಲ ತಲೆಮಾರಿಗೆ ಮೀಸಲಾತಿ ಮಿತಿಗೊಳಿಸುವುದು ದಲಿತ ವಿರೋಧಿ ಮನಃಸ್ಥಿತಿಯ, ಸಾಮಾಜಿಕ ಸಮಾನತೆ ಹಾಗೂ ದಲಿತರ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸಹಿಸದ ಮನುವಾದವನ್ನು ಬೇರೆ ಮುಖವಾಡದೊಂದಿಗೆ ಬಿಂಬಿಸುವ ವರದಿ ಇದು. ಈ ವರದಿಯನ್ನು ಹಿಂದಿನ ಬಸವರಾಜ ಬೊಮ್ಮಾಯಿ ಸರ್ಕಾರ ತಿರಸ್ಕರಿಸಿತ್ತು. ಆದರೆ, ಇದೇ ಅಂಕಿಅಂಶ ಬಳಸಿಕೊಂಡು ಒಳ ಮೀಸಲಾತಿ ಹಂಚಿಕೆ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತ್ತು.

ಆಗಬೇಕಿರುವುದೇನು?

- ಎಸ್‌ಸಿ ಎಸ್‌ಪಿ–ಟಿಎಸ್‌ಪಿ ಅನುದಾನವನ್ನು ಬಳಕೆ ಮಾಡಿ ಮೂರು ತಿಂಗಳಲ್ಲಿ ಸಮಗ್ರವಾದ ಸಮೀಕ್ಷೆ ನಡೆಸಿ ಒಳ ಮೀಸಲಾತಿಯನ್ನು ಜಾರಿಗೊಳಿಸುವುದು ಸೂಕ್ತ ಅಥವಾ ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿ ಗಣತಿಯನ್ನು ಪ್ರಕಟಿಸಿ, ಅಲ್ಲಿರುವ ಅಂಕಿಅಂಶಗಳ ಆಧಾರದಲ್ಲಿ ಒಳ ಮೀಸಲಾತಿ ನಿಗದಿಪಡಿಸುವುದು ಸೂಕ್ತ
- ಆದಿಕರ್ನಾಟಕ, ಆದಿದ್ರಾವಿಡ ಪದಗಳನ್ನು ವಿವಿಧ ಜಿಲ್ಲೆಗಳಲ್ಲಿ ವಿವಿಧ ಉಪಜಾತಿಗಳಿಗೆ ಬಳಸಲಾಗುತ್ತಿದ್ದು, ಈ ಬಗ್ಗೆ ಸ್ಪಷ್ಟತೆ ಬೇಕಾಗಿದೆ
- ಸರ್ಕಾರಿ ನೌಕರರ ಸಂಖ್ಯೆಯ ಸರಿಯಾದ ಮಾಹಿತಿ ಕಲೆಹಾಕಬೇಕಿದೆ
- ಭೂಮಿ ಹೊಂದಿರುವ ಪರಿಶಿಷ್ಟ ಜಾತಿಯ ಒಳಪಂಗಡಗಳ ಬಗ್ಗೆ ಸ್ಪಷ್ಟ ಮಾಹಿತಿ ಬೇಕಿದೆ
- ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಕೆನೆಪದರದ ಬಗ್ಗೆ ಪ್ರಸ್ತಾಪಿಸಿದೆ. ಸಂವಿಧಾನದ 15 ಮತ್ತು 16 ಪರಿಚ್ಛೇದಕ್ಕೆ ಇದು ವ್ಯತಿರಿಕ್ತವಾಗಿರುವುದರಿಂದ ಕೆನೆಪದರ ಕೈಬಿಡಬೇಕಾಗಿದೆ. ಪ್ರತಿ ಜಿಲ್ಲೆಯ ಪ್ರತಿ ಒಳಪಂಗಡದ ತಲಾ ಐದು ಮುಖಂಡರನ್ನು ಕೂರಿಸಿಕೊಂಡು ಎಡ ಸಮುದಾಯಕ್ಕೆ ಬರುವ ಜಾತಿಗಳ ವಿವರ ಹಾಗೂ ಬಲ ಸಮುದಾಯಕ್ಕೆ ಬರುವ ಜಾತಿಗಳ ವಿವರಗಳನ್ನು ಪಡೆದು, ಎಡ ಮತ್ತು ಬಲ ಜಾತಿಗಳನ್ನು ವರ್ಗೀಕರಿಸುವುದು ಸೂಕ್ತ.

ಲೇಖಕ: ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ

ನ್ಯಾ.ಸದಾಶಿವ ವರದಿಯಲ್ಲಿ ಉಲ್ಲೇಖಿಸಲಾದ ಸರ್ಕಾರಿ ನೌಕರರ ವಿವರ



ಒಳ ಮೀಸಲಿನ ಒಡಲಾಳ

ರಾಜ್ಯದಲ್ಲಿ ಪರಿಶಿಷ್ಟ ಜಾತಿಯವರಿಗೆ ದೊರೆತಿರುವ ಸರ್ಕಾರಿ ಉದ್ಯೋಗ

ಗುಂಪು	ಮಂಜೂರಾದ ಹುದ್ದೆಗಳು	ಭರ್ತಿಯಾದ ಎಸ್‌ಸಿ ಹುದ್ದೆಗಳು
ವರ್ಷ: 2016		
ಎ	26,600	2,892 (10.87%)
ಬಿ	53,786	6,619 (12.30%)
ಸಿ	5,64,400	59,313 (10.50%)
ಡಿ	1,00,807	10,577 (10.49%)
ಒಟ್ಟು	7,45,593	79,401 (10.64%)
ವರ್ಷ 2023		
ಎ	34,550	4,970 (14.3%)
ಬಿ	58,914	7,036 (11.94%)
ಸಿ	6,02,630	77,779 (12.98%)
ಡಿ	1,18,861	9,552 (8.03%)
ಒಟ್ಟು	8,14,955	99,337 (12.18%)

* ಆಯಾ ವರ್ಷದ ಮಾರ್ಚ್ 31ರಲ್ಲಿ ಇದ್ದಂತೆ

ತೋರ್ಪಡಿಕೆಯ ಬೆಂಬಲ

ಹಲವು ದಶಕ ರಕ್ತ, ಬೆವರು ಹರಿಸಿ ನಡೆಸಿದ ಒಳ ಮೀಸಲಾತಿ ಹೋರಾಟ ಈಗ ಒಂದು ನಿರ್ಣಾಯಕ ಹಂತ ತಲುಪಿದೆ. ಒಳಗೊಳಗೆ ವಿರೋಧಿಸುತ್ತಾ ಹೊರಗೆ ಮಾತ್ರ ಒಳ ಮೀಸಲಾತಿ ಜಾರಿಯಾಗಲಿ ಎಂದು ಆಶಿಸುವ ಒಂದು ದೊಡ್ಡ ಗುಂಪು ಒಳ ಮೀಸಲಾತಿ ಜಾರಿಯಾಗದಂತೆ ಇನ್ನಿಲ್ಲದ ನೆಪಗಳನ್ನು ಸೃಷ್ಟಿಸುತ್ತಾ, ಕಾಗಕ್ಕ ಗುಬ್ಬಕ್ಕನ ಕಥೆಯಲ್ಲಿನ ಮುಂದೂಡುವ ತಂತ್ರ ಪ್ರಯೋಗಿಸುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಮೀಸಲಾತಿ ಪ್ರಮಾಣ ಹಂಚಿಕೆಯ ಬಗ್ಗೆ ಮೊದಲಿನಿಂದಲೂ ತಕರಾರುಗಳಿವೆ. ಅದನ್ನು ಇತ್ಯರ್ಥಪಡಿಸಿಕೊಳ್ಳುವುದು ಕಷ್ಟವೇನಲ್ಲ. ಸರಳವಾಗಿ ಹೇಳುವುದಾದರೆ, ಒಳ ಮೀಸಲಾತಿ ಹಂಚಿಕೆಯಾಗಬೇಕಾಗಿರುವುದು ಅಸ್ಪೃಶ್ಯ ಜಾತಿಗಳಾದ ಹೊಲೆಯ ಮತ್ತು ಸಂಬಂಧಿತ ಜಾತಿಗಳ ಒಂದು ಗುಂಪು ಹಾಗೂ ಮಾದಿಗ ಮತ್ತು ಅದರ ಸಂಬಂಧಿತ ಜಾತಿಗಳ ಇನ್ನೊಂದು ಗುಂಪು ಹಾಗೂ ಸ್ಪೃಶ್ಯ ಜಾತಿಗಳ ಮತ್ತೊಂದು ಗುಂಪು ಹಾಗೂ ಇನ್ನುಳಿದ ಜಾತಿಗಳ ನಡುವೆ. ಇವುಗಳ ವರ್ಗೀಕರಣ ಸುಲಭವಲ್ಲ ಎಂಬ ವಾದ ಮುಂದಿಡಲಾಗುತ್ತಿದೆ.

ಪ್ರಸ್ತುತ ವಿವಿಧ ಜಾತಿಯ ಪರಿಶಿಷ್ಟ ಜನಾಂಗದವರು ಆದಿ ಕರ್ನಾಟಕ, ಆದಿ ದ್ರಾವಿಡ ಹಾಗೂ ಆದಿ ಆಂಧ್ರ ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರ ಪಡೆಯುತ್ತಿರುವರಲ್ಲಿ ಗೊಂದಲಗಳು ಇರುವುದು ನಿಜ. ಆದರೆ, ಅದನ್ನು ನಿವಾರಿಸುವುದು ಕಷ್ಟವೇನಲ್ಲ. ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಿವಿಧ ಪರಿಶಿಷ್ಟ ಜಾತಿಯ ಜನರ ಗಣತಿಯನ್ನು ಮಾಡಿಸುವ ಬಗ್ಗೆ ಸೂಕ್ತ ನಿರ್ದೇಶನಗಳನ್ನು ಕೊಟ್ಟು ಆಯಾ ಜಾತಿಯ ಜನರಿಗೆ ಅದೇ ಜಾತಿಯ ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರ ವಿತರಿಸುವ ಬಗ್ಗೆ ಕ್ರಮಗಳನ್ನು ಕೈಗೊಳ್ಳಬೇಕು. ಅತ್ಯಂತ ಕಡಿಮೆ ಅವಧಿಯಲ್ಲಿ ಜಾತಿ ಗಣತಿ ಆಗುತ್ತದೆ. ಸುಲಭದಲ್ಲಿ ಬಗೆಹರಿಯಬಹುದಾದ ಹಂಚಿಕೆಯ ಸಮಸ್ಯೆಯನ್ನು ಇನ್ನಷ್ಟು ಸಂಕೀರ್ಣಗೊಳಿಸುತ್ತಾ ಆಳುವ ಸರ್ಕಾರಗಳ ಪಾಲಿಗೆ ಮುಂದೂಡುವ ಅಸ್ತ್ರಗಳನ್ನು ನೀಡಿ ಒಳ ಮೀಸಲಾತಿಯ ಲಾಭ ಪಡೆಯದಂತೆ ವಂಚಿಸುವ ಹುನ್ನಾರ ನಿಲ್ಲಬೇಕು.

ಮಧುಕುಮಾರ ಸಿ.ಎಚ್., ಚಾಮನಹಳ್ಳಿ

'ಜಸ್ಟ್ ಮ್ಯಾರೀಡ್' ಟೀಸರ್ ಬಿಡುಗಡೆ



ಅಂಕಿತಾ ಅಮರ್, ಶೈನ್ ಶೆಟ್ಟಿ

'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾ ಯಶಸ್ಸಿನ ಬೆನ್ನಲ್ಲೇ ನಟಿ ಅಂಕಿತಾ ಅಮರ್ ನಟನೆಯ ಮತ್ತೊಂದು ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. 'ಬಿಗ್‌ಬಾಸ್' ಖ್ಯಾತಿಯ ನಟ ಶೈನ್ ಶೆಟ್ಟಿ ನಾಯಕರಾಗಿ ನಟಿಸಿರುವ 'ಜಸ್ಟ್ ಮ್ಯಾರೀಡ್' ಸಿನಿಮಾದ ಟೀಸರ್ ಬಿಡುಗಡೆಯಾಗಿದೆ.

ಎಬಿಬಿಎಸ್ ಸ್ಟುಡಿಯೊಸ್ ಲಾಂಛನದಲ್ಲಿ ಅಜನೀಶ್ ಲೋಕನಾಥ್ ಹಾಗೂ ಸಿ.ಆರ್ ಬಾಬಿ ಅವರು ನಿರ್ಮಿಸಿರುವ, ಸಿ.ಆರ್.ಬಾಬಿ ಅವರ ನಿರ್ದೇಶನದ ಈ ಸಿನಿಮಾದ ಟೀಸರ್ ಅನ್ನು ನಿರ್ದೇಶಕರಾದ ಉಪೇಂದ್ರ, ನಿಥಿಲನ್ ಹಾಗೂ ಅಜಯ್ ಭೂಪತಿ ಜೊತೆಯಾಗಿ ಬಿಡುಗಡೆಗೊಳಿಸಿದರು. 'ಸಿನಿಮಾ ನಿರ್ದೇಶನ ಬಹುವರ್ಷಗಳ ಕನಸು' ಎಂದು ಮಾತು ಆರಂಭಿಸಿದ ನಿರ್ದೇಶಕಿ ಸಿ.ಆರ್ ಬಾಬಿ, 'ನನ್ನ ಮೊದಲ ನಿರ್ದೇಶನದ ಚಿತ್ರವನ್ನು ಅಜನೀಶ್ ನಿರ್ಮಾಣ ಮಾಡಿದ್ದಾರೆ. ಸದ್ಯದಲ್ಲೇ 'ಜಸ್ಟ್ ಮ್ಯಾರೀಡ್' ತೆರೆಕಾಣಲಿದೆ' ಎಂದರು.

'ಸಂಗೀತ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದ ಬಾಬಿ ಹಾಗೂ ಅಜನೀಶ್ ಅವರು ಈ ಚಿತ್ರದ ಮೂಲಕ ಹೊಸ ಹೆಜ್ಜೆ ಇಟ್ಟಿದ್ದಾರೆ. ನಟಿ ಅಂಕಿತ ಅಮರ್ ಅವರ ಕನ್ನಡ ಹಾಗೂ ನಟನೆ ಎರಡೂ ಚೆಂದ' ಎಂದರು ಶೈನ್ ಶೆಟ್ಟಿ. 'ಸಹನ' ಎಂಬ ಪಾತ್ರದಲ್ಲಿ ಅಂಕಿತಾ ಅಮರ್ ನಟಿಸಿದ್ದು, ನಟಿ ಶ್ರುತಿ, ದೇವರಾಜ್, ರವಿಶಂಕರ್ ಗೌಡ, ಶ್ರೀಮಾನ್, ವಾಣಿ ಹರಿಕೃಷ್ಣ, ಸಾಕ್ಷಿ ಅಗರವಾಲ್, ಅಚ್ಯುತ್ ಕುಮಾರ್, ಶೃತಿ ಹರಿಹರನ್, ಅನೂಪ್ ಭಂಡಾರಿ ಹೀಗೆ ಕಲಾವಿದರ ದಂಡೇ ಸಿನಿಮಾದಲ್ಲಿದೆ. ಚಿತ್ರಕ್ಕೆ ರಘು ನಿಡುವಳ್ಳಿ ಸಂಭಾಷಣೆಯಿದೆ. ❖

ನ.22ಕ್ಕೆ ಬರ್ತಾನೆ 'ಅರವಿಂದ ಸ್ವಾಮಿ'

ಭಿನ್ನವಾದ ಪ್ರಚಾರ ಶೈಲಿಯ ಮೂಲಕ ಗಮನಸೆಳೆದುಕೊಂಡು ಬಂದಿರುವ, ಅಭಿಷೇಕ್ ಶೆಟ್ಟಿ ಆ್ಯಕ್ಷನ್ ಕಟ್ ಹೇಳಿರುವ 'ಆರಾಮ್ ಅರವಿಂದ ಸ್ವಾಮಿ' ಸಿನಿಮಾ ನವೆಂಬರ್ 22ರಂದು ತೆರೆಕಾಣಲಿದೆ.

ಈ ಸಿನಿಮಾದಲ್ಲಿ ಅನೀಶ್ ತೇಜೇಶ್ವರ್ ನಾಯಕನಾಗಿ ನಟಿಸಿದ್ದಾರೆ. ಹೆಚ್ಚಾಗಿ ಮಾಸ್ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಅನೀಶ್, ಈ ಸಿನಿಮಾ ಮೂಲಕ ರೊಮ್ಯಾಂಟಿಕ್ ಹೀರೊ ಆಗಿ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ. ಚಿತ್ರದ 'ಮುಂದೆ ಹೇಗೋ ಏನೋ' ಎಂಬ ಹಾಡು ಬಿಡುಗಡೆಯಾಗಿದ್ದು, ಅನೀಶ್‌ಗೆ ಮಿಲನಾ ನಾಗರಾಜ್ ಜೋಡಿಯಾಗಿದ್ದಾರೆ. ಮಲಯಾಳಿ ಹುಡುಗಿಯಾಗಿ ಮಿಲನಾ ಕಾಣಿಸಿಕೊಂಡಿದ್ದಾರೆ. ಪ್ರಮೋದ್ ಮರವಂತೆ ಸಾಹಿತ್ಯದ ಈ ಹಾಡಿಗೆ ನಿಹಾಲ್ ಧ್ವನಿಯಾಗಿದ್ದು, ಅರ್ಜುನ್ ಜನ್ಯ ಸಂಗೀತ ನಿರ್ದೇಶನವಿದೆ. 'ನಮ್ ಗಣಿ ಬಿಕಾಂ ಪಾಸ್', 'ಗಜಾನನ ಆ್ಯಂಡ್ ಗ್ಯಾಂಗ್' ಬಳಿಕ ಅಭಿಷೇಕ್ ಶೆಟ್ಟಿ ನಿರ್ದೇಶಿಸುತ್ತಿರುವ ಚಿತ್ರ ಇದಾಗಿದ್ದು, ಹೃತಿಕ ಶ್ರೀನಿವಾಸ್ ಮತ್ತೋರ್ವ ನಾಯಕಿ. 'ಅಕಿರ' ಸಿನಿಮಾ ನಿರ್ಮಿಸಿದ್ದ ಶ್ರೀಕಾಂತ್ ಪ್ರಸನ್ನ ಹಾಗೂ 'ಗುಳ್ಟು' ಸಿನಿಮಾ ನಿರ್ಮಾಪಕ ಪ್ರಶಾಂತ್ ರೆಡ್ಡಿ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ವೈವಿಬಿ ಶಿವಸಾಗರ್ ಛಾಯಾಚಿತ್ರಗ್ರಹಣ, ಉಮೇಶ್ ಆರ್. ಬಿ. ಸಂಕಲನವಿದೆ. ❖



ಅನೀಶ್, ಮಿಲನಾ ನಾಗರಾಜ್

ತಿದ್ದುಪಡಿ

'ಜಂಗಲ್ ಮಂಗಲ್' ನಲ್ಲಿ ಯಶ್ ಶೆಟ್ಟಿ ಸುದ್ದಿಯಲ್ಲಿ ಚಿತ್ರದ ನಿರ್ದೇಶಕ ಸಿಂಪಲ್ ಸುನಿ ಎಂದಾಗಿದೆ. ಸುನಿ ಈ ಚಿತ್ರವನ್ನು ಅರ್ಪಿಸುತ್ತಿದ್ದು, ರಕ್ಷಿತ್ ಕುಮಾರ್ ಚಿತ್ರದ ನಿರ್ದೇಶಕರು. ಅಕ್ಟೋಬರ್ 7 ರ ಸಂಚಿಕೆಯಲ್ಲಿ ಈ ಮಾಹಿತಿ ತಪ್ಪಾಗಿತ್ತು.


ಪಿಟಿಐ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕಲಬೆರಕೆ ಹಾಲನ್ನು ಕುಡಿಯುವುದರಿಂದ ಶೇ 87ರಷ್ಟು ಭಾರತೀಯರು ಕ್ಯಾನ್ಸರ್‌ಗೆ ಒಳಗಾಗುವ ಅಪಾಯ ಎದುರಿಸುತ್ತಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಎಚ್ಚರಿಕೆ ನೀಡಿದೆ ಎಂದು ಹೇಳಿಕೊಳ್ಳುವ ದಿನಪತ್ರಿಕೆಯೊಂದರ ವರದಿಯನ್ನು ಹಲವು ಸಾಮಾಜಿಕ ಜಾಲತಾಣ ಬಳಕೆದಾರರು ತಮ್ಮ ಖಾತೆಗಳಲ್ಲಿ ಪೋಸ್ಟ್ ಮಾಡುತ್ತಿದ್ದಾರೆ. ಎಕ್ಸ್, ಫೇಸ್‌ಬುಕ್‌ನಲ್ಲಿ ಹಲವರು ಇದನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಪೋಸ್ಟ್‌ನ ಸ್ಕ್ರೀನ್ ಶಾಟ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಾಡಿದಾಗ, 2018ರ ಸೆ.20ರಂದು 'ದೈನಿಕ್ ಭಾಸ್ಕರ್'ನಲ್ಲಿ ಪ್ರಕಟಗೊಂಡ ವರದಿಯನ್ನು ತೋರಿಸಿತು. 'ಪ್ರತಿ ದಿನ ನೀವು ಹಾಲಿನ ಬದಲಿಗೆ ವಿಷವನ್ನು ಕುಡಿಯುತ್ತಿದ್ದೀರಿ. ಯಾಕೆಂದರೆ, ದೇಶದಲ್ಲಿ ಮಾರಾಟವಾಗುತ್ತಿರುವ ಶೇ 68.7ರಷ್ಟು ಹಾಲು ನಕಲಿ. ವಿಶ್ವ ಆರೋಗ್ಯ ಸಂಸ್ಥೆಯೂ ಎಚ್ಚರಿಕೆ ನೀಡಿದೆ' ಎಂದು ವರದಿಯಲ್ಲಿದೆ. ಈ ವರದಿಯನ್ನು ಇಟ್ಟುಕೊಂಡು ಕಸ್ಟಮೈಸ್ಡ್ ಕೀ ವರ್ಡ್ ಹಾಕಿ ಹುಡುಕಾಟ ನಡೆಸಿದಾಗ ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸ್ಕ್ರೀನ್ ಶಾಟ್‌ಗೆ ಸಂಬಂಧಿಸಿದ ಸ್ಪಷ್ಟೀಕರಣ ಸಿಕ್ಕಿತು. ಹಾಲು ಕಲಬೆರಕೆಗೆ ಸಂಬಂಧಿಸಿದಂತೆ ಡಬ್ಲ್ಯುಎಚ್‌ಒ ಯಾವುದೇ ಮಾರ್ಗಸೂಚಿ/ಸಲಹೆ ನೀಡಿಲ್ಲ ಎಂದು ಅದರಲ್ಲಿ ಹೇಳಲಾಗಿದೆ. ಅಲ್ಲದೇ, 2019ರ ನವೆಂಬರ್‌ನಲ್ಲಿ ಲೋಕಸಭೆಯಲ್ಲಿ ಅಂದಿನ ಆರೋಗ್ಯ ಸಚಿವ ಡಾ.ಹರ್ಷ ವರ್ಧನ್ ಅವರು ವಿಶ್ವ ಆರೋಗ್ಯ ಸಂಸ್ಥೆ ಯಾವುದೇ ಎಚ್ಚರಿಕೆ ನೀಡಿಲ್ಲ ಎಂದು ಸ್ಪಷ್ಟನೆ ನೀಡಿರುವ ದಾಖಲೆಯೂ ಸಿಕ್ಕಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಕಷ್ಟ ಪರಿಹಾರಕ್ಕೆ ಮೂರು ಸೂತ್ರಗಳು!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

39

ಜೀವನದಲ್ಲಿ ಕಷ್ಟ ಬಂದಾವ, ಕಷ್ಟ ಎದಿಮ್ಯಾಲೇ ಕುಂತೈತಿ. ಬಗೆಹರಿಸಿಕೊಳ್ಳೋದು ಹ್ಯಾಂಗೆ ಹೇಳಿ ಮೊದ್ಲು ಅಂತಾರ. ಇದಕ್ಕೆ ಜ್ಞಾನಿಗಳು, ಹಿರಿಯರು ಮೂರು ಸೂತ್ರ ಮಾಡಿಟ್ಟಾರ. ಎಷ್ಟೇ ಕಷ್ಟ ಬಂದರೂ ಈ ಮೂರು ಸೂತ್ರ ಪಾಲನೆ ಮಾಡಿ. ಎಲ್ಲದಕ್ಕೂ ಪರಿಹಾರ ಸಿಕ್ತಾವ. ಒಂದನೆಯದ್ದು ಸಹನಶೀಲತೆ, ಎರಡನೆಯದ್ದು ಸಾಹಸ, ಮೂರನೆಯದ್ದು ಸಮಾಧಾನ.

ಸಹನಶೀಲತೆ ಅಂದರ ಜೀವನದಲ್ಲಿ ಬರುವ ಸುಖದುಃಖಗಳನ್ನು ಅಪ್ರತೀಕಾರ ಪೂರಕವಾಗಿ ಸ್ವೀಕಾರ ಮಾಡೋದು. ಯಾವುದಕ್ಕೂ ಪ್ರತೀಕಾರ ಮಾಡಬ್ಯಾಡ್ರಿ. ನಿಮಗೆ ಯಾರಾದರೂ ನಿಂದನೆ ಮಾಡಿದರೆ ಪ್ರತೀಕಾರ ಮಾಡಬೇಕು ಅನಸತೈತಿ. ಅಂದರೆ ನನ್ನ ದೇಹ, ನನ್ನ ಮನಸ್ಸು ನನ್ನ ನಿಯಂತ್ರಣದಲ್ಲಿ ಕೆಲಸ ಮಾಡುತ್ತಿಲ್ಲ. ಅವ ಹೇಳಿದ ಶಬ್ದಕ್ಕೆ ಪೂರಕವಾಗಿ ಕೆಲಸ ಮಾಡಾಕ ಹತ್ತೈತಿ. ನಮ್ಮ ದೇಹ, ನಮ್ಮ ಮನಸ್ಸು ಅವ ಹೇಳಿದ ಶಬ್ದದ ಸ್ವಾಧೀನ, ಗುಲಾಮ ಆಗಬಿಡತೈತಿ. ಅದಕ್ಕೆ ಅವಕಾಶ ಕೊಡಬಾರದು. ಸಹನೆಯಿಂದ ಜಗತ್ತನ್ನು ನೋಡಬೇಕು.

ಒಂದು ಕಡೆ ಡಾಂಬರ್ ರೋಡ್ ಮಾಡಾಕತ್ತಿದ್ರು. ಅಲ್ಲೊಂದು ಜಲ್ಲಿ ಕಲ್ಲು (ಕಂಕರ) ಬಿದ್ದಿತ್ತಂತೆ. ಅದರ ಮುಂದೆ ಒಂದು ಗುಡಿ ಇತ್ತು. ಈ ಕಂಕರ, ಗುಡ್ಯಾಗಿನ ಮೂರ್ತಿಗೆ ಕೇಳಿತಂತ, 'ಅಲ್ಲಾ ನಾವಿಬ್ಬರೂ ಒಂದೇ ಬೆಟ್ಟದ ಕಲ್ಲುಗಳು. ನನಗ ಇಲ್ಲಿ ಜನ ತುಳೀತಾರ, ಬಸ್ಸು ಲಾರಿ ಎಲ್ಲಾ ಓಡಿಸ್ತಾರ, ಆದರೆ ನಿನಗ ಪೂಜೆ ಮಾಡ್ತಾರ. ಯಾಕೆ' ಎಂದು. ಅದಕ್ಕೆ ಮೂರ್ತಿ ಹೇಳಿತಂತ, 'ನೀನು ಕೇಳಿದ್ದು ಸರಿ ಐತಿ. ಮೂರ್ತಿ ಮಾಡಾಂವ ಮೊದಲು ನಿನ್ನನ್ನೇ ಆಯ್ಕೆ ಮಾಡಿಕೊಂಡ. ನಾಲ್ಕೇಟು ಹೊಡೆಯೋದರೊಳಗ ನೀನು ಎರಡು ಹೋಳಾಗಿ ಬಿದ್ದೆ. ಆ ಮ್ಯಾಲ ನನ್ನ ತಗಂಡ. ನನಗೆ ನೂರು ಬಾರಿ, ಸಾವಿರ ಬಾರಿ ಹೊಡದಾ. ನಾನು ಸುಮ್ಮನೆ ಇದ್ದೆ. ತಾಳಿಕೊಂಡೆ, ಒಂದು ದಿನ ಸುತ್ತಿಗೆ ಚಾಣ ತೆಗೆದಿಟ್ಟು 'ನಿನ್ನ ಸಹನೆಗೆ ನಾನು ಶರಣಾದೆ ಎಂದು ಅವನೇ ಕೈಮುಗಿದ. ಇಬ್ಬರೂ ಒಂದೇ ಬೆಟ್ಟದಿಂದ ಬಂದಿದ್ದರೂ ನೀನು ಸಹನೆ ಇಲ್ಲದೆ ಕ್ರಶರ್‌ಗೆ ಸಿಕ್ಕು ಕಂಕರ ಆದೆ. ನಾನು ಸಹನೆ ಇದ್ದಿದ್ದರಿಂದ ಗುಡಿಯಾಗ ಬಂದು ಶಂಕರ ಆದೆ' ಎಂತು.

ಸಹನೆ ಇದ್ದವರು ಶಂಕರರಾಗುತ್ತಾರೆ. ಸಂಸಾರದೊಳಗೆ ಸಹನೆ ಇರಬೇಕು. ಸಾಲ ಹೆಚ್ಚಾತಂತ ರೈತರು ಆತ್ಮಹತ್ಯೆ ಮಾಡಿಕೊಳ್ತಾರ. ಆತ್ಮಹತ್ಯೆ ಮಾಡಿಕೊಳ್ಳುವ ಮುಂಚೆ ರೈತರು ವಿಚಾರ ಮಾಡಬೇಕು. ನಿಮ್ಮ ಕೊಟ್ಟಿಗೆಯಲ್ಲಿ ಇರುವ ಆಕಳು, ಎತ್ತು, ಕುರಿ ಕೋಳಿ ಆತ್ಮಹತ್ಯೆ ಮಾಡಿಕೊಂಡಿಲ್ಲ. ಆಕಳ, ಕುರಿ ಕೋಳಿ ಆತ್ಮಹತ್ಯೆ ಮಾಡಿಕೊಂಡಿವೆ ಎಂದು ಯಾವುದಾದರೂ ಪೇಪರ್ನ್ಯಾಗ ನೋಡಿರೇನು? ಅಂದರೆ ಮನುಷ್ಯ ಕುರಿ, ಕೋಳಿ, ಆಕಳಿಗಿಂತ ಹೇಡಿಯಾದ ಅಂತ ಅರ್ಥ ಅಲ್ಲೇನು? ಪರೀಕ್ಷೆಯಲ್ಲಿ ಫೇಲಾತು ಅಂತ ಆತ್ಮಹತ್ಯೆ ಮಾಡಿಕೊಳ್ಳುವ ಹುಡುಗರೂ ಯೋಚಿಸಬೇಕು. ಪಿಯುಸಿ, ಎಸ್‌ಎಸ್‌ಎಲ್‌ಸಿ ಫೇಲಾತು ಅಂದರೆ ಮತ್ತೆ ಪರೀಕ್ಷೆ ಬರ್ತದ. ಅದೇನು 12 ವರ್ಷಕ್ಕೆ ಬರೋ ಕುಂಭಮೇಳನಾ? 3 ತಿಂಗಳಿಗೆ 6 ತಿಂಗಳಿಗೆ ಮತ್ತೆ ಬಂದೇ ಬರ್ತದ. ಆಗ ಪಾಸು ಮಾಡಿದರಾತು. ಪರೀಕ್ಷೆ ಅಂದ ಮೇಲೆ ಪಾಸು ಫೇಲು ಎಲ್ಲಾ ಇದ್ದೇ ಇರ್ತದ. ಫೇಲಾತು ಅಂತ ಕುಗ್ಗಬಾರದು. ಜೀವನದಲ್ಲಿ ಸಹನೆ ಮುಖ್ಯ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಅಕ್ಟೋಬರ್ 8, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿನ ಶುಕ್ಲ ಪಂಚಮಿ ಗಂ. 00-56 ನಕ್ಷತ್ರ: ಜ್ಯೇಷ್ಠ ಗಂ. 28-08 ಯೋಗ: ಆಯುಷ್ಮಾನ್ ಗಂ. 6-51 ಕರಣ: ಬಾಲವ ಗಂ. 11-19, ಕನ್ಯಾ ಮಾಸದ 21 ನೇ ದಿನ, ಮಳೆನಕ್ಷತ್ರ: ಹಸ್ತ 4.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-24 ಸೂರ್ಯಾಸ್ತ : 06-12
ಮುಸ್ಲಿಂ ದಿನಾಂಕ : 04 ರಬಿಯುಸ್ಸಾನಿ
ದಿನ ವಿಶೇಷ : ನವರಾತ್ರಿಯ ಆರನೇ ದಿನ , ಅದೃಷ್ಟ ಸಂಖ್ಯೆ : 3, 6

ಮೇಷ: ವೃತ್ತಿ ಜೀವನದಲ್ಲಿ ಬಹಳಷ್ಟು ಬದಲಾವಣೆ ಮಾಡಿಕೊಳ್ಳುವ ತೀರ್ಮಾನ ಅಭಿವೃದ್ಧಿಗೆ ಕಾರಣವಾಗುವುದು.ರಾಜಕೀಯ ಪಿತೂರಿ ನಡೆಸುತ್ತಿರುವವರು ಯಾರು ಎಂಬುದು ತಿಳಿದುಬರಲಿದೆ.

ವೃಷಭ: ಹರಾಜಿನಲ್ಲಿ ಆಸ್ತಿ ಖರೀದಿ ಎನ್ನುವ ರೀತಿಯಲ್ಲಿ ಸಂಪತ್ತು ಅಭಿವೃದ್ಧಿಯಾಗಲಿದೆ. ಜಾಮೀನು ವಿಷಯಕ್ಕೆ ಸಂಬಂಧಿಸಿದಂತೆ ನೆರೆಯವರಲ್ಲಿ ಮಾತುಕತೆ ನಡೆಯಲಿದೆ. ಉಪಾಯದಿಂದ ಉತ್ತರಿಸಿ. ಮಕ್ಕಳಿಂದ ಸಂತೋಷ ಸಿಗಲಿದೆ.

ಮಿಥುನ: ಮನೆಯಲ್ಲಿ ನಡೆದ ಅಹಿತಕರ ಘಟನೆಯಿಂದಾಗಿ ಮಾನಸಿಕ ಹಾಗೂ ದೈಹಿಕವಾಗಿ ಆರೋಗ್ಯಕ್ಕೆ ಹಾನಿಯುಂಟಾಗಲಿದೆ. ಸುತ್ತಲಿನ ವಾತಾವರಣ ಸಂತಸದಾಯಕವಾಗಿ ಇರುತ್ತದೆ. ಸಮಸ್ಯೆ ನೀವಾಗಿಯೇ ಪರಿಹರಿಸಿಕೊಳ್ಳುವಿರಿ.

ಕರ್ಕಾಟಕ: ಬಾಲ್ಯಸ್ನೇಹಿತನಿಗಾಗಿ ಮನೆಯಲ್ಲಿ ವಿಶೇಷ ಭೋಜನದ ವ್ಯವಸ್ಥೆ ನಡೆಯುವುದು. ಆಹಾರದಲ್ಲಿ ಆಗುವ ಬದಲಾವಣೆಯಿಂದಾಗಿ ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ.

ಸಿಂಹ: ಸ್ವಂತ ಉದ್ಯೋಗಿಗಳಿಗೆ ಬರುವ ನೂತನ ಯೋಚನೆಗಳನ್ನು ಕೈ ಬಿಟ್ಟು ಈಗಿನ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವುದು ಉತ್ತಮ. ಪ್ರೀತಿ ಪಾತ್ರರಿಂದ ನೆಮ್ಮದಿ ತರುವಂಥ ಸನ್ನಿವೇಶಗಳು ನಡೆಯುತ್ತವೆ.

ಕನ್ಯಾ: ಸಾಮಾಜಿಕ ಕಾರ್ಯಗಳಲ್ಲಿ ಚಟುವಟಿಕೆಯಿಂದ, ಆಕರ್ಷಕಾ ರೀತಿಯಲ್ಲಿ ಭಾಗವಹಿಸುವಿರಿ. ಗೃಹ ಬಳಕೆಯ ಸಾಮಗ್ರಿ ಖರೀದಿಯಿಂದ ಸಂತಸ. ಸೋದರರನ್ನು ಸರಿಹಾದಿಗೆ ತರುವಲ್ಲಿ ಶ್ರಮ ವಹಿಸುವಿರಿ.

ತುಲಾ: ಬಹುದಿನಗಳ ಕನಸು ಸಾಕಾರಗೊಳ್ಳುವುದು. ಪ್ರಾಮಾಣಿಕತೆ, ಬುದ್ಧಿವಂತಿಕೆ, ಕೆಲಸದಲ್ಲಿನ ಶಿಸ್ತು ಗೌರವಯುತ ಹುದ್ದೆಯನ್ನು ಅಲಂಕರಿಸಲು ಸಹಾಯ ಮಾಡಲಿದೆ. ರಾಜಕೀಯ ಚಟುವಟಿಕೆಗಳಲ್ಲಿ ಓಡಾಟ ಇರುವುದು.

ವೃಶ್ಚಿಕ: ಕುಟುಂಬದ ಸದಸ್ಯರ ಜೊತೆಗೆ ಕಳೆಯುವ ಈ ದಿನದ ಸಮಯವು ಹಾಸ್ಯಮಯವಾಗಿರಲಿದೆ. ಪ್ರಾಪಂಚಿಕ ವಿಷಯಗಳಲ್ಲಿ ಮಹತ್ವಾಕಾಂಕ್ಷೆ ಇರುವವರಿಗೆ ಶುಭ ದಿನ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಯಶಸ್ಸು ಲಭ್ಯ.

ಧನು: ಮಹತ್ವಾಕಾಂಕ್ಷೆ ಈಡೇರಿಕೆಯತ್ತ ಮನುಷ್ಯ ಪ್ರಯತ್ನದ ಜತೆಯಲ್ಲಿ ಸಕಾರಾತ್ಮಕ ದೃಷ್ಟಿಕೋನವಿರಲಿ. ಉದ್ಯೋಗಾಕಾಂಕ್ಷಿಗಳಿಗೆ ವಿದ್ಯಾರ್ಹತೆಗೆ ಸರಿಯಾದ ಕೆಲಸಗಳು ದೊರಕುವಲ್ಲಿ ವ್ಯತ್ಯಾಸಗಳಾಗಬಹುದು.

ಮಕರ: ಒಡಹುಟ್ಟಿದವರ ಸಹಾಯ, ಸಹಕಾರದಿಂದ ಮಾನಸಿಕ ನೆಮ್ಮದಿ ಮತ್ತು ಸಂಸಾರದಲ್ಲಿ ಸಮತೋಲನ ಹೊಂದುವಿರಿ. ಬಂಧುವರ್ಗದವರ ಸಹಾಯ ಸ್ವೀಕರಿಸುವುದು ಅಗೌರವವೆಂದು ಭಾವಿಸಬೇಡಿ.

ಕುಂಭ: ಅದೃಷ್ಟ ನಿಮ್ಮೆಡೆಗಿದ್ದರೂ ಎಲ್ಲಾ ಕಾರ್ಯಗಳನ್ನು ಎಚ್ಚರಿಕೆಯಿಂದ ನಿರ್ವಹಿಸುವುದು ಉತ್ತಮ. ಸದುದ್ದೇಶ ಕಾರಣದಿಂದ ಕೆಲವು ಕೆಲಸವನ್ನು ಗೌಪ್ಯವಾಗಿ ನಿರ್ವಹಿಸಬೇಕಾಗುವುದು. ಆಹಾರದಲ್ಲಿ ಪಥ್ಯವಿರಲಿ.


ಮೀನ: ನಿಯಮ ಉಲ್ಲಂಘನೆ ಮಾಡುವುದು, ದಬ್ಬಾಳಿಕೆ ನಡೆಸುವ ನಿಮ್ಮ ರೀತಿ ನೀತಿಯನ್ನು ಬದಲಿಸಿಕೊಳ್ಳುವ ಹಾದಿಯನ್ನು ಹುಡುಕಿಕೊಳ್ಳಿರಿ. ವಿನಾಯಕನ ದರ್ಶನದಿಂದ ಅನುಕೂಲ.

ಪದಬಂಧ 5826

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಾರಸುದಾರ ಇಲ್ಲಿದ್ದಾನೆ (4)
3.ಹರಸಾಹಸ ಪಟ್ಟ ಮೇಲೆಯೇ ದೊರೆತಿರುವ ಗೆಳೆತನ! (4)
5.ಮಿತಿಯಿದ್ದಾಗ ಕಲಿತಿರುವ ರೇಖಾಗಣಿತ (3)
6.ಈತ ಕುರಿಗಳನ್ನು ಕಾಯುವವನು (3)
8.ಸನ್ಯಾಸ ಪಡೆದವನ ರಚನೆ! (3)
9.ದರವಿದ್ದಾಗಲೇ ಇದು ಅಗತ್ಯ! (3)
11.ನಕಲು ಎಂದಾಗ ಈ ರೀತಿ ಕೋಪಗೊಳ್ಳು! (3)
12.ಲಕ್ಷ ಹಣನೀಡಿದರೂ ತೋರಿಸಿದ ಅನಾದರ (3)
13.ಚತುರ್ವರ್ಣಗಳಲ್ಲಿ ಎರಡನೆಯ ವರ್ಗ (3)
14.ಚಡಪಡಿಸುತ್ತಾ ಹಾಕಿರುವ ಹಾಸುಗಲ್ಲು (3)
15.ಇದು ಮುಸಲ್ಮಾನರ ಪ್ರಾರ್ಥನಾ ಮಂದಿರ (3)
17.ಶಕೆ ಬಂದಾಗಲೆಲ್ಲಾ ಮುತ್ತುವ ಸೊಳ್ಳೆ (3)
19.ಈ ತರ ದೊರೆತ ಟ್ರೇನಿಂಗ್! (4)
20.ಪ್ರದೂಷಣೆ ಬಗ್ಗೆ ಕಾಳಜಿ ವಹಿಸಿರುವ ಹಾಸ್ಯಗಾರ (4)

ಮೇಲಿಂದ ಕೆಳಕ್ಕೆ
1.ಲಾಯಕ್ಕು ಎನ್ನಿಸಿದ್ದೆಲ್ಲಾ ಬರೀ ನಷ್ಟ! (3)
2.ಜಾಗರಣೆಯಲ್ಲೇ ಬಿಡುವು ಹುಡುಕಿ! (2)
3.ಸಮಿತಿಯಲ್ಲಿರುವ ಹೆಂಡತಿ (2)
4.ತಿಂಗಳ ಕೊನೆಯಲ್ಲಿ ಒಂದಾಗಿ ಸೇರಿಸಿದುದು (3)
7. ಪ್ರತ್ಯುತ್ತರಕ್ಕೊಂದು ಪರ್ಯಾಯ ಪದ (5)
8.ಬ್ರಹ್ಮನ ಕಟ್ಟಳೆಯಿದು (5)
10.ಭಿಕ್ಷ ಎತ್ತುವಂತಹ ಅಭಾವ! (3)
14.ನಿರ್ವಿವಾದವಾಗಿ ಇದು ಅಗಿದು ನುರಿಸಿದುದು (3)
16.ಅಂಕಣದಲ್ಲಿ ಕಾಣಿಸಿದ ತೇದಿ (3)
17.ಕುಶಾಗ್ರಮತಿಯ ಬುದ್ಧಿ (2)
18.ಕವನವನ್ನು ಬರೆದವನು (2)



5825ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮನ್ವಂತರ 3.ಪಿಳ್ಳಂಗೋವಿ
5.ತಿಲಕ 7.ಮಿತ್ರ
9.ವನಪಾಲಕ 11.ಸ್ಥಳಪುರಾಣ
13.ತರಿ 16.ಗಾಯಕ
18.ಸಮಾಧಾನ
19.ಸರಿತ್ವತಿ

ಮೇಲಿಂದ ಕೆಳಕ್ಕೆ:
1.ಮರುಭೂಮಿ 2.ರತಿ
3.ಪಿಕ 4.ವಿದ್ವಾಂಸ
6.ಲಶುನ 8.ತ್ರಯಸ್ಥ
10.ಕಡಿತ 12.ರಾಧೇಯ
14.ರಿಯಾಯತಿ 15.ಪ್ರಯಾಸ
16.ಗಾನ 17.ಕಸ

ಸುಡೊಕು 6211

3		2	1		4		6	7
	1						3	2
7			6		2	5		
2					3			5
				4		2	9	
			9					1
	4	1	2				8	
9				7	8		5	
	6			5		4	2	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6210 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ಗದಗ ಜಿಲ್ಲೆಯ ಕಪ್ಪತಗುಡ್ಡ: ಕರಡು ಅಧಿಸೂಚನೆ ಹೊರಡಿಸಿದ ಕೇಂದ್ರ ಪರಿಸರ ಸಚಿವಾಲಯ

322 ಚದರ ಕಿ.ಮೀ ಪರಿಸರ ಸೂಕ್ಷ್ಮ ಪ್ರದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಗದಗ ಜಿಲ್ಲೆಯ ಕಪ್ಪತಗುಡ್ಡ ವನ್ಯಜೀವಿಧಾಮದ 322 ಚದರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ನಿಗದಿಪಡಿಸಿ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ಕರಡು ಅಧಿಸೂಚನೆ ಹೊರಡಿಸಿದೆ. ಆಕ್ಷೇಪಣೆ ಸಲ್ಲಿಸಲು 60 ದಿನಗಳ ಕಾಲಾವಕಾಶ ನೀಡಲಾಗಿದೆ.

ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಕಂದಾಯ ಗ್ರಾಮಗಳ 298.89 ಚದರ ಕಿ.ಮೀ. ಹಾಗೂ ಅಧಿಸೂಚಿತ ಅರಣ್ಯ ಪ್ರದೇಶಗಳ 23.80 ಕಿ.ಮೀ ಸೇರಿವೆ. ಈ ಪ್ರದೇಶದಲ್ಲಿ 62 ಗ್ರಾಮಗಳು ಬರಲಿವೆ. ಪರಿಸರ ಸೂಕ್ಷ್ಮ ಪ್ರದೇಶವನ್ನು ಕನಿಷ್ಠ ಒಂದು ಕಿ.ಮೀ ಯಿಂದ ಗರಿಷ್ಠ 4.30 ಕಿ.ಮೀವರೆಗೆ ಗುರುತಿಸಲಾಗಿದೆ. ಉತ್ತರ ದಿಕ್ಕಿನಲ್ಲಿ 1 ಕಿ.ಮೀಯಿಂದ 3.25 ಕಿ.ಮೀ ವರೆಗೆ, ಪಶ್ಚಿಮ ದಿಕ್ಕಿನಲ್ಲಿ 1 ಕಿ.ಮೀಯಿಂದ 4.30 ಕಿ.ಮೀ ವರೆಗೆ, ವಾಯವ್ಯ ದಿಕ್ಕಿನಲ್ಲಿ 1.96 ಕಿ.ಮೀ ವರೆಗೆ ಪರಿಸರ ಸೂಕ್ಷ್ಮ ಪ್ರದೇಶವೆಂದು ನಿಗದಿಪಡಿಸಲಾಗಿದೆ. ಉಳಿದ ದಿಕ್ಕುಗಳಲ್ಲಿ 1 ಕಿ.ಮೀ. ಮಾತ್ರ ಇದೆ.

ವನ್ಯಜೀವಿ ಧಾಮದ 10 ಕಿ.ಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆಗೆ ಅನುಮತಿ ಕೋರಿ ಒಟ್ಟು 28 ಪ್ರಸ್ತಾವಗಳು ಕರ್ನಾಟಕ ಸರ್ಕಾರಕ್ಕೆ ಸಲ್ಲಿಕೆಯಾಗಿವೆ. ಗಣಿ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಒಂದೊಂದು ದಿಕ್ಕಿನಲ್ಲಿ ಒಂದೊಂದು ರೀತಿಯಲ್ಲಿ ಗಡಿ ನಿಗದಿಪಡಿಸಲಾಗಿದೆ ಎಂಬ ಅನುಮಾನವನ್ನು ಪರಿಸರ ತಜ್ಞರು ವ್ಯಕ್ತಪಡಿಸಿದ್ದಾರೆ.

ಮೇಲ್ವಿಚಾರಣಾ ಸಮಿತಿ: ಪರಿಸರ ಸೂಕ್ಷ್ಮ ಪ್ರದೇಶದ ಮೇಲ್ವಿಚಾರಣೆಗೆ ಬೆಳಗಾವಿ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಗದಗ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು, ವನ್ಯಜೀವಿ ತಜ್ಞರು ಸೇರಿ 9 ಮಂದಿ ಸದಸ್ಯರಾಗಿರುವರು.

'ಉತ್ತರ ಹಾಗೂ ಪಶ್ಚಿಮ ದಿಕ್ಕು ಬಿಟ್ಟರೆ ಪರಿಸರ ಸೂಕ್ಷ್ಮ ವಲಯದ ಮಿತಿಯನ್ನು ಬಹುತೇಕ ಎಲ್ಲೆಡೆ ಕೇವಲ ಒಂದರಿಂದ ಗರಿಷ್ಠ 1.96 ಕಿ.ಮೀ ವರೆಗೆ ನಿಗದಿ ಮಾಡಿರುವುದು ಯಾವ ಕಾರಣಕ್ಕಾಗಿ ಎಂಬುದು ತಿಳಿಯುತ್ತಿಲ್ಲ. ಒಂದು ವೇಳೆ ಗಣಿಗಾರಿಕೆ ಪ್ರಸ್ತಾವಿತ ಜಾಗಗಳು ಈ ಪ್ರದೇಶಗಳಿಗೆ ಹತ್ತಿರದಲ್ಲಿದ್ದರೆ ಕೇಂದ್ರ ಸರ್ಕಾರಕ್ಕೆ ಲಿಖಿತ ಆಕ್ಷೇಪಣೆ ಸಲ್ಲಿಸಲಾಗುವುದು' ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ತಿಳಿಸಿದರು.

ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಯಾವುದಕ್ಕೆ ನಿರ್ಬಂಧ

- ಈಗಿರುವ ಹಾಗೂ ಹೊಸ ವಾಣಿಜ್ಯ ಗಣಿಗಾರಿಕೆ, ಕಲ್ಲುಗಣಿಗಾರಿಕೆ, ಕಲ್ಲು ಪುಡಿ ಮಾಡುವ ಘಟಕಗಳನ್ನು ಪೂರ್ಣ ನಿಷೇಧಿಸಲಾಗಿದೆ
- ಮಾಲಿನ್ಯಕ್ಕೆ ಕಾರಣವಾಗುವ ಕೈಗಾರಿಕೆಗಳ ಸ್ಥಾಪನೆಗೆ ನಿರ್ಬಂಧ
- ಯಾವುದೇ ಹೊಸ ಉಷ್ಣ ವಿದ್ಯುತ್ ಯೋಜನೆಗಳನ್ನು ಕೈಗೆತ್ತಿಕೊಳ್ಳುವಂತಿಲ್ಲ
- ಯಾವುದೇ ಅಪಾಯಕಾರಿ ವಸ್ತು ಬಳಕೆ ಅಥವಾ ಉತ್ಪಾದನೆ ಅಥವಾ ಸಂಸ್ಕರಣೆಗೆ ನಿರ್ಬಂಧ
- ನೈಸರ್ಗಿಕ ಜಲಮೂಲಗಳು ಅಥವಾ ಸಂಸ್ಕರಿಸದ ತ್ಯಾಜ್ಯಗಳ ವಿಸರ್ಜನೆ ನಿಷೇಧ
- ಹೊಸದಾಗಿ ಘನತ್ಯಾಜ್ಯ ವಿಲೇವಾರಿ ಘಟಕ ಮತ್ತು ಜೈವಿಕ ವೈದ್ಯಕೀಯ ತ್ಯಾಜ್ಯಕ್ಕೆ ಸುಡುವ ಘಟಕಕ್ಕಿಲ್ಲ ಅವಕಾಶ
- ಈಗಿರುವ ಹಾಗೂ ಹೊಸದಾಗಿ ಇಟ್ಟಿಗೆ ಗೂಡುಗಳ ಘಟಕ ಸ್ಥಾಪನೆಗೆ ನಿಷೇಧ
- ಮರದ ಮಿಲ್‌ಗಳಿಗೆ ನಿರ್ಬಂಧ
- ದೊಡ್ಡ ಪ್ರಮಾಣದಲ್ಲಿ ಜಾನುವಾರು ಹಾಗೂ ಕೋಳಿಗಳ ಫಾರ್ಮ್‌ಗಳಿಗೆ ಅವಕಾಶ ಇಲ್ಲ
- ಮರ ಆಧಾರಿತ ಕೈಗಾರಿಕೆಗಳನ್ನು ಆರಂಭಿಸುವಂತಿಲ್ಲ
- ಪರಿಸರ ಸೂಕ್ಷ್ಮ ಪ್ರದೇಶದ ಒಂದು ಕಿ.ಮೀ. ವ್ಯಾಪ್ತಿಯೊಳಗೆ ಹೋಟೆಲ್‌ಗಳು ಹಾಗೂ ರೆಸಾರ್ಟ್‌ಗಳನ್ನು ತೆರೆಯುವಂತಿಲ್ಲ

ಮುಖ್ಯಾಂಶಗಳು

- ಕಪ್ಪತಗುಡ್ಡ ವನ್ಯಜೀವಿಧಾಮ ಎಂದು ಕರ್ನಾಟಕ ಸರ್ಕಾರದಿಂದ 2019ರ ಮೇ 30ರಂದು ಅಧಿಸೂಚನೆ
- ಗದಗ, ಮುಂಡರಗಿ, ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ತಾಲ್ಲೂಕಿನ 244.15 ಚದರ ಕಿ.ಮೀ. ವ್ಯಾಪ್ತಿಯಲ್ಲಿದೆ ಈ ವನ್ಯಜೀವಿಧಾಮ
- ಕಪ್ಪತಗುಡ್ಡ ಮೀಸಲು ಅರಣ್ಯದಲ್ಲಿ 500 ವಿಧದ ಅಪರೂಪದ ಔಷಧೀಯ ಸಸ್ಯಗಳು ಇವೆ

ಸುದ್ದಿ 2 ನಿಮಿಷ

ರಾಣಿ ಎಲಿಜಬೆತ್, ವಿಕ್ಟೋರಿಯಾ ಚಿತ್ರವಿರುವ ಬೆಳ್ಳಿ ನಾಣ್ಯಗಳ ಪತ್ತೆ

ನಂಜನಗೂಡು (ಮೈಸೂರು ಜಿಲ್ಲೆ): ಬ್ರಿಟನ್ ರಾಣಿಯರಾಗಿದ್ದ ಎಲಿಜಬೆತ್ ಮತ್ತು ವಿಕ್ಟೋರಿಯಾ ಚಿತ್ರವಿರುವ 29 ಬೆಳ್ಳಿ ನಾಣ್ಯಗಳು ತಾಲ್ಲೂಕಿನ ತಾಯೂರು ಗ್ರಾಮದಲ್ಲಿ ದೊರೆತಿವೆ. ಲಕ್ಷ್ಮೀವರದರಾಜಸ್ವಾಮಿ ದೇವಾಲಯವನ್ನು ₹ 3 ಕೋಟಿ ವೆಚ್ಚದಲ್ಲಿ ಜೀರ್ಣೋದ್ಧಾರ ಮಾಡುತ್ತಿದ್ದು, ಅಡಿಪಾಯಕ್ಕಾಗಿ ಅಗೆಯುವಾಗ ನಾಣ್ಯಗಳು ಗೋಚರಿಸಿವೆ. 'ನಾಣ್ಯಗಳು 18ನೇ ಶತಮಾನದವು ಎಂದು ತಿಳಿಯಲಾಗಿದೆ' ಎಂದು ಪುರಾತತ್ವ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ನಾಣ್ಯಗಳನ್ನು ಬಿಳಿಗೆರೆ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದು, ನ್ಯಾಯಾಲಯದ ಅನುಮತಿ ಪಡೆದು ಇಲಾಖೆಗೆ ಹಸ್ತಾಂತರಿಸಲಿದ್ದಾರೆ.



ರಾಷ್ಟ್ರದ್ರೋಹಿ ಅಲ್ಪಸಂಖ್ಯಾತರ ಅನ್ಯಾಯ ತಡೆಯಲು ಹೊಸ ಸಂಘಟನೆ: ಈಶ್ವರಪ್ಪ

ಹುಬ್ಬಳ್ಳಿ: 'ದಲಿತರು, ಹಿಂದುಳಿದ ವರ್ಗದವರ ಮೇಲೆ ರಾಷ್ಟ್ರದ್ರೋಹಿ ಅಲ್ಪಸಂಖ್ಯಾತರಿಂದ ಆಗುತ್ತಿರುವ ಅನ್ಯಾಯವನ್ನು ತಡೆಯಲು ಸಂಘಟನೆಯೊಂದನ್ನು ರಚಿಸುವ ಬಗ್ಗೆ ಚರ್ಚಿಸಲು ಬಾಗಲಕೋಟೆಯಲ್ಲಿ ಅ.20ರಂದು ಬೆಳಿಗ್ಗೆ 11ಕ್ಕೆ ಸಭೆ ಕರೆಯಲಾಗಿದೆ' ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಸೋಮವಾರ ಇಲ್ಲಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಂಘಟನೆ ರಚಿಸುವ ಸಂಬಂಧ ಉತ್ತರ ಕರ್ನಾಟಕದ ಹಲವು ಪ್ರಮುಖ ನಾಯಕರ ಜೊತೆ ಚರ್ಚಿಸಿದ್ದೇವೆ. ಮಾಜಿ ಸಂಸದ ವಿರೂಪಾಕ್ಷಪ್ಪ, ಮಾಜಿ ಸಚಿವ ಗೂಳಿಹಟ್ಟಿ ಶೇಖರ್, ಮಾಜಿ ಶಾಸಕರಾದ ರಘುಪತಿ ಭಟ್, ವೀರಭದ್ರಪ್ಪ ಹಾಲಹರವಿ, ಅಹಿಂದ ಸಂಘಟನೆಯ ನಾಯಕ ಮುಕುಡಪ್ಪ ಸೇರಿದಂತೆ ಹಲವರು ಸಭೆಯಲ್ಲಿ ಭಾಗವಹಿಸಿ, ಅಭಿಪ್ರಾಯ ತಿಳಿಸಿದ್ದಾರೆ' ಎಂದರು.

'30–40 ಜನ ಸಾಧು ಸಂತರು ಇಂತಹ ಸಂಘಟನೆಯೊಂದನ್ನು ರಚಿಸುವಂತೆ ಸಲಹೆ ನೀಡಿದ್ದಾರೆ. ಇದಕ್ಕೂ ಬಿಜೆಪಿಗೂ ಯಾವುದೇ ಸಂಬಂಧವಿಲ್ಲ. 'ರಾಯಣ್ಣ– ಚನ್ನಮ್ಮ ಬ್ರಿಗೇಡ್' ಎಂದು ನಾಮಕರಣ ಮಾಡುವಂತೆ ಕೆಲವರು ಸಲಹೆ ನೀಡಿದ್ದಾರೆ. ಬಾಗಲಕೋಟೆಯಲ್ಲಿ ನಡೆಯಲಿರುವ ಸಭೆಯಲ್ಲಿ ಇದರ ಬಗ್ಗೆ ಚರ್ಚಿಸಿ, ತೀರ್ಮಾನ ಕೈಗೊಳ್ಳಲಾಗುವುದು' ಎಂದರು.

ಕಪ್ಪತಗುಡ್ಡ: ಗಣಿಗಾರಿಕೆ ಪ್ರಸ್ತಾವ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗದಗ ಜಿಲ್ಲೆಯ ಕಪ್ಪತಗುಡ್ಡ ವನ್ಯಜೀವಿ ಧಾಮದ 10 ಕಿ.ಮೀ ವ್ಯಾಪ್ತಿಯಲ್ಲಿ 28 ಗಣಿಗಾರಿಕೆಗಳಿಗೆ ಅನುಮತಿಗೆ ಕೋರಿ ಸಲ್ಲಿಕೆಯಾಗಿದ್ದ ಪ್ರಸ್ತಾವಗಳ ವಿಷಯವನ್ನು ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿ ಸಭೆ ಚರ್ಚೆಗೆ ಕೈಗೆತ್ತಿಕೊಳ್ಳದೇ ಮುಂದೂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಮಂಡಳಿ ಸಭೆ ನಡೆಯಿತು. ವಿವಾದಕ್ಕೆ ಒಳಗಾಗಬಹುದಾಗಿದ್ದ ಬಹುತೇಕ ಪ್ರಸ್ತಾವಗಳನ್ನು ಮುಂದೂಡಲಾಗಿದೆ.

ಅಲ್ಲದೇ, ಕಾವೇರಿ ವಿಸ್ತರಿತ ವನ್ಯಜೀವಿಧಾಮದ 10 ಕಿ.ಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆಗೆ ಕೋರಿ ಸಲ್ಲಿಕೆಯಾಗಿದ್ದ ಪ್ರಸ್ತಾವದ ವಿಷಯವನ್ನೂ ಮುಂದೂಡಲಾಯಿತು ಎಂದು ಮೂಲಗಳು ತಿಳಿಸಿವೆ.

ಚಿತ್ರದುರ್ಗ ಜಿಲ್ಲೆಯ ಅರಣ್ಯ ಭೂಮಿಯಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಎನರ್ಕಾನ್ ಪವನ ವಿದ್ಯುತ್ ಕಂಪನಿಗೆ ನೀಡಿರುವ ಅನುಮತಿಯನ್ನು ನವೀಕರಿಸುವ ಪ್ರಸ್ತಾವದ ವಿಷಯವನ್ನೂ ಮುಂದೂಡಲಾಗಿದೆ.

1,500 ಮೆ.ವಾ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ 'ವರಾಹಿ ಪಂಪ್ಡ್ ಸ್ಟೋರೇಜ್ ಯೋಜನೆ'ಯ ಪ್ರಸ್ತಾವದ ವಿಷಯವನ್ನೂ ಮುಂದೂಡಲಾಗಿದೆ.

ಭದ್ರಾವತಿ ವಿಭಾಗದ ಚೊರ್ಡೇನಹಳ್ಳಿ ಮತ್ತು ಕೈತೊಟ್ಲು ಪ್ರದೇಶಗಳನ್ನು ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಬಫರ್ ಪ್ರದೇಶಕ್ಕೆ ಸೇರ್ಪಡೆಗೊಳಿಸುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಗಿದೆ.

'ಶಿವಮೊಗ್ಗ ಜಿಲ್ಲೆ ಶೆಟ್ಟಿಹಳ್ಳಿ ಅಭಯಾರಣ್ಯದ ಗಡಿಯ ಪರಿಷ್ಕೃತ ಪ್ರಸ್ತಾವನೆ ಪರಿಶೀಲಿಸಿ ಒಟ್ಟು 395.64 ಚದರ ಕಿ.ಮೀ.ಗೆ ನಿಗದಿಪಡಿಸಲಾಗಿದ್ದು, ಇದಕ್ಕೆ ಮಂಡಳಿ ತನ್ನ ಅಂಗೀಕಾರ ನೀಡಿದ್ದು, ಕೇಂದ್ರೀಯ ವನ್ಯಜೀವಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು. ಇದರಿಂದ ಶಿವಮೊಗ್ಗ ಜನತೆಗೆ ಎದುರಾಗಿದ್ದ ಅರಣ್ಯ ಗಡಿ ಸಮಸ್ಯೆಗೆ ಪರಿಹಾರ ಸಿಗುವ ನಿರೀಕ್ಷೆ ಇದೆ' ಎಂದು ಸಭೆಯ ಬಳಿಕ ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿಯ 80ನೇ ಸಭೆ ನಾಳೆ

ಕಾರ್ಯಸೂಚಿಯಲ್ಲಿ ಕಳಸಾ ನಾಲಾ ತಿರುವು

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ 80ನೇ ಸಭೆ ಇದೇ 9ರಂದು ನವದೆಹಲಿಯಲ್ಲಿ ನಡೆಯಲಿದೆ. ಮಹದಾಯಿ ಯೋಜನೆಯ ಭಾಗವಾದ ಕಳಸಾ ನಾಲಾ ತಿರುವು ಯೋಜನೆಗೆ ವನ್ಯಜೀವಿ ಅನುಮೋದನೆ ನೀಡುವ ಪ್ರಸ್ತಾವನೆಯು ಸಭೆಯ ಕಾರ್ಯಸೂಚಿಯಲ್ಲಿದೆ.

ನ್ಯಾಯಿಕ ಪ್ರಕ್ರಿಯೆಯಲ್ಲಿನ ಮಧ್ಯಪ್ರವೇಶ (ಸಬ್‌ಜುಡೀಸ್) ಆಗುತ್ತದೆ ಎಂಬ ಕಾರಣ ನೀಡಿ ಈ ಯೋಜನೆಗೆ ವನ್ಯಜೀವಿ ಅನುಮೋದನೆ ನೀಡಲು ವನ್ಯಜೀವಿ ಮಂಡಳಿಯು 79ನೇ ಸಭೆಯಲ್ಲಿ ನಿರಾಕರಿಸಿತ್ತು. ಈ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲು ತೀರ್ಮಾನಿಸಲಾಗಿತ್ತು.

ಹುಬ್ಬಳ್ಳಿ-ಧಾರವಾಡ, ಸುತ್ತಮುತ್ತಲಿನ ಪಟ್ಟಣಗಳು ಹಾಗೂ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಗುರಿ ಹೊಂದಿರುವ ಈ ಯೋಜನೆಗೆ ಮಹದಾಯಿ ನದಿ ನೀರು ವಿವಾದ ನ್ಯಾಯಮಂಡಳಿಯು 2018ರ ಆಗಸ್ಟ್ 14ರಂದು 3.90 ಟಿಎಂಸಿ ಅಡಿ ನೀರಿನ ಹಂಚಿಕೆ ಮಾಡಿತ್ತು. ಈ ಯೋಜನೆಯ ಪರಿಷ್ಕೃತ ವಿಸ್ತೃತ ಯೋಜನಾ ವರದಿಗೆ ಕೇಂದ್ರ ಜಲ ಆಯೋಗ 2022ರ ಡಿಸೆಂಬರ್ 29ರಂದು ಒಪ್ಪಿಗೆ ನೀಡಿತ್ತು. ಇದರಲ್ಲಿ ಕಳಸಾ ನಾಲಾ ತಿರುವು ಯೋಜನೆಗೆ 1.78 ಟಿಎಂಸಿ ಅಡಿ ಮೀಸಲಿಡಲಾಗಿದೆ.

ಈ ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಏಳು ಗ್ರಾಮಗಳ ಅರಣ್ಯ ಬಳಕೆಗೆ (ಜಾಕ್‌ವೆಲ್ ನಿರ್ಮಾಣ, ಪಂಪ್ ಹೌಸ್, ಎಲೆಕ್ಟ್ರಿಕಲ್ ಸಬ್ ಸ್ಟೇಷನ್, ಪೈಪ್‌ಲೈನ್) ಒಪ್ಪಿಗೆ ನೀಡುವಂತೆ ರಾಜ್ಯ ಸರ್ಕಾರವು ಮಂಡಳಿಗೆ ಪ್ರಸ್ತಾವ ಸಲ್ಲಿಸಿತ್ತು. ಈ ಯೋಜನೆಗೆ ಕಾಳಿ ಹಾಗೂ ಸಹ್ಯಾದ್ರಿ ಹುಲಿ ಸಂರಕ್ಷಿತ ಪ್ರದೇಶದ 10.68 ಹೆಕ್ಟೇರ್ ಅರಣ್ಯ ಬಳಸಿಕೊಳ್ಳಲಾಗುತ್ತದೆ ಎಂದು ಪ್ರಸ್ತಾವದಲ್ಲಿ ತಿಳಿಸಿತ್ತು. ಇದಕ್ಕೆ ರಾಜ್ಯ ವನ್ಯಜೀವಿ ಮಂಡಳಿ ಅನುಮೋದನೆ ನೀಡಿ ಕೇಂದ್ರಕ್ಕೆ ಕಳುಹಿಸಿತ್ತು.

'ಮಹದಾಯಿ ಯೋಜನಾ ಪ್ರದೇಶದ ವಾಸ್ತವಾಂಶದ ಅಧ್ಯಯನಕ್ಕೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು ತಜ್ಞರ ತಂಡ ಕಳುಹಿಸಿತ್ತು. ಈ ಸಮಿತಿ ಹಲವು ಶಿಫಾರಸು ಮಾಡಿದೆ. ಈ ಬಗ್ಗೆ ಹುಲಿ ಸಂರಕ್ಷಣಾ ಪ್ರಾಧಿಕಾರದಿಂದ ಪ್ರತಿಕ್ರಿಯೆ ಕೇಳಲಾಗಿತ್ತು. ಸಬ್‌ಜುಡೀಸ್ ಆಗುತ್ತದೆ ಎಂಬ ಕಾರಣ ಮುಂದಿಟ್ಟು ಈವರೆಗೆ ಪ್ರತಿಕ್ರಿಯೆ ನೀಡಿಲ್ಲ' ಎಂದು ವನ್ಯಜೀವಿ ಮಂಡಳಿಯ 79ನೇ ಸಭೆಯಲ್ಲಿ ಚರ್ಚಿಸಲಾಗಿತ್ತು.



ಕೊಚ್ಚಿ ಹೋದ ಸೇತುವೆ...

ಯಾದಗಿರಿ ಜಿಲ್ಲೆಯ ಪಗಲಾಪುರ ಗ್ರಾಮಕ್ಕೆ ರಸ್ತೆ ಸಂಪರ್ಕ ಕಲ್ಪಿಸುವ ಸೇತುವೆ ಈಚೆಗೆ ಸುರಿದ ಮಳೆಯಿಂದಾಗಿ ಕೊಚ್ಚಿಹೋಗಿದ್ದು, ಹಳ್ಳ ದಾಟಿ ಗ್ರಾಮಕ್ಕೆ ತೆರಳಲು ಬೈಕ್ ಸವಾರರು ಸೋಮವಾರ ಕಷ್ಟಪಟ್ಟರು ಪ್ರಜಾವಾಣಿ ಚಿತ್ರ: ರಾಜಕುಮಾರ ನಳ್ಳಿಕರ

ಜೆನ್ನಿ ಮಿಲ್ಕ್ ವಂಚನೆ: ಮೂವರ ಬಂಧನ

ಹೊಸಪೇಟೆ (ವಿಜಯನಗರ): ರೈತರಿಗೆ ಕತ್ತೆ ನೀಡಿ ಅವರಿಂದ ಹಾಲು ಖರೀದಿಸುವ ವ್ಯವಹಾರ ನಡೆಸುತ್ತಿದ್ದ ಜೆನ್ನಿಮಿಲ್ಕ್ ಕಂಪನಿಯಿಂದ 318ಕ್ಕೂ ಅಧಿಕ ರೈತರು ಮೋಸ ಹೋಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಪೊಲೀಸರು ಮೂವರು ಆರೋಪಿಗಳನ್ನು ನಗರದಲ್ಲಿ ಸೋಮವಾರ ಬಂಧಿಸಿದ್ದಾರೆ.

ಕಂಪನಿಯ ಎಂ.ಡಿ ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ವೇದಯಪಾಳ್ಯಂ ಗ್ರಾಮದ ನೂತಲಪಾಟಿ ಮುರಳಿ (43), ಕಂಪನಿಯ ವ್ಯವಸ್ಥಾಪಕ ಕಡಪ ಜಿಲ್ಲೆಯ ಗಾಲೀವೀಡು ಗ್ರಾಮದ ಕಾವಲಪಲ್ಲಿ ಉಮಾಶಂಕರ್ ರೆಡ್ಡಿ(33) ಹಾಗೂ ಕಂಪನಿಯ ಸೂಪರ್‌ವೈಸರ್ ಕಡಪ ಜಿಲ್ಲೆಯ ಪೋರ್ಮಾಮಿಲ್ಲ ಮಂಡಲಂ ಗ್ರಾಮದ ಸಯ್ಯದ್ ಮಹಮ್ಮದ್ ಗೌಸ್(27) ಬಂಧಿತರು.

ಶಿವಮೂರ್ತಿ ಶರಣರ ಬಿಡುಗಡೆ

ಒಂದನೇ ಪುಟದಿಂದ...

ಹೈಕೋರ್ಟ್ ಜಾಮೀನಿನ ವಿರುದ್ಧ ಸಂತ್ರಸ್ತೆಯರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಸಂತ್ರಸ್ತೆಯರು ಹಾಗೂ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆಯನ್ನು ಗಂಭೀರವಾಗಿ ಪರಿಗಣಿಸಿದ ಸುಪ್ರೀಂ ಕೋರ್ಟ್ ಜಾಮೀನಿಗೆ ತಡೆ ನೀಡಿತ್ತು. ವಾರದೊಳಗೆ ನ್ಯಾಯಾಲಯದ ಎದುರು ಶರಣಾಗುವಂತೆ ಶರಣರಿಗೆ ಸೂಚಿಸಿತ್ತು. ಅದರಂತೆ ಮೇ 27ರಂದು ಅವರು ಮತ್ತೆ ಶರಣಾಗಿದ್ದರು.

ಸಂತ್ರಸ್ತೆಯರು ಹಾಗೂ ಪ್ರಮುಖ ಸಾಕ್ಷಿಗಳ ವಿಚಾರಣೆ ಮುಗಿಯುವವರೆಗೂ ಆರೋಪಿ ನ್ಯಾಯಾಂಗ ಬಂಧನದಲ್ಲಿರಬೇಕು. ಜೊತೆಗೆ ವಿಚಾರಣೆಯನ್ನು 4 ತಿಂಗಳೊಳಗೆ ಪೂರ್ಣಗೊಳಿಸಬೇಕು. ಅಷ್ಟರಲ್ಲಿ ಸಾಧ್ಯವಾಗದಿದ್ದರೆ 2 ತಿಂಗಳು ಹೆಚ್ಚುವರಿಯಾಗಿ ತೆಗೆದುಕೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ಸೂಚಿಸಿತ್ತು.


'ಸುಪ್ರೀಂ ಕೋರ್ಟ್ ನಿರ್ದೇಶನದಂತೆ 130 ದಿನದೊಳಗೆ ಸಂತ್ರಸ್ತೆಯರು ಹಾಗೂ ಸಾಕ್ಷಿಗಳ ವಿಚಾರಣೆ ಪೂರ್ಣಗೊಂಡಿದ್ದು, ಜಾಮೀನಿಗಿದ್ದ ತಡೆ ತಾನಾಗಿಯೇ ತೆರವುಗೊಂಡಿದೆ. ಹೀಗಾಗಿ ಹೈಕೋರ್ಟ್ ಜಾಮೀನು ಮುಂದುವರಿಯಲಿದೆ. ಇದನ್ನು ಪರಿಗಣಿಸಿ ಸ್ವಾಮೀಜಿ ಬಿಡುಗಡೆಗೆ 2ನೇ ಜಿಲ್ಲಾ ಹೆಚ್ಚುವರಿ ಮತ್ತು ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರು ಆದೇಶಿಸಿದರು. ಮಿಕ್ಕ ಸಾಕ್ಷಿಗಳ ವಿಚಾರಣೆ ಮುಂದುವರಿಯಲಿದೆ' ಎಂದು ಶರಣರ ಪರ ವಕೀಲ ವಿಶ್ವನಾಥಯ್ಯ ತಿಳಿಸಿದರು.

ಕಾಲಿಗೆರಗಿದ ಭಕ್ತರು: ಶಿವಮೂರ್ತಿ ಶರಣರು ಜೈಲಿನಿಂದ ನಗುನಗುತ್ತಲೇ ಹೊರಬಂದರು. ಅವರನ್ನು ಕಂಡೊಡನೆ ಮುರುಘಾ ಮಠದ ಕಿರಿಯ ಸ್ವಾಮೀಜಿಗಳು, ಭಕ್ತರು ಕಾಲಿಗೆ ಎರಗಿ ನಮಸ್ಕರಿಸಿದರು. ದಾವಣಗೆರೆ ಮತ್ತು ಚಿತ್ರದುರ್ಗದ ಭಕ್ತರು ಸ್ವಾಮೀಜಿಗೆ ಹಾರ ಹಾಕಿ ಸ್ವಾಗತಿಸಿದರು. ಕೆಲ ಭಕ್ತರು ಸ್ವಾಮೀಜಿ ಪರ ಜೈಕಾರ ಹಾಕಲು ಮುಂದಾದರು. ಆದರೆ, ಪೊಲೀಸರು ಅವರನ್ನು ತಡೆದರು.

ಹೈಕೋರ್ಟ್ ಆದೇಶದಂತೆ ಶರಣರಿಗೆ ಚಿತ್ರದುರ್ಗ ಜಿಲ್ಲೆ ಪ್ರವೇಶಿಸಲು ಅವಕಾಶವಿಲ್ಲ. ಅಂತೆಯೇ ಅವರು ದಾವಣಗೆರೆ ಶಿವಯೋಗ ಆಶ್ರಮದತ್ತ ತೆರಳಿದರು. ದಾವಣಗೆರೆ ವಿರಕ್ತ ಮಠದ ಬಸವಪ್ರಭುಶ್ರೀ, ಶರಣರ ಉತ್ತರಾಧಿಕಾರಿ ಬಸವಾದಿತ್ಯ ಇದ್ದರು.

ಉತ್ಸವದ ವೇಳೆಯಲ್ಲೇ ಬಿಡುಗಡೆ ಭಾಗ್ಯ

ಶಿವಮೂರ್ತಿ ಶರಣರ ಬಂಧನದ ನಂತರ ನಗರದ ಮುರುಘಾ ಮಠದ ಆವರಣದಲ್ಲಿ ಎಲ್ಲ ಚಟುವಟಿಕೆ ಸ್ತಬ್ಧಗೊಂಡಿದ್ದವು. ಮಠದ ಆಡಳಿತಾಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು, ಭಕ್ತರು ಈಗ ನವರಾತ್ರಿ ಅಂಗವಾಗಿ ಶರಣ ಸಂಸ್ಕೃತಿ ಉತ್ಸವ ಹಾಗೂ ಜಯದೇವ ಸ್ವಾಮೀಜಿ 150ನೇ ಜಯಂತ್ಯುತ್ಸವ ಆಯೋಜಿಸಿದ್ದಾರೆ. ಮಠದ ಆವರಣದಲ್ಲಿ ಸಂಭ್ರಮ ಮರುಕಳಿಸಿದ್ದು ವೈಭವಯುತವಾಗಿ ಅಧ್ಯಾತ್ಮ, ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಿವೆ.



ದಾವಣಗೆರೆ ವಿರಕ್ತಮಠದ ಬಸವಶ್ರೀ ಸ್ವಾಮೀಜಿಯವರು ಚಿತ್ರದುರ್ಗ ಜಿಲ್ಲಾ ಕಾರಾಗೃಹದಿಂದ ಸೋಮವಾರ ಹೊರಬಂದ ಶಿವಮೂರ್ತಿ ಮುರುಘಾ ಶರಣರ ಕಾಲಿಗೆರಗಿ ನಮಸ್ಕರಿಸಿದರು

ಇದೇ ವೇಳೆ ಶಿವಮೂರ್ತಿ ಶರಣರು ಬಿಡುಗಡೆಯಾದ ಸುದ್ದಿ ಮಠದ ಅಂಗಳದಲ್ಲಿ ಚರ್ಚೆಗೆ ಕಾರಣವಾಯಿತು. ಬಿಡುಗಡೆ ನಂತರ ಶರಣರು ಮುರುಘಾ ಮಠದ ಪಕ್ಕದ ರಸ್ತೆಯಲ್ಲೇ ದಾವಣಗೆರೆಯತ್ತ ಪ್ರಯಾಣಿಸಿದರು. ಅವರನ್ನು ನೋಡಲು ಅಪಾರ ಭಕ್ತರು ರಸ್ತೆಯಲ್ಲಿ ಸಾಲುಗಟ್ಟಿ ನಿಂತಿದ್ದರು. ಮಠದ ಬಳಿ ಬರುತ್ತಲೇ ಶರಣರು ಭಕ್ತರತ್ತ ಕೈಬೀಸಿ ಮುಂದೆ ಸಾಗಿದರು.

'ಜೈಲಲ್ಲಿ ಜ್ಞಾನ ಸಂಪಾದನೆಗೆ ಒತ್ತು'

ದಾವಣಗೆರೆ: 'ಜೈಲಿನಲ್ಲಿದ್ದಾಗ ಜ್ಞಾನ ಸಂಪಾದನೆಗೆ ಒತ್ತು ನೀಡಿದ್ದೆ. ಈ ಬಾರಿ ಜೈಲಿನಲ್ಲಿ 150ಕ್ಕೂ ಹೆಚ್ಚು ಪುಸ್ತಕಗಳನ್ನು ಓದಿದ್ದೇನೆ. 4–5 ಪುಸ್ತಕಗಳನ್ನೂ ಬರೆದಿದ್ದು, ಎಲ್ಲವನ್ನೂ ಒಟ್ಟಿಗೇ ಬಿಡುಗಡೆ ಮಾಡಲಾಗುವುದು' ಎಂದು ಮುರುಘಾ ಶಿವಮೂರ್ತಿ ಸ್ವಾಮೀಜಿ ತಿಳಿಸಿದರು.

ಚಿತ್ರದುರ್ಗದ ಕಾರಾಗೃಹದಿಂದ ನಗರದ ಶಿವಯೋಗಾಶ್ರಮಕ್ಕೆ ಸೋಮವಾರ ಸಂಜೆ ಬಂದ ಸಂದರ್ಭ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಶಿವಯೋಗಾಶ್ರಮದಲ್ಲೇ ವಾಸ್ತವ್ಯ ಹೂಡಲಿದ್ದು, ಭಕ್ತರ ಭೇಟಿಗೆ ಅವಕಾಶವಿದೆ. ಯಾವ ಯಾವ ಕಾಲಕ್ಕೆ ಏನಾಗಬೇಕೋ ಅದು ಆಗುತ್ತದೆ. ಸ್ವಾಮೀಜಿಗಳು, ಸಂತರಿಗೆ ಸಹನೆ ಇರಬೇಕು. ಅಖಂಡವಾದ ಸಹನೆ ಇದ್ದರೆ, ಏನನ್ನೂ ಬೇಕಾದರೂ ಜಯಿಸಬಹುದು' ಎಂದರು.

ಆಶ್ರಮಕ್ಕೆ ಬಂದ ಸ್ವಾಮೀಜಿಯನ್ನು ಭಕ್ತರು ಪುಷ್ಪವೃಷ್ಟಿ ಮೂಲಕ ಸ್ವಾಗತಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

'ಬಸವೇಶ, ಮುರುಘೇಶನ ಆಶೀರ್ವಾದ'

ಕಾರಾಗೃಹದಿಂದ ಹೊರಬಂದ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಮೂರ್ತಿ ಶರಣರು, 'ಬಸವೇಶ, ಮುರುಘೇಶನ ಆಶೀರ್ವಾದದಿಂದ ನಾವಿಂದು ಬಿಡುಗಡೆಯಾಗಿದ್ದೇವೆ. ಎಲ್ಲ ಪ್ರಕರಣಗಳ ವಿರುದ್ಧ ನಾವು ಕಾನೂನು ಹೋರಾಟ ನಡೆಸುತ್ತೇವೆ. ಸತ್ಯಕ್ಕೆ ಜಯ ಸಿಗುತ್ತದೆ ಎಂಬ ವಿಶ್ವಾಸವಿದೆ. ಇದು ಮಾತನಾಡುವ ಕಾಲವಲ್ಲ, ಮೌನ ವಹಿಸುವಂತಹ ಕಾಲ. ವಿಚಾರ ಮಾಡಿ ಮುಂದಿನ ಹೆಜ್ಜೆ ಇಡುತ್ತೇವೆ' ಎಂದರು.

ಪ್ರಾಯೋಗಿಕ ಪರೀಕ್ಷೆ: ಪರಿಷ್ಕೃತ ಸುತ್ತೋಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ವಿದ್ಯಾರ್ಥಿಗಳು ಪ್ರಾಯೋಗಿಕ ಪರೀಕ್ಷೆಗೆ ಬೇರೆ ಕೇಂದ್ರಗಳಿಗೆ ತೆರಳಬೇಕು ಎನ್ನುವ ಸುತ್ತೋಲೆಗೆ ಆಕ್ಷೇಪ ವ್ಯಕ್ತವಾದ ನಂತರ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಪರಿಷ್ಕೃತ ಸುತ್ತೋಲೆ ಹೊರಡಿಸಿದೆ.

ಪರೀಕ್ಷಾ ಕೇಂದ್ರಗಳಲ್ಲಿನ ಪ್ರಯೋಗಾಲಯಗಳ ಸೌಕರ್ಯದ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಲಾಗುವುದು. ವ್ಯಾಸಂಗ ಮಾಡುತ್ತಿರುವ ಕಾಲೇಜಿನಲ್ಲಿ ಅಲ್ಲದೇ, ಬೇರೆ ಕಾಲೇಜಿನಲ್ಲಿ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬಲು ಅವರದೇ ಕಾಲೇಜಿನ ಉಪನ್ಯಾಸಕರನ್ನು ಆಂತರಿಕ ಪರೀಕ್ಷಕರಾಗಿ ನೇಮಿಸಲಾಗುವುದು ಎಂದು ಮಂಡಳಿ ಅಧ್ಯಕ್ಷೆ ಮಂಜುಶ್ರೀ ತಿಳಿಸಿದ್ದಾರೆ.

ಗ್ರಾಮೀಣ ಭಾಗದಲ್ಲಿ ಒಂದೇ ಕೇಂದ್ರ ಲಭ್ಯವಿದ್ದರೆ ಅಂತಹ ವಿದ್ಯಾರ್ಥಿಗಳಿಗೆ ಅದೇ ಕೇಂದ್ರದಲ್ಲೇ ಪರೀಕ್ಷೆಗೆ ಹಾಜರಾಗಲು ಸಮ್ಮತಿಸಲಾಗಿದೆ. ಪ್ರತಿ ವಿಷಯಕ್ಕೆ ಒಬ್ಬ ವಿದ್ಯಾರ್ಥಿಗೆ ₹9.60 ಬಿಡುಗಡೆ ಮಾಡಲು ಒಪ್ಪಿಗೆ ನೀಡಿದ್ದು, ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಅಗತ್ಯವಾದ ಉಪಕರಣಗಳನ್ನು ಖರೀದಿಸಲು ಹಣ ಬಳಸಿಕೊಳ್ಳಬಹುದು ಎಂದಿದ್ದಾರೆ.

ಪ್ರತಿ ಉಪನ್ಯಾಸಕರಿಗೆ ನಾಲ್ಕು ದಿನಗಳು ಮಾತ್ರ ಪರೀಕ್ಷಾ ಕರ್ತವ್ಯಕ್ಕೆ ಹಾಜರಾಗಲು ಅವಕಾಶ ನೀಡಲಾಗಿದ್ದು, ಪ್ರತಿಯೊಬ್ಬರೂ ಪಿಯು ಪರೀಕ್ಷಾ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯ ಎಂದು ಸೂಚಿಸಿದ್ದಾರೆ.

ಕೋವಿಡ್ ಅಕ್ರಮ: ಜಿ.ಪಿ.ರಘು ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಂದರ್ಭದಲ್ಲಿ ಪಿಪಿಇ ಕಿಟ್ ಮತ್ತು ಇತರೆ ಸಾಮಗ್ರಿಗಳ ಖರೀದಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಮೇಲೆ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ಈಗಿನ ಆರ್ಥಿಕ ಸಲಹೆಗಾರ ಹಾಗೂ ಹಿಂದಿನ ಸರ್ಕಾರದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ಆರ್ಥಿಕ ಸಲಹೆಗಾರರಾಗಿದ್ದ ಜಿ.ಪಿ.ರಘು ಅವರನ್ನು ಅಮಾನತು ಮಾಡಲಾಗಿದೆ. ಈ ಮೂಲಕ ಕೋವಿಡ್ ಸಂದರ್ಭದಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಯೊಬ್ಬರ ವಿರುದ್ಧ ಇದೇ ಮೊದಲ ಬಾರಿಗೆ ಸರ್ಕಾರ ಕ್ರಮ ಜರುಗಿಸಿದೆ.

18ಕ್ಕೆ ಜಾತಿಗಣತಿ ವರದಿ ಭವಿಷ್ಯ

ಒಂದನೇ ಪುಟದಿಂದ...

'ಅವರಿಂದ ವರದಿ ಸ್ವೀಕರಿಸಲಾಗಿದೆ. ಇಲ್ಲಿಯವರೆಗೂ ನಾನು ಈ ವರದಿಯನ್ನು ಪರಿಶೀಲಿಸಿಲ್ಲ. ಸ್ವೀಕರಿಸಿದ ವರದಿಗೆ ಒಪ್ಪಿಗೆ ನೀಡುವಂತೆ ಎಲ್ಲರೂ ಒತ್ತಾಯಿಸುತ್ತಿದ್ದಾರೆ. ಹಿಂದುಳಿದ ವರ್ಗಗಳ ಶಾಸಕರು ಕೂಡಾ ಸಭೆ ನಡೆಸಿ ವರದಿನ್ನು ಜಾರಿಗೊಳಿಸುವಂತೆ ಮನವಿ ಮಾಡಿದ್ದಾರೆ' ಎಂದು ವಿವರಿಸಿದರು.

ಸಚಿವರಾದ ಬೈರತಿ ಸುರೇಶ್, ಎನ್.ಎಸ್. ಬೋಸರಾಜು, ಕಾಂಗ್ರೆಸ್ ಶಾಸಕರಾದ ಅಜಯ್ ಸಿಂಗ್, ಬೇಳೂರು ಗೋಪಾಲಕೃಷ್ಣ, ರಾಘವೇಂದ್ರ ಹಿಟ್ನಾಳ್, ವಿಧಾನಪರಿಷತ್ ಕಾಂಗ್ರೆಸ್ ಸದಸ್ಯರಾದ ಬಿ.ಕೆ. ಹರಿಪ್ರಸಾದ್, ಎಂ.ಆರ್. ಸೀತಾರಾಮ್, ನಾಗರಾಜ್ ಯಾದವ್, ವಿಧಾನಪರಿಷತ್ ಬಿಜೆಪಿ ಸದಸ್ಯ ಎನ್. ರವಿಕುಮಾರ್, ಹಿಂದುಳಿದ ವರ್ಗಗಳ ಮಾಜಿ ಅಧ್ಯಕ್ಷರಾದ ಸಿ.ಎಸ್. ದ್ವಾರಕನಾಥ್, ಎಚ್. ಕಾಂತರಾಜು, ಕೆ. ಜಯಪ್ರಕಾಶ್ ಹೆಗ್ಡೆ, ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ವಿಧಾನಪರಿಷತ್‌ನ ಮಾಜಿ ಸದಸ್ಯ ಎಚ್.ಎಂ. ರೇವಣ್ಣ ಮತ್ತು ಹಿಂದುಳಿದ ವರ್ಗಗಳ ಮುಖಂಡರು ಸಭೆಯಲ್ಲಿದ್ದರು. ಸಾಮಾಜಿಕ ಮತ್ತು ಶೈಕ್ಷಣಿಕ ವರದಿಯ ಕುರಿತು ಎಲ್ಲರಿಂದಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿಪ್ರಾಯ ಪಡೆದರು.

ಸಿ.ಎಂ.ಗೆ ಸಲ್ಲಿಸಿದ ಮನವಿಯಲ್ಲಿ ಏನಿದೆ?

- 1931ರ ನಂತರ ಇಡೀ ದೇಶದಲ್ಲಿ ಜಾತಿವಾರು ಸಮೀಕ್ಷೆ ನಡೆದಿಲ್ಲ. ಈ ಕಾರಣಕ್ಕೆ ಶೋಷಿತ, ತಳ ಸಮುದಾಯ, ಕಾಯಕ ವರ್ಗಗಳೂ ಸೇರಿದಂತೆ ಎಲ್ಲ ಬಡ ಸಮುದಾಯಗಳಿಗೆ ಮೀಸಲಾತಿ, ಸರ್ಕಾರಿ ಸವಲತ್ತು, ಅನುದಾನ ಸಮರ್ಪಕವಾಗಿ ದೊರಕುತ್ತಿಲ್ಲ. ರಾಜ್ಯ– ಕೇಂದ್ರ ಸರ್ಕಾರಗಳ ಯೋಜನೆಗಳೂ ಸರಿಯಾಗಿ ತಲುಪುತ್ತಿಲ್ಲ
- ಸತ್ಯ ಮನಗಂಡು ತಮ್ಮ ಹಿಂದಿನ ಸರ್ಕಾರದ ಅವಧಿಯಲ್ಲಿ ನಡೆಸಿರುವ ಜಾತಿವಾರು ಸಮೀಕ್ಷೆಯನ್ನು ತ್ವರಿತವಾಗಿ ಸಂಪುಟ ಸಭೆಯ ಮುಂದಿಟ್ಟು ಚರ್ಚಿಸಿ, ಒಪ್ಪಿಗೆ ಸೂಚಿಸಬೇಕು
- ಗ್ರಾಮೀಣ, ನಗರ, ಪಟ್ಟಣ ಸೇರಿದಂತೆ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತಿತರ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ನಿಗದಿಪಡಿಸುವ ಕುರಿತು ಗೊಂದಲಗಳಿದ್ದು, ಆದಷ್ಟು ಬೇಗ ಪರಿಹರಿಸಿ ಸ್ಪಷ್ಟ ನಿಲುವು ತೆಗೆದುಕೊಳ್ಳಬೇಕು
- ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಅಧ್ಯಕ್ಷ, ಸದಸ್ಯರನ್ನು ತಕ್ಷಣ ನೇಮಿಸಬೇಕು
- ಅನೇಕ ಸಣ್ಣ-ಪುಟ್ಟ ಜಾತಿಗಳ ನಿಗಮಗಳಿಗೆ ಅಧ್ಯಕ್ಷ-ಸದಸ್ಯರ ನೇಮಕಾತಿ ಆಗಿಲ್ಲ. ಈ ಲೋಪ ಸರಿಪಡಿಸಿ, ಈ ನಿಗಮಗಳ ಬಗ್ಗೆ ಸ್ಪಷ್ಟ ನಿಲುವು ಪ್ರಕಟಿಸಬೇಕು

ಪಕ್ಷಾತೀತವಾಗಿ ಸಭೆಯಲ್ಲಿ ಚರ್ಚೆಯಾಗಿದೆ. ಸರ್ಕಾರಕ್ಕೆ ಸಂಕಷ್ಟ ಬಂದರೂ ಪರವಾಗಿಲ್ಲ, ವರದಿ ಅಂಗೀಕರಿಸಿ ಜಾರಿ ಮಾಡಬೇಕೆಂದು ಆಗ್ರಹಿಸಿದ್ದೇವೆ
ಬಿ.ಕೆ. ಹರಿಪ್ರಸಾದ್
ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ

ಸಂಪುಟ ಸಭೆಯಲ್ಲಿ ವರದಿ ಮಂಡನೆಗೆ ನಮ್ಮ ಅಭ್ಯಂತರ ಇಲ್ಲ. ವರದಿಯ ಅಂಶ ಬಹಿರಂಗವಾದ ನಂತರ ಪಕ್ಷ ಮುಂದಿನ ನಿರ್ಧಾರ ತೆಗೆದುಕೊಳ್ಳಲಿದೆ
ಎನ್. ರವಿಕುಮಾರ್
ವಿಧಾನ ಪರಿಷತ್ ಬಿಜೆಪಿ ಸದಸ್ಯ

ಸತೀಶ ಜಾರಕಿಹೊಳಿ ವಿಜಯೇಂದ್ರ ಭೇಟಿ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಭೇಟಿ ಮಾಡಿ, ಶಿಕಾರಿಪುರ ತಾಲ್ಲೂಕು ರೈತರ ಸಮಸ್ಯೆಗಳ ಕುರಿತು ಚರ್ಚೆ ನಡೆಸಿದರು.

ಸಚಿವರ ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಶಿಕಾರಿಪುರ ತಾಲ್ಲೂಕಿನ ಟೋಲ್‌ನಿಂದಾಗಿ ರೈತರು ಮತ್ತು ಬಡವರಿಗೆ ಅನನುಕೂಲ ಆಗಿದೆ. ಮೂರು ಜಿಲ್ಲೆಗಳ ಜನರು ಈ ಹೆದ್ದಾರಿಯನ್ನೇ ಬಳಸುತ್ತಿದ್ದಾರೆ. ಒಂದೇ ಜಿಲ್ಲೆಯಲ್ಲಿ ಎರಡು ಟೋಲ್‌ಗಳಿವೆ. ಟೋಲ್ ವರ್ಗಾಯಿಸಿ ಬಡವರು, ರೈತರಿಗೆ ಅನುಕೂಲ ಮಾಡಿಕೊಡಲು ಮನವಿ ಮಾಡಿದ್ದೇನೆ' ಎಂದರು.

ಟೋಲ್ ವರ್ಗಾವಣೆ ಕುರಿತಂತೆ ಎರಡು–ಮೂರು ಬಾರಿ ಹೋರಾಟ ನಡೆದಿದೆ. ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಈ ವಿಚಾರದಲ್ಲಿ ಚರ್ಚಿಸಲು ಶೀಘ್ರವೇ ಅಧಿಕಾರಿಗಳ ಸಭೆ ಕರೆಯುವುದಾಗಿ ಭರವಸೆ ನೀಡಿದ್ದಾರೆ ಎಂದರು.

ಜಮ್ಮು–ಕಾಶ್ಮೀರ ವಿಧಾನಸಭೆ; ಲೆಫ್ಟಿನೆಂಟ್ ಗವರ್ನರ್ ನಡೆಗೆ ವಿರೋಧ ಪಕ್ಷಗಳ ಆಕ್ರೋಶ

ಐವರ ನಾಮನಿರ್ದೇಶನಕ್ಕೆ ತೀರ್ಮಾನ

ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರ ವಿಧಾನಸಭೆ ಚುನಾವಣೆಯ ಫಲಿತಾಂಶಕ್ಕೂ ಮೊದಲೇ ವಿಧಾನಸಭೆಗೆ ಐವರು ಸದಸ್ಯರನ್ನು ನಾಮನಿರ್ದೇಶನ ಮಾಡಲು ಲೆಫ್ಟಿನೆಂಟ್ ಗವರ್ನರ್ (ಎಲ್‌ಜಿ) ತೀರ್ಮಾನಿಸಿದ್ದು, ಈ ನಡೆಯು ರಾಜಕೀಯ ಚರ್ಚೆಗೆ ಗ್ರಾಸವಾಗಿದೆ.

ಲೆಫ್ಟಿನೆಂಟ್ ಗವರ್ನರ್‌ರಿಂದ ನಾಮನಿರ್ದೇಶನ ಆಗಲಿರುವ ಐವರು ಸದಸ್ಯರು ಹೊಸ ಸರ್ಕಾರದ ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸುವ ಸಂಭವವಿದೆ. ಇದೇ ಕಾರಣದಿಂದ ಎಲ್‌ಜಿ ನಡೆಯನ್ನು ಕಾಂಗ್ರೆಸ್, ನ್ಯಾಷನಲ್ ಕಾನ್ಫರೆನ್ಸ್ ಮತ್ತು ಪಿಡಿಪಿ ತೀವ್ರವಾಗಿ ವಿರೋಧಿಸಿವೆ.

ಮೂಲಗಳ ಪ್ರಕಾರ, ಕೇಂದ್ರ ಗೃಹ ಸಚಿವಾಲಯದ ಸಲಹೆಯನ್ನು ಆಧರಿಸಿ ಐವರು ಸದಸ್ಯರನ್ನು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ನಾಮನಿರ್ದೇಶನ ಮಾಡುವರು. ಈ ಸದಸ್ಯರು ನೂತನ ಸರ್ಕಾರ ರಚನೆಯಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸಲಿದ್ದಾರೆ.

ಪ್ರಸ್ತುತ, ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯ ಸದಸ್ಯ ಬಲ 90 ಆಗಿದೆ. ಐವರು ನಾಮ ನಿರ್ದೇಶನ ಗೊಂಡಲ್ಲಿ ಸದಸ್ಯ ಬಲ 95ಕ್ಕೆ ಏರಲಿದೆ. ಸರ್ಕಾರ ರಚನೆಗೆ 48 ಸದಸ್ಯರ ಬೆಂಬಲ ಅಗತ್ಯವಾಗಲಿದೆ.

ಸರ್ಕಾರ ರಚನೆಗೆ ಮೊದಲೇ ವಿಧಾನಸಭೆಗೆ ಸದಸ್ಯರನ್ನು ನಾಮನಿರ್ದೇಶನ ಮಾಡುವ ನಡೆಯ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರುವ ಸುಳಿವನ್ನು ಪಕ್ಷಗಳು ನೀಡಿವೆ. ಸಂವಿಧಾನದ ವಿಧಿ 370ರ ಅನ್ವಯ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನವನ್ನು ಹಿಂಪಡೆದ ಬಳಿಕ ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ರೂಪಿಸಲಾಗಿದೆ.



ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆಯ ಮತ ಎಣಿಕೆಯ ಮುನ್ನಾ ದಿನ ಸೋಮವಾರ ಜಮ್ಮುವಿನಲ್ಲಿ ಎಣಿಕೆ ಕೇಂದ್ರದ ಕಾವಲಿಗೆ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು — ಪಿಟಿಐ ಚಿತ್ರ

ಜಮ್ಮು ಮತ್ತು ಕಾಶ್ಮೀರ ಪುನರ್‌ರಚನಾ ಕಾಯ್ದೆ 2019ರ, ಸೆಕ್ಷನ್ 14 ಉಪ ನಿಯಮ (30)ರ ಅನ್ವಯ, ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಲೆಫ್ಟಿನೆಂಟ್ ಗವರ್ನರ್ ಅವರು ಇಬ್ಬರನ್ನು ನಾಮನಿರ್ದೇಶನ ಮಾಡಬಹುದು. ಮಹಿಳೆಗೆ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ ಎಂದು ತಾವು ಭಾವಿಸಿದಲ್ಲಿ ಈ ಮೂಲಕ ಆ ಕೊರತೆ ತುಂಬಬಹುದು' ಎಂದಿದೆ. ಈ ಕಾಯ್ದೆಗೆ 2023ರಲ್ಲಿ ತಿದ್ದುಪಡಿ ತರಲಾಗಿದೆ.

ತಿದ್ದುಪಡಿ ಬಳಿಕ, 15ಎ ಉಪ ನಿಯಮದ ಅನುಸಾರ, ಲೆಫ್ಟಿನೆಂಟ್ ಗವರ್ನರ್ ಅವರು ಇಬ್ಬರಿಗಿಂತಲೂ ಹೆಚ್ಚು ಸದಸ್ಯರನ್ನು ನಾಮನಿರ್ದೇಶನ ಮಾಡಲಾಗದು. ಇಬ್ಬರಲ್ಲಿ ಒಬ್ಬರು ಕಾಶ್ಮೀರಿ ವಲಸಿಗ ಸಮುದಾಯಕ್ಕೆ ಸೇರಿದ ಮಹಿಳೆ ಆಗಿರಬೇಕು. ಉಪ ನಿಯಮ 15ಬಿ ಅನುಸಾರ ಪಾಕ್ ಆಕ್ರಮಿತ ಕಾಶ್ಮೀರ ಭಾಗದಿಂದ ವಲಸೆ ಬಂದಿರುವ ವ್ಯಕ್ತಿಯೊಬ್ಬರನ್ನು ವಿಧಾನಸಭೆಗೆ ನಾಮನಿರ್ದೇಶನ ಮಾಡಬಹುದು.

ರಾಜ್ಯಪಾಲರು ಈಗ ನಾಮನಿರ್ದೇಶನ ಮಾಡಲು ತೀರ್ಮಾನಿಸಿದ್ದಾರೆ ಎನ್ನಲಾಗಿರುವ ಐವರು ಸದಸ್ಯರಿಗೂ ಚುನಾಯಿತ ಸದಸ್ಯರಿಗೆ ಇರುವಂತೆಯೇ ಮತದಾನದ ಹಕ್ಕು ಇರುತ್ತದೆ ಎಂದು ಮೂಲಗಳು ತಿಳಿಸಿವೆ. ಇದೇ ಕಾರಣಕ್ಕೆ ಕಾಂಗ್ರೆಸ್ ಸೇರಿದಂತೆ ಪ್ರಮುಖ ಪ್ರತಿಪಕ್ಷಗಳು ಎಲ್‌ಜಿ ನಡೆಗೆ ಆಕ್ಷೇಪ ವ್ಯಕ್ತಪಡಿಸಿವೆ. ಇದು, 'ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಆಶಯಗಳಿಗೆ ವಿರುದ್ಧವಾದುದು' ಎಂದು ಟೀಕಿಸಿವೆ.

'ಒಂದು ವೇಳೆ ಅವರು ನಾಮನಿರ್ದೇಶನ ಮಾಡಿದರೆ ನಾವು ಸುಪ್ರೀಂ ಕೋರ್ಟ್‌ಗೆ ಹೋಗುತ್ತೇವೆ.

> **ಲೆಫ್ಟಿನೆಂಟ್ ಗವರ್ನರ್ ಅವರು ಈ ನಡೆಯಿಂದ ಹಿಂದೆ ಸರಿಯಬೇಕು. ನಾಮನಿರ್ದೇಶನ ಮಾಡಿ, ಈ ಪ್ರಸ್ತಾವವನ್ನು ಎಲ್‌ಜಿಗೆ ಕಳುಹಿಸಬೇಕಾದದ್ದು ಸರ್ಕಾರ**
> **ಫಾರೂಕ್ ಅಬ್ದುಲ್ಲಾ** ಅಧ್ಯಕ್ಷ, ನ್ಯಾಷನಲ್ ಕಾನ್ಫರೆನ್ಸ್

> **ಐವರ ನಾಮನಿರ್ದೇಶನ ಮಾಡುವ ಲೆಫ್ಟಿನೆಂಟ್ ಗವರ್ನರ್ ಅವರ ನಡೆಯನ್ನು ಕಾಂಗ್ರೆಸ್ ವಿರೋಧಿಸಲಿದೆ. ಈ ಕ್ರಮವು ಜನಾದೇಶಕ್ಕೆ ವಿರುದ್ಧವಾಗಿದೆ**
> **ರವೀಂದರ್ ಶರ್ಮಾ,** ಜಮ್ಮು ಕಾಶ್ಮೀರ ಕಾಂಗ್ರೆಸ್ ಘಟಕದ ಉಪಾಧ್ಯಕ್ಷ, ವಕ್ತಾರ

> **ಎಲ್‌ಜಿ ನಾಮನಿರ್ದೇಶನ ಮಾಡುವ ಎಲ್ಲ ಐವರು ಬಿಜೆಪಿ ಸದಸ್ಯರು ಅಥವಾ ಆ ಪಕ್ಷದ ಜೊತೆಗೆ ಗುರುತಿಸಿಕೊಂಡವರೇ ಆಗಿರುತ್ತಾರೆ. ಇದೊಂದು ನಾಚಿಕೆಗೇಡಿನ ನಡೆ**
> **ಇಲ್ತಿಜಾ ಮುಫ್ತಿ** ಪಿಡಿಪಿ ನಾಯಕಿ

> **ಅತಂತ್ರ ವಿಧಾನಸಭೆ ರಚನೆಯಾಗಬಹುದೆಂದು ಬಹುಮತ ಗಳಿಸಲು ಬಿಜೆಪಿಯು ಹತಾಶ ಯತ್ನ ನಡೆಸಿದೆ. ಕಾಂಗ್ರೆಸ್ ಮೈತ್ರಿಗೆ ಅಲ್ಲಿ ಜನಾದೇಶ ಸಿಗಲಿದೆ**
> **ಜೈರಾಮ್ ರಮೇಶ್** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಸೂತ್ರಧಾರ ಇರುವುದಾದರೆ ಸರ್ಕಾರ ರಚಿಸುವುದಕ್ಕೆ ಏನು ಅರ್ಥವಿದೆ? ಇದರ ವಿರುದ್ಧ ಹೋರಾಟ ನಡೆಸಬೇಕಿದೆ' ಎಂದು ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಅವರು ಕಟುವಾಗಿ ಪ್ರತಿಕ್ರಿಯಿಸಿದ್ದಾರೆ.

ನಾಮನಿರ್ದೇಶನ ಮಾಡುವ ನಿರ್ಧಾರವು ಮತಎಣಿಕೆಗೆ ಮೊದಲೇ ಜನಾದೇಶವನ್ನು ತಿರುಚುವ ಕೇಂದ್ರ ಸರ್ಕಾರದ ಯತ್ನವಾಗಿದೆ ಎಂದು ಪಿಡಿಪಿ ನಾಯಕಿ ಇಲ್ತಿಜಾ ಮುಫ್ತಿ ಹೇಳಿದ್ದಾರೆ

ಜಮ್ಮು ಮತ್ತು ಕಾಶ್ಮೀರ ವಿಧಾನ ಸಭೆಯು ಸದ್ಯ, ಪುದುಚೇರಿ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆ ಮಾದರಿಯಲ್ಲೇ ಕಾರ್ಯನಿರ್ವಹಿಸಲಿದೆ. ಪುದುಚೇರಿಯಲ್ಲಿ ಮೂವರು ನಾಮನಿರ್ದೇಶನ ಸದಸ್ಯರಿದ್ದು, ಚುನಾಯಿತ ಸದಸ್ಯರಿಗೆ ಸಮಾನವಾಗಿ ಮತದಾನದ ಹಕ್ಕು ಹೊಂದಿದ್ದಾರೆ.

ಪುದುಚೇರಿ ಎಲ್‌ಜಿ ಆಗಿದ್ದ ಕಿರಣ್ ಬೇಡಿ, ಕಾಂಗ್ರೆಸ್ ನೇತೃತ್ವದ ಸರ್ಕಾರದ ಶಿಫಾರಸಿಲ್ಲದೇ ಮೂವರು ಸದಸ್ಯರ ನಾಮನಿರ್ದೇಶನಕ್ಕೆ ತೀರ್ಮಾನಿಸಿದ್ದರು. ಇದನ್ನು ಮೊದಲು ಮದ್ರಾಸ್ ಹೈಕೋರ್ಟ್, ನಂತರ ಸುಪ್ರೀಂ ಕೋರ್ಟ್‌ನಲ್ಲಿ 2017–18ರಲ್ಲಿ ಪ್ರಶ್ನಿಸಲಾಗಿತ್ತು.

ಸರ್ಕಾರದ ಜೊತೆ ಚರ್ಚಿಸದೇ ಎಲ್‌ಜಿ ಸದಸ್ಯರನ್ನು ನಾಮನಿರ್ದೇಶನ ಮಾಡಲಾಗದು ಎಂಬುದು ಪುದುಚೇರಿ ಸರ್ಕಾರದ ವಾದವಾಗಿತ್ತು. ಆದರೆ ಸುಪ್ರೀಂ ಕೋರ್ಟ್, 'ಎಲ್‌ಜಿ ಅವರು ನಾಮನಿರ್ದೇಶನ ಮಾಡುವುದು ಕಾನೂನುಬಾಹಿರವಲ್ಲ' ಎಂದು ಅಭಿಪ್ರಾಯಪಟ್ಟಿತ್ತು.

ಇಂದು ಮತ ಎಣಿಕೆ

ಒಂದನೇ ಪುಟದಿಂದ...

ಮೈತ್ರಿಕೂಟಕ್ಕೆ ಸೇರ್ಪಡೆಯಾಗುವಂತೆ ಪಿಡಿಪಿಯ ಮೆಹಬೂಬಾ ಮುಫ್ತಿ ಅವರಿಗೆ ನ್ಯಾಷನಲ್ ಕಾನ್ಫರೆನ್ಸ್‌ನ ಫಾರೂಕ್ ಅಬ್ದುಲ್ಲಾ ಮತ್ತು ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ತಾರಿಕ್ ಅಹ್ಮದ್ ಕರ್ರಾ ಆಹ್ವಾನ ನೀಡಿದ್ದಾರೆ.

ಹರಿಯಾಣದಲ್ಲಿ ಫಲಿತಾಂಶಕ್ಕೆ ಮುನ್ನವೇ ಕಾಂಗ್ರೆಸ್ ಪಾಳಯದಲ್ಲಿ ಚಟುವಟಿಕೆಗಳು ಗರಿಗೆದರಿವೆ. ಮುಖ್ಯಮಂತ್ರಿ ಸ್ಥಾನಕ್ಕಾಗಿ ನಾಯಕರು ಲಾಬಿ ಆರಂಭಿಸಿದ್ದಾರೆ. 'ನಾನು ದಣಿದಿಲ್ಲ ಹಾಗೂ ನಿವೃತ್ತಿಯಾಗಿಲ್ಲ' ಎಂದು ಮಾಜಿ ಸಿ.ಎಂ ಭೂಪಿಂದರ್ ಸಿಂಗ್ ಹೂಡಾ ತಿಳಿಸಿದರು. ಈ ಮೂಲಕ ಮುಖ್ಯಮಂತ್ರಿಯಾಗಲು ಪ್ರಬಲ ಉಮೇದುವಾರ ಎಂಬ ಸಂದೇಶ ರವಾನಿಸಿದ್ದಾರೆ.

ಕ್ಷಯರೋಗಿಗಳಿಗೆ ಆರ್ಥಿಕ ನೆರವು ಹೆಚ್ಚಳ

ನವದೆಹಲಿ (ಪಿಟಿಐ): ಕ್ಷಯರೋಗಿಗಳಿಗೆ ಚಿಕಿತ್ಸೆಯ ಅವಧಿಯಲ್ಲಿ 'ನಿ–ಕ್ಷಯ್ ಪೋಷಣ್' ಯೋಜನೆಯಡಿ ನೀಡುವ ಮಾಸಿಕ ಹಣಕಾಸು ನೆರವನ್ನು ₹500 ರಿಂದ ₹1000ಕ್ಕೆ ಏರಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ತಿಳಿಸಿದರು.

'ಯೋಜನೆಗಾಗಿ ಹೆಚ್ಚುವರಿಯಾಗಿ ₹1,040 ಕೋಟಿ ಹಂಚಿಕೆಯಾಗಿದೆ. ಈ ಯೋಜನೆಯಡಿ ಎಲ್ಲ ಕ್ಷಯ ರೋಗಿಗಳಿಗೆ ಪೌಷ್ಟಿಕ ಆಹಾರ ನೆರವು ನೀಡಲಾಗುವುದು. ಕ್ಷಯ ಮುಕ್ತ ರಾಷ್ಟ್ರ ನಿರ್ಮಾಣಕ್ಕೆ ಸರ್ಕಾರ ಬದ್ಧವಾಗಿದೆ' ಎಂದು ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಸಂಸದ ಸಂಜೀವ್ ಅರೋರಾ ಕಚೇರಿ ಮೇಲೆ ಇ.ಡಿ ದಾಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಭೂವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಎಪಿ ರಾಜ್ಯಸಭಾ ಸಂಸದ ಸಂಜೀವ್ ಅರೋರಾ ಅವರಿಗೆ ಸೇರಿದ ಜಲಂಧರ್, ದೆಹಲಿಯ ವಿವಿಧ ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯವು ಸೋಮವಾರ ದಾಳಿ ನಡೆಸಿದೆ.



ಸಂಜೀವ್ ಅರೋರಾ

ಲೂಧಿಯಾನ ಹಾಗೂ ಗುರುಗ್ರಾಮದಲ್ಲಿರುವ ಸಂಸದರ ನಿವಾಸ ಸೇರಿದಂತೆ 16ರಿಂದ 17 ಸ್ಥಳ ಸೇರಿದಂತೆ, ರಿಯಲ್ ಎಸ್ಟೇಟ್ ಉದ್ಯಮಿ ಹೇಮಂತ್ ಸೂದ್, ಜಲಂಧರ್‌ನ ಚಂದ್ರಶೇಖರ್ ಅಗರ್‌ವಾಲ್ ಅವರಿಗೆ ಸೇರಿದ ಸ್ಥಳಗಳಲ್ಲಿಯೂ ಇ.ಡಿ ಅಧಿಕಾರಿಗಳು ಶೋಧ ಕಾರ್ಯ ನಡೆಸಿದರು.

'ನಾನು ಕಾನೂನು ಗೌರವಿಸುವ ವ್ಯಕ್ತಿ. ಯಾವ ಕಾರಣಕ್ಕಾಗಿ ಶೋಧ ಕಾರ್ಯ ನಡೆಸುತ್ತಿದ್ದಾರೆ ಎಂಬುದು ಗೊತ್ತಿಲ್ಲ. ತನಿಖಾ ಸಂಸ್ಥೆಗಳ ಅಧಿಕಾರಿಗಳಿಗೆ ಸಂಪೂರ್ಣ ಸಹಕಾರ ನೀಡಲಿದ್ದು, ಅವರ ಎಲ್ಲ ಪ್ರಶ್ನೆಗಳಿಗೂ ಉತ್ತರಿಸುತ್ತೇನೆ' ಎಂದು ಸಾಮಾಜಿಕ ಜಾಲತಾಣ 'ಎಕ್ಸ್' ಮೂಲಕ ಸಂಸದ ಸಂಜೀವ್ ಅರೋರಾ ತಿಳಿಸಿದ್ದಾರೆ.

'ತಮ್ಮ ಕಂಪನಿಯ ಹೆಸರಿನಲ್ಲಿದ್ದ 'ಕೈಗಾರಿಕಾ ನಿವೇಶನ'ವನ್ನು ಅಕ್ರಮವಾಗಿ ಪರಭಾರೆ ಮಾಡಿದ ಆರೋಪದ ಮೇಲೆ ಸಂಸದರ ಮೇಲೆ ಇ.ಡಿ ಈ ದಾಳಿ ನಡೆಸಿತ್ತು' ಎಂದು ಮೂಲಗಳು ತಿಳಿಸಿವೆ.

'ಇ.ಡಿ ಕಾರ್ಯಾಚರಣೆಯು ರಾಜಕೀಯ ಪ್ರೇರಿತವಾಗಿದೆ. ಯಾವುದೇ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ, ಬದಲಾಗಿ ಪಕ್ಷವನ್ನು ಮುಗಿಸುವ ಮತ್ತೊಂದು ಪ್ರಯತ್ನ' ಎಂದು ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ತಿಳಿಸಿದ್ದಾರೆ.

'ಪಿಡಿಪಿ ಬೆಂಬಲಕ್ಕೆ ಅಭ್ಯಂತರ ಇಲ್ಲ'

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ಸರ್ಕಾರ ರಚನೆಗೆ ಮೆಹಬೂಬಾ ಮುಫ್ತಿ ಅವರ ಪಿಡಿಪಿ ಪಕ್ಷವು ಬೆಂಬಲ ನೀಡುವುದಾದರೆ ಅಭ್ಯಂತರ ಇಲ್ಲ ಎಂದು ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪಕ್ಷದ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಸೋಮವಾರ ಹೇಳಿದರು.



ಫಾರೂಕ್ ಅಬ್ದುಲ್ಲಾ

ಎನ್‌ಸಿ ಮತ್ತು ಕಾಂಗ್ರೆಸ್ ಮೈತ್ರಿಯು ಅಗತ್ಯಬಿದ್ದರೆ ಪಿಡಿಪಿ ಬೆಂಬಲ ಪಡೆಯಲಿದೆಯೇ ಎಂಬ ಪ್ರಶ್ನೆಗೆ, 'ಏಕೆ ಬೆಂಬಲ ಪಡೆಯಬಾರದು. ಚುನಾವಣೆಯಲ್ಲಿ ನಾವು ಪ್ರತಿಸ್ಪರ್ಧಿಗಳಾಗಿರಬಹುದು. ಆದರೆ ಸರ್ಕಾರ ರಚನೆಗೆ ಕೈಜೋಡಿಸುವುದಾದರೆ ನನಗೆ ಅಥವಾ ಕಾಂಗ್ರೆಸ್ ಪಕ್ಷಕ್ಕೆ ಯಾವುದೇ ಅಭ್ಯಂತರ ಇಲ್ಲ' ಎಂದು ಹೇಳಿದರು.

'ನಾನು ಮುಖ್ಯಮಂತ್ರಿ ಆಗುವುದಿಲ್ಲ. ಮುಖ್ಯಮಂತ್ರಿಯಾಗಿ ಮಾಡಬೇಕಿದ್ದ ಕೆಲಸಗಳನ್ನು ಮಾಡಿದ್ದೇನೆ. ಬಲಿಷ್ಠ ಸರ್ಕಾರ ರಚನೆ ಹೇಗೆ, ಜನರಿಗೆ ನೀಡಿರುವ ವಾಗ್ದಾನಗಳನ್ನು ಪೂರ್ಣಗೊಳಿಸುವುದು ಹೇಗೆ ಎಂಬುದು ನನ್ನ ಸದ್ಯದ ಚಿಂತನೆ' ಎಂದರು.

ವಿಧಾನಸಭೆಗೆ ಐವರು ಸದಸ್ಯರನ್ನು ನಾಮನಿರ್ದೇಶನ ಮಾಡುವ ಲೆಫ್ಟಿನೆಂಟ್ ಗವರ್ನರ್ ಅವರ ತೀರ್ಮಾನದ ಬಗ್ಗೆ ಸುಪ್ರೀಂ ಕೋರ್ಟ್ ಮೆಟ್ಟಿಲೇರುವುದಾಗಿ ತಿಳಿಸಿದರು.

ಏರ್ ಶೋ: ಅವ್ಯವಸ್ಥೆ ಆರೋಪ ಅಲ್ಲಗಳೆದ ಡಿಎಂಕೆ ಸರ್ಕಾರ

ಪ್ರಜಾವಾಣಿ ವಾರ್ತೆ

ಚೆನ್ನೈ: ಭಾರತೀಯ ವಾಯುಪಡೆಯ (ಐಎಎಫ್) ವೈಮಾನಿಕ ಪ್ರದರ್ಶನದ ವೇಳೆ ಅವ್ಯವಸ್ಥೆಯಿಂದಾಗಿ ಐದು ಮಂದಿ ನಾಗರಿಕರ ಸಾವು ಸಂಭವಿಸಿದೆ ಎನ್ನುವ ಆರೋಪಗಳನ್ನು ತಮಿಳುನಾಡು ಸರ್ಕಾರ ತಳ್ಳಿ ಹಾಕಿದೆ. ಅಲ್ಲದೆ, ಐಎಎಫ್ ಸಲ್ಲಿಸಿದ್ದ ಕೋರಿಕೆಗೂ ಮೀರಿ ವ್ಯವಸ್ಥೆಗಳನ್ನು ಕಲ್ಪಿಸಲಾಗಿತ್ತು ಎಂದೂ ಹೇಳಿದೆ.

ಮರೀನಾ ಬೀಚ್‌ನಲ್ಲಿ ವೈಮಾನಿಕ ಪ್ರದರ್ಶನ ವೀಕ್ಷಿಸಲು ಸೇರಿದ್ದ ಸುಮಾರು 15 ಲಕ್ಷ ವೀಕ್ಷಕರಿಗೆ ಸರಿಯಾದ ಸೌಲಭ್ಯ ಕಲ್ಪಿಸಿರಲಿಲ್ಲ. ಕುಡಿಯುವ ನೀರು ಮತ್ತು ಸೂಕ್ತ ಸಾರಿಗೆ ವ್ಯವಸ್ಥೆ ಇರಲಿಲ್ಲ ಎನ್ನುವ ಆರೋಪಗಳನ್ನು ರಾಜ್ಯ ಸರ್ಕಾರ ತಳ್ಳಿಹಾಕಿದ್ದು, ಬಿಸಿಲ ಝಳದಿಂದ ಉಂಟಾದ ಆರೋಗ್ಯ ಸಮಸ್ಯೆಯಿಂದ ಈ ಸಾವುಗಳು ಸಂಭವಿಸಿವೆ ಎಂದು ಹೇಳಿದೆ.

ಎಐಎಡಿಎಂಕೆ ಮತ್ತು ಬಿಜೆಪಿ ಯಂತಹ ವಿರೋಧ ಪಕ್ಷಗಳಿಂದ ಮಾತ್ರವಲ್ಲದೆ, ತನ್ನ ಮಿತ್ರ ಪಕ್ಷಗಳಾದ ವಿದುತಲೈ ಚಿರುತೈಗಲ್ ಕಚ್ಚಿ (ವಿಸಿಕೆ) ಮತ್ತು ಕಾಂಗ್ರೆಸ್‌ನಿಂದಲೂ ಡಿಎಂಕೆ ಸರ್ಕಾರ ವಾಗ್ದಾಳಿಗೆ ಒಳಗಾಗಿದೆ. ವೈಮಾನಿಕ ಪ್ರದರ್ಶನ ವೀಕ್ಷಿಸಲು ಬಂದವರನ್ನು ನಿಭಾಯಿಸಲು ವ್ಯವಸ್ಥೆ ಇರಲಿಲ್ಲ ಮತ್ತು ಅವರಿಗೆ ಕಲ್ಪಿಸಿದ್ದ ವ್ಯವಸ್ಥೆ ಅತ್ಯಂತ ಕಳಪೆಯಾಗಿತ್ತು ಎಂದು ರಾಜಕೀಯ ನಾಯಕರು ಪಕ್ಷಾತೀತವಾಗಿ ದೂಷಿಸಿದರು. ಇದರ ಬೆನ್ನಲ್ಲೇ, ರಾಜ್ಯಸರ್ಕಾರದ ಗೃಹ ಕಾರ್ಯದರ್ಶಿ ಧೀರಜ್ ಕುಮಾರ್ ಅವರು ಘಟನೆಯ ಕುರಿತು ಸಮಗ್ರ ವರದಿ ನೀಡುವಂತೆ ಡಿಜಿಪಿ ಶಂಕರ್ ಜಿವಾಲ್ ಅವರಿಗೆ ಸೂಚಿಸಿದ್ದಾರೆ.

ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಸಂತ್ರಸ್ತರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ಘೋಷಿಸಿದ್ದಾರೆ. ಆಯೋಜಕರ ನಿರೀಕ್ಷೆಗೂ ಮೀರಿ ವೀಕ್ಷಕರು ವೈಮಾನಿಕ ಪ್ರದರ್ಶನ ನೋಡಲು ಸೇರಿದ್ದರಿಂದಾಗಿ, ಪ್ರದರ್ಶನದ ನಂತರ ಸಾರ್ವಜನಿಕ ಸಾರಿಗೆ, ಸ್ವಂತ ವಾಹನಗಳನ್ನು ತಲುಪಲು ಜನರು ಸಾಕಷ್ಟು ಪರದಾಡಿದರು ಎನ್ನುವುದನ್ನು ಮುಖ್ಯಮಂತ್ರಿ ಒಪ್ಪಿಕೊಂಡಿದ್ದಾರೆ.

'ಸಾವು ರಾಜಕೀಯಗೊಳಿಸಬೇಡಿ': 'ಭಾನುವಾರ ಪ್ರಾಣ ಕಳೆದುಕೊಂಡ ಎಲ್ಲ ಐದು ಮಂದಿಯನ್ನು ಸರ್ಕಾರಿ ಆಸ್ಪತ್ರೆಗೆ ತರುವಾಗಲೇ ಅವರು ಮೃತಪಟ್ಟಿದ್ದರು. ಚಿಕಿತ್ಸೆ ಸಿಗದೆ ಅವರು ಸತ್ತಿಲ್ಲ. ನಾವು ಸಾವುನೋವು ಮರೆಮಾಚಲು ಪ್ರಯತ್ನಿಸುತ್ತಿಲ್ಲ. ಬಿಸಿಲ ಝಳ ಸಂಬಂಧಿತ ಸಮಸ್ಯೆಗಳಿಂದ ಐವರು ಸತ್ತಿದ್ದಾರೆ ಎನ್ನುವುದನ್ನು ನಾವು ಒಪ್ಪುತ್ತೇವೆ. ಇದು ದುರದೃಷ್ಟಕರ. ಈ ಸಾವುಗಳನ್ನು ಯಾರೂ ರಾಜಕೀಯಗೊಳಿಸಬಾರದು' ಎಂದು ಆರೋಗ್ಯ ಸಚಿವ ಮಾ ಸುಬ್ರಮಣಿಯನ್ ಪತ್ರಿಕಾಗೋಷ್ಠಿಯಲ್ಲಿ ಮನವಿ ಮಾಡಿದರು.

ಫ್ರಿಜ್‌ನಲ್ಲಿಟ್ಟಿದ್ದ ಆಹಾರ ಸೇವಿಸಿದ್ದ ತಂದೆ, ತಾಯಿಯೂ ಅಸ್ವಸ್ಥ: ಎಫ್‌ಎಸ್‌ಎಲ್‌ಗೆ ಆಹಾರ ರವಾನೆ

ವಿಷ ಆಹಾರ ಸೇವಿಸಿ ಮಗು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಪಿ.ಅಗ್ರಹಾರ ಠಾಣಾ ವ್ಯಾಪ್ತಿಯ ಭುವನೇಶ್ವರಿ ನಗರದ ಮನೆಯೊಂದರಲ್ಲಿ ಫ್ರಿಜ್‌ನಲ್ಲಿಟ್ಟಿದ್ದ ಆಹಾರ ಸೇವಿಸಿ ಅಸ್ವಸ್ಥಗೊಂಡಿದ್ದ ಮಗು ಸೋಮವಾರ ಮಧ್ಯಾಹ್ನ ಮೃತಪಟ್ಟಿದೆ. ಮಗುವಿನ ತಂದೆ– ತಾಯಿ ಸ್ಥಿತಿ ಗಂಭೀರವಾಗಿದೆ.

ಧೀರಜ್(5) ಮೃತಪಟ್ಟ ಮಗು.

ಮಗುವಿನ ತಂದೆ ಬಾಲರಾಜ್ (40) ಹಾಗೂ ತಾಯಿ ನಾಗಲಕ್ಷ್ಮಿ(36) ಅವರು ಕೆಂಪೇಗೌಡ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ(ಐಸಿಯು) ಚಿಕಿತ್ಸೆ ಪಡೆಯುತ್ತಿದ್ದಾರೆ. ಹೆಣ್ಣು ಮಗುವನ್ನು ಅಜ್ಜಿ ಮನೆಗೆ ಕಳುಹಿಸಿದ್ದರಿಂದ ಅಪಾಯದಿಂದ ಪಾರಾಗಿದೆ.

‘ಕೆಂಪೇಗೌಡ ಆಸ್ಪತ್ರೆಯ ವೈದ್ಯರು ಪೊಲೀಸರಿಗೆ ಪ್ರಾಥಮಿಕ ವರದಿ ನೀಡಿದ್ದು, ಸೇವಿಸಿದ್ದ ಆಹಾರವು ವಿಷವಾದ ಪರಿಣಾಮ ಮಗು ಮೃತಪಟ್ಟಿದೆ’ ಎಂದು ಮೂಲಗಳು ತಿಳಿಸಿವೆ.

‘ಬಾಲರಾಜು ಅವರು ಸ್ವಿಗ್ಗಿಯಲ್ಲಿ ಆಹಾರ ಪದಾರ್ಥಗಳ ಡೆಲಿವರಿ ಕೆಲಸ ಮಾಡುತ್ತಿದ್ದರು. ನಾಗಲಕ್ಷ್ಮಿ ಅವರು ಗೃಹಿಣಿ. ಪಿತೃಪಕ್ಷದ ನಿಮಿತ್ತ ಮನೆಯಲ್ಲಿ ವಿವಿಧ ಬಗೆಯ ಆಹಾರ ಪದಾರ್ಥ ತಯಾರಿಸಿದ್ದರು. ಉಳಿದ ಆಹಾರವನ್ನು ಮನೆಯಲ್ಲಿದ್ದ ಫ್ರಿಜ್‌ನಲ್ಲಿ ಇಟ್ಟಿದ್ದರು. ಹದಿನೈದು ದಿನಗಳ ಹಿಂದೆ ಕರಿದಿದ್ದ ಹಪ್ಪಳವನ್ನೂ ಫ್ರಿಜ್‌ನಲ್ಲಿ ಇಡಲಾಗಿತ್ತು. ಆ ಆಹಾರವನ್ನು ಮೂವರೂ ಭಾನುವಾರ ರಾತ್ರಿ ಸೇವಿಸಿದ್ದರು. ಸೋಮವಾರ ಮುಂಜಾನೆ ಮಗುವಿಗೆ ಹೊಟ್ಟೆ ನೋವು ಕಾಣಿಸಿಕೊಂಡಿತ್ತು. ಮನೆಯಲ್ಲಿದ್ದ ಔಷಧವನ್ನು ನೀಡಿ ಮಗುವನ್ನು ಮಲಗಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಬೆಳಿಗ್ಗೆ ಏಳು ಗಂಟೆಗೆ ನಿದ್ರೆಯಿಂದ ಎದ್ದಿದ್ದ ಮಗು ಸ್ವಲ್ಪ ಸಮಯ ಆಟವಾಡಿತ್ತು. ಬೆಳಿಗ್ಗೆ 9ರ ಸುಮಾರಿಗೆ ಪೋಷಕರೂ ಅಸ್ವಸ್ಥಗೊಂಡಿದ್ದರು. ಅಸ್ವಸ್ಥರಾದ ಮೂವರನ್ನೂ ಸಂಬಂಧಿಕರು ಹಾಗೂ ಅಕ್ಕಪಕ್ಕದ ಮನೆಯವರು ಆಸ್ಪತ್ರೆಗೆ ದಾಖಲಿಸಿದ್ದರು. ಆಸ್ಪತ್ರೆಗೆ ತೆರಳುವ ಮಾರ್ಗಮಧ್ಯದಲ್ಲಿ ಮಗು ಮೃತಪಟ್ಟಿತ್ತು’ ಎಂದು ಪೊಲೀಸರು ಹೇಳಿದರು.

ಪೊಟ್ಟಣಗಳ ಜಪ್ತಿ: ‘ಮಗುವಿನ ತಂದೆ ಫುಡ್ ಡೆಲಿವರಿ ಮಾಡುತ್ತಿದ್ದ ಕಾರಣಕ್ಕೆ ಹೋಟೆಲ್ ಅಥವಾ ಬೇಕರಿಯಿಂದ ಯಾವುದಾದರೂ ಆಹಾರ ಪದಾರ್ಥವನ್ನು ಮನೆಗೆ ತಂದಿದ್ದರೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಹೊರಗಿನಿಂದ ಆಹಾರ ಪದಾರ್ಥ ತಂದಿದ್ದ ಎಲ್ಲ ಪೊಟ್ಟಣಗಳನ್ನು ಜಪ್ತಿ ಮಾಡಲಾಗಿದೆ. ಫ್ರಿಜ್‌ನಲ್ಲಿದ್ದ ಆಹಾರವನ್ನೂ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ(ಎಫ್‌ಎಸ್‌ಎಲ್) ಕಳುಹಿಸಲಾಗಿದೆ’ ಎಂದು ಪೊಲೀಸರು ಹೇಳಿದರು.


‘ಘಟನೆ ಬಗ್ಗೆ ನಿಖರ ಮಾಹಿತಿ ಸಿಕ್ಕಿಲ್ಲ. ಪ್ರಾಥಮಿಕ ಮಾಹಿತಿಯಂತೆ ಆಹಾರ ವಿಷವಾಗಿದ್ದರಿಂದಲೇ ಅನಾಹುತ ನಡೆದಿದೆ ಎಂಬುದು ಗೊತ್ತಾಗಿದೆ. ಅದು ಮನೆಯ ಆಹಾರವೇ? ಅಥವಾ ಹೊರಗಿನಿಂದ ತರಿಸಿರುವ ಆಹಾರವೇ ಎಂಬುದನ್ನು ಪತ್ತೆಹಚ್ಚುವ ಕಾರ್ಯ ನಡೆಯುತ್ತಿದೆ’ ಎಂದು ಪೊಲೀಸರು ಮಾಹಿತಿ ನೀಡಿದರು.

ಕೇಕ್ ಸೇವನೆ ಬಳಿಕ ಅಸ್ವಸ್ಥ?: ಮತ್ತೊಂದೆಡೆ ಫುಡ್ ಡೆಲಿವರಿ ಕೆಲಸ ಮಾಡುವ ಬಾಲರಾಜ್, ಗ್ರಾಹಕರೊಬ್ಬರು ಆನ್‌ಲೈನ್ ಕೇಕ್ ಆರ್ಡರ್ ಮಾಡಿ, ಬಳಿಕ ರದ್ದುಗೊಳಿಸಿದ್ದರು ಎನ್ನಲಾಗಿದೆ. ಅದನ್ನು ಮನೆಗೆ ತಂದು ಫ್ರಿಜ್‌ನಲ್ಲಿ ಇರಿಸಿದ್ದರು. ಭಾನುವಾರ ರಾತ್ರಿ ಊಟ ಮಾಡುವ ಸಂದರ್ಭದಲ್ಲಿ ಪತ್ನಿ, ಪುತ್ರನ ಜತೆಗೆ ಕೇಕ್ ಸಹ ಸೇವಿಸಿದ್ದರು. ಬಳಿಕ ಮೂವರೂ ಅಸ್ವಸ್ಥರಾಗಿದ್ದಾರೆ ಎಂದೂ ಹೇಳಲಾಗುತ್ತಿದೆ. ಎಲ್ಲ ಆಯಾಮದಲ್ಲೂ ಪರಿಶೀಲನೆ ನಡೆಸಲಾಗುತ್ತಿದೆ. ಬಾಲರಾಜು ಅವರ ಹೇಳಿಕೆ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಸಂಬಂಧ ಕೆ.ಪಿ.ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೆಟ್ರೊ ಸಿಬ್ಬಂದಿ ಮೇಲೆ ಹಲ್ಲೆ: ಬಂಧನ

ಬೆಂಗಳೂರು: ಕಾಡುಗೋಡಿ ಟ್ರೀ–ಪಾರ್ಕ್ ಮೆಟ್ರೊ ನಿಲ್ದಾಣದ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದ ಮೂವರು ಆರೋಪಿಗಳನ್ನು ಕಾಡುಗೋಡಿ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ.


ಮೊಹ್ಮದ್ ಇದ್ರೀಸ್


ಶ್ರೀಶೈಲ

ಮೊಹ್ಮದ್ ಇದ್ರೀಸ್(30), ಶ್ರೀಶೈಲ(28), ಮಡಿವಾಳಪ್ಪ(27) ಬಂಧಿತರು. ಮತ್ತೊಬ್ಬ ಆರೋಪಿ ವೀರೇಶ್(30) ಎಂಬಾತ ತಲೆಮರೆಸಿಕೊಂಡಿದ್ದು ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.


ಮಡಿವಾಳಪ್ಪ

‘ಮೆಟ್ರೊ ನಿಲ್ದಾಣದ ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದೆ ಎಂದು ಆರೋಪಿಸಿ ಭದ್ರತಾ ಸಿಬ್ಬಂದಿಯ ಉಸ್ತುವಾರಿ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು, ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು. ಮೆಟ್ರೊ ನಿಲ್ದಾಣದಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳಲ್ಲಿ ಗಲಾಟೆಯ ದೃಶ್ಯ ಸೆರೆಯಾಗಿತ್ತು’ ಎಂದು ಪೊಲೀಸರು ತಿಳಿಸಿದರು.

ಮದ್ಯದ ಅಮಲಿನಲ್ಲಿ ನಾಲ್ವರು ಮೆಟ್ರೊ ನಿಲ್ದಾಣಕ್ಕೆ ಬಂದಿದ್ದರು. ಭದ್ರತಾ ಸಿಬ್ಬಂದಿ ತಪಾಸಣೆ ನಡೆಸಿ ಅವರನ್ನು ತಡೆದಿದ್ದರು. ಇದರಿಂದ ಕುಪಿತಗೊಂಡ ಆರೋಪಿಗಳು ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಕಳವು: ‘ಪಾರಿವಾಳ’ ಮಂಜ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಬಾಗಿಲಿಗೆ ಹಾಕಿದ್ದ ಬೀಗ ಒಡೆದು ಚಿನ್ನಾಭರಣ ಹಾಗೂ ನಗದು ಕಳವು ಮಾಡುತ್ತಿದ್ದ ಆರೋಪಿಯನ್ನು ಸಿಟಿ ಮಾರುಕಟ್ಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಮುಕುಂಡಪಲ್ಲಿಯ ನಿವಾಸಿ ಮಂಜುನಾಥ ಅಲಿಯಾಸ್ ‘ಪಾರಿವಾಳ’ ಮಂಜ ಬಂಧಿತ ಆರೋಪಿ.

‘ಆರೋಪಿಯಿಂದ ₹30 ಲಕ್ಷ ಮೌಲ್ಯದ 475 ಗ್ರಾಂ. ಚಿನ್ನಾಭರಣ, ಕೃತ್ಯಕ್ಕೆ ಬಳಸಿದ ಬೈಕ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನಗರ್ತಪೇಟೆಯ ಬಾಡಿಗೆ ಮನೆಯಲ್ಲಿ ಆರೋಪಿ ನೆಲಸಿದ್ದ. ರಾತ್ರಿ ವೇಳೆ ಚಿನ್ನಾಭರಣ ಕಳವು ಮಾಡಿ, ತಮಿಳುನಾಡಿಗೆ ತೆರಳುತ್ತಿದ್ದ. ಅಲ್ಲಿ ಕಡಿಮೆ ಬೆಲೆಗೆ ಚಿನ್ನಾಭರಣ ಮಾರಾಟ ಮಾಡುತ್ತಿದ್ದ. ಅದರಿಂದ ಬಂದ ಹಣದಲ್ಲಿ ಮೋಜು ಮಾಡುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಚಿಕ್ಕಪೇಟೆಯ ಆರ್‌ಟಿ ಸ್ಟ್ರೀಟ್‌ನ ಮಾಣಿಕ್ ಮೇವಾ ಅಂಗಡಿ ಬಳಿಯ ನಿವಾಸಿ ಉಪೇಶ್ ಭಂಡಾರಿ ಎಂಬುವವರ ಮನೆಯ ಬೀಗ ಒಡೆದು 105 ಗ್ರಾಂ. ಚಿನ್ನಾಭರಣ ಕಳ್ಳತನ ಮಾಡಿದ್ದ. ಮನೆ ಮಾಲೀಕರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು’ ಎಂದು ಪೊಲೀಸರು ತಿಳಿಸಿದರು.

ಸುದ್ದಿ 2 ನಿಮಿಷ

ಜಾತಿವಾರು ಜನಗಣತಿ ವರದಿ ಬಿಡುಗಡೆಗೆ ಆಗ್ರಹ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿವಾರು ಜನಗಣತಿ) ವರದಿಯನ್ನು ಬಿಡುಗಡೆ ಮಾಡಬೇಕು ಎಂದು ರಾಜ್ಯ ಸಮಗ್ರ ಬಲಿಜ ವೇದಿಕೆ ಅಧ್ಯಕ್ಷ ಮುನಿಕೃಷ್ಣ ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

‘ಜಾತಿಯ ಜನಸಂಖ್ಯೆಯ ನಿಖರ ಅಂಕಿಅಂಶಗಳಿಲ್ಲದ ಕಾರಣ ಬಲಿಜ ಸಮುದಾಯಕ್ಕೆ ಸರಿಯಾಗಿ ಸರ್ಕಾರದ ಸವಲತ್ತು ಸಿಗುತ್ತಿಲ್ಲ. ಜಾತಿವಾರು ಜನಗಣತಿ ವರದಿ ಬಿಡುಗಡೆ ಮಾಡಿದರೆ ಹಿಂದುಳಿದ ವರ್ಗಕ್ಕೆ ನ್ಯಾಯ ಸಿಗುತ್ತದೆ’ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಲ್ಲಿ ಹಿಂದುಳಿದ ವರ್ಗಗಳ ಸಮುದಾಯದವರು ಚುನಾವಣೆಗೆ ಸ್ಪರ್ಧಿಸುವ ಅವಕಾಶಗಳು ಹೆಚ್ಚಾಗುತ್ತವೆ. ಒಂದು ವರ್ಗದ ಹೇಳಿಕೆಗಳಿಗೆ ಗಮನ ಕೊಡದೆ ಹಿಂದುಳಿದ ವರ್ಗಗಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ವರದಿ ಬಿಡುಗಡೆ ಮಾಡಬೇಕು’ ಎಂದು ವೇದಿಕೆ ಕಾರ್ಯದರ್ಶಿ ಕೆ.ಶಿವಪ್ಪ, ಖಜಾಂಚಿ ನಾಗರಾಜ್ ಮನವಿ ಮಾಡಿದ್ದಾರೆ.

ದಸರಾ ವಿಶೇಷ ಬಸ್: ಚಾಲನೆ



ಬೆಂಗಳೂರು: ದಸರಾ ಪ್ರಯುಕ್ತ ನಾಡಿನ ಜನರಿಗೆ ತ್ವರಿತ ಸಾರಿಗೆ ಸೌಲಭ್ಯವನ್ನು ಕಲ್ಪಿಸಲು ಕೆಎಸ್‌ಆರ್‌ಟಿಸಿ ಬೆಂಗಳೂರು ಕೇಂದ್ರೀಯ ವಿಭಾಗದ ವತಿಯಿಂದ ಆರಂಭಿಸಿರುವ ದಸರಾ ವಿಶೇಷ ಬಸ್ ಕಾರ್ಯಾಚರಣೆಗೆ ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದಲ್ಲಿ ಸೋಮವಾರ ಚಾಲನೆ ನೀಡಲಾಯಿತು.

ಬಸ್‌ಗಳನ್ನು ವಿಶೇಷವಾಗಿ ಅಲಂಕರಿಸಿ ಪೂಜೆ ಸಲ್ಲಿಸಲಾಯಿತು. ಮುಂದಿನ 10 ದಿನಗಳವರೆಗೆ ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿ ದಸರಾ ಕ್ಯಾಂಪ್ ಇರಲಿದ್ದು, ಬೆಂಗಳೂರು ಕೇಂದ್ರೀಯ ವಿಭಾಗ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಮೈಸೂರು ವಿಭಾಗಗಳಿಂದ 700ಕ್ಕೂ ಹೆಚ್ಚು ಬಸ್‌ಗಳು ಬೆಂಗಳೂರು–ಮೈಸೂರು ನಡುವೆ ಸಂಚರಿಸಲಿವೆ. ಬೆಂಗಳೂರಿನಿಂದ ರಾಜ್ಯದ ವಿವಿಧ ಊರುಗಳಿಗೆ 2000 ವಿಶೇಷ ಬಸ್‌ಗಳ ಸಂಚಾರ ಇರಲಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಬಾರ್ ಕ್ಯಾಷಿಯರ್‌ಗೆ ಇರಿತ: ಇಬ್ಬರ ಸೆರೆ

ಬೆಂಗಳೂರು: ಬಾರ್‌ನಲ್ಲಿ ನಡೆದ ಗಲಾಟೆ ವೇಳೆ ಕ್ಯಾಷಿಯರ್‌ಗೆ ಬಾಟಲ್‌ನಿಂದ ಇರಿದಿದ್ದ ಪ್ರಕರಣದ ಸಂಬಂಧ ಇಬ್ಬರು ಆರೋಪಿಗಳನ್ನು ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚೇತನ್, ಕಾರ್ತಿಕ್ ಬಂಧಿತರು. ಮತ್ತೊಬ್ಬ ಆರೋಪಿ ನಾಪತ್ತೆ ಆಗಿದ್ದಾನೆ ಎಂದು ಪೊಲೀಸರು ತಿಳಿಸಿದರು.

ನರಸೀಪುರದ ಜಯಶ್ರೀ ಬಾರ್‌ಗೆ ಮೂವರು ಮದ್ಯ ಸೇವಿಸಲು ಬಂದಿದ್ದರು. ಮದ್ಯ ಸೇವನೆ ಬಳಿಕ ಬಾರ್ ಕ್ಯಾಷಿಯರ್ ಬಿಲ್ ನೀಡಿದ್ದರು. ಪಾವತಿಸಬೇಕಾದ ಹಣಕ್ಕಿಂತಲೂ ₹20 ಹೆಚ್ಚಿನ ಮೊತ್ತವನ್ನು ಬಿಲ್‌ನಲ್ಲಿ ನಮೂದಿಸಲಾಗಿತ್ತು ಎಂಬ ಕಾರಣಕ್ಕೆ ಆರೋಪಿಗಳು ಗಲಾಟೆ ಮಾಡಿದ್ದರು. ಬಾಟಲ್‌ನಿಂದ ಕ್ಯಾಷಿಯರ್ ರಂಜಿತ್ ಎಂಬುವವರ ಮೇಲೆ ಹಲ್ಲೆ ನಡೆಸಿದ್ದರು. ಬಳಿಕ ಅದೇ ಬಾಟಲಿಯಿಂದ ಇರಿದಿದ್ದರು. ಘಟನೆ ಸಂಬಂಧ ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ರಸ್ತೆಯಲ್ಲಿ ಕೊಳವೆಬಾವಿ: ಎಫ್‌ಐಆರ್ ದಾಖಲು

ರಾಜರಾಜೇಶ್ವರಿನಗರ ವಲಯದಲ್ಲಿ ಸಾರ್ವಜನಿಕ ಆಸ್ತಿಗೆ ಹಾನಿ: ಎಂಜಿನಿಯರ್‌ಗಳಿಂದ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿನಗರ ವಲಯದಲ್ಲಿ ಪ್ರತ್ಯೇಕ ಎರಡು ಪ್ರಕರಣಗಳಲ್ಲಿ ಸಾರ್ವಜನಿಕ ಆಸ್ತಿಗೆ ಹಾನಿ ಮಾಡಿರುವ ಕುರಿತು ಬಿಬಿಎಂಪಿ ಎಂಜಿನಿಯರ್‌ಗಳು ಪೊಲೀಸ್ ಠಾಣೆಗಳಿಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಿಸಲಾಗಿದೆ.

ಹೇರೋಹಳ್ಳಿ ವಾರ್ಡ್ ವೀರಭದ್ರೇಶ್ವರನಗರದ ಓಂ ಸಾಯಿ ಪಬ್ಲಿಕ್ ಮುಖ್ಯರಸ್ತೆಯಲ್ಲಿ ಅಕ್ಟೋಬರ್ 3 ಮತ್ತು 4ರಂದು ಅನಧಿಕೃತವಾಗಿ ಕೊಳವೆಬಾವಿಯನ್ನು ಕೊರೆಯಲಾಗಿದೆ. ಈ ಬಗ್ಗೆ ಸ್ಥಳೀಯರಿಂದ ದೂರು ಸ್ವೀಕರಿಸಿದ ಬಿಬಿಎಂಪಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಯಾವುದೇ ಅನುಮತಿ ಇಲ್ಲದ್ದರಿಂದ ಕೊಳವೆ ಬಾವಿ ಕೊರೆಸಿದವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.


ವೀರಭದ್ರೇಶ್ವರನಗರದ ಓಂ ಸಾಯಿ ಪಬ್ಲಿಕ್ ಮುಖ್ಯರಸ್ತೆಯಲ್ಲಿ ಕೊಳವೆಬಾವಿ ಕೊರೆದಿರುವುದು

ಸಾರ್ವಜನಿಕ ರಸ್ತೆಯನ್ನು ಅಗೆದು, ಕೊಳವೆ ಬಾವಿಯನ್ನೂ ಕೊರೆದು ರಸ್ತೆ ಹಾಳು ಮಾಡಲಾಗಿದೆ. ಜಯರಾಜ್, ಧನಂಜಯ, ಪ್ರಕಾಶ್ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪಾಲಿಕೆಯ ಹೇರೋಹಳ್ಳಿ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಮೇಶ್ ದೂರು ನೀಡಿದ್ದಾರೆ.

ಆಸ್ತಿಗೆ ಹಾನಿ: ರಾಜರಾಜೇಶ್ವರಿ ನಗರ ವಲಯದ ಕೆಂಚೇನಹಳ್ಳಿಯ ಐಡಿಯಲ್ ಹೋಮ್ಸ್ ಪೆಟ್ರೋಲ್ ಬ್ಯಾಂಕ್ ಬಳಿ ಮಂಜೇಗೌಡ ಎಂಬುವವರು ಕಟ್ಟಡ ನಿರ್ಮಿಸಲು ನಕ್ಷೆ ಮಂಜೂರಾತಿ ಪಡೆಯದೆ ಸುಮಾರು 8 ಅಡಿ ಆಳದ ತಳಪಾಯ ಅಗೆದಿದ್ದಾರೆ. ಇದರಿಂದ ಸುಮಾರು 70 ಅಡಿ ಉದ್ದದಷ್ಟು ಪಾದಚಾರಿ ರಸ್ತೆ ಹಾಗೂ ಒಳಚರಂಡಿಯು ಕುಸಿದು ಬಿದ್ದು, ಜನರು ಓಡಾಡಲು ತೊಂದರೆಯಾಗಿದೆ. ಈ ಸಂಬಂಧವೂ ಪಾಲಿಕೆ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ.

ಒಳಚರಂಡಿ ಮುಂಭಾಗದಲ್ಲಿರುವ ಬಿಎಂಟಿಸಿ ಬಸ್ ತಂಗುದಾಣ ಸಹ ಕುಸಿಯುವ ಸಂಭವವಿದೆ. ಇದರಿಂದ ಸುಮಾರು ₹20 ಲಕ್ಷ ನಷ್ಟ ಉಂಟಾಗಿರುತ್ತದೆ. ಕಟ್ಟಡ ಕಾಮಗಾರಿ ವೇಳೆಯಲ್ಲಿ ಯಾವುದೇ ಮುಂಜಾಗ್ರತಾ ಕ್ರಮ ಅನುಸರಿಸದೆ ಇರುವುದರಿಂದ ಅಕ್ಕ-ಪಕ್ಕದ ಮನೆಗಳಿಗೂ ಸಹ ಹಾನಿಯಾಗುವ ಸಾಧ್ಯತೆ ಇದೆ. ಆದ್ದರಿಂದ ಮಾಲೀಕ ಮಂಜೇಗೌಡರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪಾಲಿಕೆ ಎಂಜಿನಿಯರ್ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

ಅಪರಾಧ ಸುದ್ದಿ

ವಾಹನ ಕಳವು: ಆರೋಪಿ ಬಂಧನ

ಬೆಂಗಳೂರು: ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಸಿಟಿ ಮಾರುಕಟ್ಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಾದರಾಯನಪುರದ ಹಳೇಗುಡ್ಡದ ಹಳ್ಳಿಯ ನಿವಾಸಿ ಉಮ್ಮರ್ ಫಾರೂಕ್ (24) ಬಂಧಿತ.

ಆರೋಪಿಯಿಂದ ₹3 ಲಕ್ಷ ಮೌಲ್ಯದ ಆರು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಚಿಕ್ಕಪೇಟೆಯ ನಿವಾಸಿ ಕೆ.ವಿ. ಶಬರೀಷ್ ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

‘ಆರೋಪಿ ಬಾಡಿಗೆ ಮನೆಯಲ್ಲಿ ನೆಲಸಿದ್ದ. ರಾತ್ರಿ ವೇಳೆ ರಸ್ತೆ ಬದಿ ಹಾಗೂ ಮನೆಯ ಎದುರು ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.

ನೇಮಕಾತಿಯಲ್ಲಿ ಅನ್ಯಾಯ: ಪ್ರತಿಭಟನೆ

ಆಯ್ಕೆ ಪ್ರಕ್ರಿಯೆ ರದ್ದುಪಡಿಸಿ, ಸ್ಥಳೀಯರಿಗೆ ಉದ್ಯೋಗ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಚ್‌ಎಎಲ್ ಕಾರ್ಖಾನೆಯಲ್ಲಿನ ಕಾರ್ಮಿಕರ ನೇಮಕಾತಿಯಲ್ಲಿ ಸ್ಥಳೀಯರಿಗೆ ಅನ್ಯಾಯವಾಗಿದೆ ಎಂದು ಆರೋಪಿಸಿ ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘದ ವತಿಯಿಂದ ಸೋಮವಾರ ಕಾರ್ಖಾನೆ ಎದುರು ಪ್ರತಿಭಟನೆ ನಡೆಸಲಾಯಿತು.

ಎಚ್‌ಎಎಲ್‌ನ ಮುಖ್ಯದ್ವಾರದ ಕುವೆಂಪು ವೃತ್ತದಲ್ಲಿ ವಿವಿಧ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು, ನೌಕರರ ಸಂಘದ ಸದಸ್ಯರು ಹಾಗೂ ಕಾರ್ಮಿಕರು ಹಣೆ ಮತ್ತು ತೋಳಿಗೆ ಕಪ್ಪು ಪಟ್ಟಿ ಧರಿಸಿ ಶಾಂತಿಯುತ ಪ್ರತಿಭಟನೆ ನಡೆಸಿದರು.

‘ಎಚ್‌ಎಎಲ್ ಸಂಸ್ಥೆಯಲ್ಲಿ ವಿವಿಧ ವಿಭಾಗಗಳಿಗೆ ನಿಶ್ಚಿತ ಅವಧಿಯ ಹುದ್ದೆಗಳ ನೇಮಕಾತಿಯಲ್ಲಿ ಡಿಪ್ಲೊಮಾ, ಐಟಿಐ ತಾಂತ್ರಿಕ ಕ್ಷೇತ್ರದ ಪರಿಣತರ ಆಯ್ಕೆಯಲ್ಲಿ ಕನ್ನಡಿಗರಿಗೆ ಅನ್ಯಾಯ ಮಾಡಲಾಗಿದೆ. ‘ಸಿ’ ಮತ್ತು ‘ಡಿ’ ಗುಂಪಿನ 560 ಹುದ್ದೆಗಳ ಭರ್ತಿಯಲ್ಲಿ 350ಕ್ಕೂ ಹೆಚ್ಚು ಹುದ್ದೆಗಳನ್ನು ಅನ್ಯ ರಾಜ್ಯಗಳವರಿಗೆ ನೀಡಲಾಗಿದೆ. ಕೂಡಲೇ ಆಯ್ಕೆ ಪ್ರಕ್ರಿಯೆ ರದ್ದುಗೊಳಿಸಿ, ಸ್ಥಳೀಯರಿಗೆ ಉದ್ಯೋಗ ನೀಡಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.



ಸ್ಥಳೀಯರಿಗೆ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿ ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘದ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು

‘ಹಿಂದೆ ‘ಸಿ’ ಮತ್ತು ‘ಡಿ’ ದರ್ಜೆಯ ಕಾಯಂ ಹುದ್ದೆಗಳ ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆಯನ್ನು ನೀಡಲಾಗುತ್ತಿತ್ತು. ಬದಲಾದ ವ್ಯವಸ್ಥೆಯಲ್ಲಿ ಕಾಯಂ ನೇಮಕಾತಿ ಬದಲು ಸೀಮಿತ ಅವಧಿಗೆ (4 ವರ್ಷ) ನೇಮಕಾತಿ ಮಾಡಲಾಗುತ್ತಿದೆ. ನೇಮಕಾತಿಯ ಕುರಿತು ಅಂಕಿ ಅಂಶಗಳನ್ನು ನೀಡುವಂತೆ ಮಾನವ ಸಂಪನ್ಮೂಲ ವಿಭಾಗಕ್ಕೆ ಪತ್ರ ಬರೆದರೂ ಸ್ಪಂದನೆ ನೀಡಿಲ್ಲ’ ಎಂದು ಎಚ್‌ಎಎಲ್‌ನ ಕೇಂದ್ರೀಯ ಕನ್ನಡ ಸಂಘದ ಅಧ್ಯಕ್ಷ ಡಿ.ರಾಜೇಶ್ ಆಕ್ರೋಶ ವ್ಯಕ್ತಪಡಿಸಿದರು.

‘ಲಿಖಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆಯನ್ನು ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಲ್ಲಿ ನೀಡಿ ಪ್ರಾದೇಶಿಕ ಭಾಷೆಯನ್ನು ಕಡೆಗಣಿಸಿದ್ದಾರೆ. ಹಿಂದಿ ಭಾಷೆಯಲ್ಲಿ ಪ್ರಶ್ನೆ ಪತ್ರಿಕೆ ನೀಡುವುದರ ಮೂಲಕ ಉತ್ತರ ಭಾರತದವರಿಗೆ ಅನುಕೂಲ ಮಾಡಿಕೊಡಲಾಗಿದೆ. ಈ ಧೋರಣೆಯಿಂದಾಗಿ ಸ್ಥಳೀಯ ಗ್ರಾಮೀಣ ಅಭ್ಯರ್ಥಿಗಳಿಗೆ ವಂಚನೆ ಆಗುತ್ತಿದೆ’ ಎಂದು ದೂರಿದರು.

ಎಚ್.ಆರ್. ವಿಭಾಗದ ವ್ಯವಸ್ಥಾಪಕ ಪ್ರದೀಪ್ ಕುಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ನಗರದಲ್ಲಿ ಇಂದು

2024–25ನೇ ಸಾಲಿನ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡೆ, ಕನ್ನಡ ಸಂಘ, ಎನ್‌ಸಿಸಿ, ಎನ್‌ಎಸ್‌ಎಸ್, ರೋವರ್ಸ್ ಮತ್ತು ಇತರೆ ಚಟುವಟಿಕೆಗಳ ಉದ್ಘಾಟನೆ, ಅಭಿವಿನ್ಯಾಸ ಕಾರ್ಯಕ್ರಮ: ಉದ್ಘಾಟನೆ: ರಿಜ್ವಾನ್ ಅರ್ಷದ್, ಅತಿಥಿಗಳು: ರೂಪಾ ಡಿ. ಮೌದ್ಗಿಲ್, ಸತ್ಯನಾರಾಯಣ್, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 10.30

ಎನ್‌ಎಸ್‌ಎಸ್, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ: ಅತಿಥಿಗಳು: ಸಂಪತ್ ಕುಮಾರ್, ಎಂ.ಬಿ. ಮಂಜೇಗೌಡ, ಅಧ್ಯಕ್ಷತೆ: ಅಮೃತಿ ರಾಜೇಶ್, ಆಯೋಜನೆ: ವಿಶ್ವೇಶ್ವರಪುರ ಕಲೆ ಮತ್ತು ವಾಣಿಜ್ಯ ಪದವಿ ಸಂಜೆ ಕಾಲೇಜು, ಸ್ಥಳ: ವಿಜ್ಞಾನ ಕಾಲೇಜಿನ ಸಭಾಂಗಣ, ವಿ.ವಿ. ಪುರ, ಸಂಜೆ 6

24ನೇ ವರ್ಷದ ಪ್ರವಚನ ವಾಹಿನಿ: ‘ಭಜ ಗೋವಿಂದಂ’ ಉಪನ್ಯಾಸ: ಶ್ರೀನಿವಾಸ್ ಪ್ರಸಾದ್ ಸಿ.ವಿ., ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ನವರಾತ್ರಿ ವಿಶೇಷ

ಶರನ್ನವರಾತ್ರಿ ಮಹೋತ್ಸವ: ‘ದೇವಿ ಮಹಾತ್ಮೆ’ ಉಪನ್ಯಾಸ: ಮಂಜುನಾಥ ಭಟ್ಟ, ಆಯೋಜನೆ ಮತ್ತು ಸ್ಥಳ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ತ್ಯಾಗರಾಜನಗರ, ಬೆಳಿಗ್ಗೆ 10ರಿಂದ

ಭಜನೆ: ವಾಗ್ದೇವಿ ಭಜನಾ ಮಂಡಳಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ಸ್ವಾಮಿ ಮಠ, ಮಂತ್ರಿ ಮಾಲ್ ಮೆಟ್ರೊ ನಿಲ್ದಾಣ ಮುಂಭಾಗ, ಸಂಜೆ 5

ವಚನ ನವರಾತ್ರಿ: ‘ಕಾಯಕಶೀಲೆ ಸತ್ಯಕ್ಕನವರ ಪರಿಚಯ’: ಪುಷ್ಪಾ ಸೋಮಶೇಖರ್, ‘ಸತ್ಯಕ್ಕನವರ ವಚನಗಳ ನಿರ್ವಚನ’: ಯು.ಎಂ. ರವಿ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, 533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ಮಾತಾ ಅನ್ನಪೂರ್ಣೇಶ್ವರಿ ದೇವಿಗೆ ವೈಷ್ಣವಿ ಅಲಂಕಾರ: ಹಾಡುಗಾರಿಕೆ: ಪದ್ಮಶ್ರೀ ಮತ್ತು ತಂಡ, ದೀಪ್ತಿ ರಾವ್, ದೀಕ್ಷಾ ರಾವ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶ್ರೀಮಾತಾ ಅನ್ನಪೂರ್ಣೇಶ್ವರಿ ದೇವಿ, ವಸಂತಪುರ, ಸಂಜೆ 5.30ರಿಂದ

ಶಾರದಾ ಮಹಾಭಿಷೇಕ, ಶಾರದಾ ಶರನ್ನವರಾತ್ರಿ ಮಹೋತ್ಸವ, ನೃತ್ಯ ನವರಾತ್ರಿ: ಭರತನಾಟ್ಯ ಪ್ರದರ್ಶನ: ನಾಗಶ್ರೀ ಸಾತ್ವಿಕ್, ಸ್ಥಳ: ಶೃಂಗೇರಿ ಶಂಕರ ಮಠ, ಸಂಜೆ 6ರಿಂದ

ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಅಲಂಕಾರ: ಮಂಗಳಾ ದೇವಿ, ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣರಾಜಪುರ, ಸಂಜೆ 6ರಿಂದ

ದಸರಾ ಮಹೋತ್ಸವ: ಸಂಗೀತ ಕಾರ್ಯಕ್ರಮ: ಗಾಯನ: ಅರ್ಣ ಶ್ಯಾಂ ಪ್ರಸಾದ್, ಪಿಟೀಲು: ಡಿ.ಆರ್. ರಾಘವೇಂದ್ರ, ಮೃದಂಗ: ಜ್ಯೋತ್ಸ್ನಾ ಹೆಬ್ಬಾರ್, ಭರತನಾಟ್ಯ ಸಮೂಹ ನೃತ್ಯ ಪ್ರದರ್ಶನ: ಶ್ರೀಕಂಠೇಶ್ವರ ಕಲಾ ಕೇಂದ್ರದ ವಿದ್ಯಾರ್ಥಿಗಳಿಂದ, ನಿರ್ದೇಶನ: ಗೌರಿ ಸಾಗರ್, ಆಯೋಜನೆ ಮತ್ತು ಸ್ಥಳ: ಲಾಸ್ಯ ವರ್ಧನ ಟ್ರಸ್ಟ್, ಮಲ್ಲೇಶ್ವರ, ಸಂಜೆ 6

ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ: ಅಲಂಕಾರ: ನವನೀತ್ (ಬೆಣ್ಣೆ), ಭರತನಾಟ್ಯ ಪ್ರದರ್ಶನ: ನೃತ್ಯ ದಿಶಾ ಟ್ರಸ್ಟ್‌ನ ವಿದ್ಯಾರ್ಥಿಗಳಿಂದ, ನಿರ್ದೇಶನ: ದರ್ಶಿನಿ ಮಂಜುನಾಥ್, ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ಸಂಜೆ 6.30ರಿಂದ

ಆಯೋಜನೆ: ಸರ್ಕಲ್ ಮಾರಮ್ಮ ದೇವಸ್ಥಾನ: ಅಲಂಕಾರ: ಶಾಖಾಂಬರಿ ಅಲಂಕಾರ, ಮಧ್ಯಾಹ್ನ 1.30ಕ್ಕೆ ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ, ದಾಸವಾಣಿ ಸಂಕೀರ್ತನೆ: ರೂಪಶ್ರೀ ಪ್ರಭಾಂಜನ್ ಮತ್ತು ತಂಡ, ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ಆಯೋಜನೆ: ವೆಂಕಟರಮಣ ಸ್ವಾಮಿ ದೇವಸ್ಥಾನ: ಅಲಂಕಾರ: ವಾಮನವತಾರ, ಭಕ್ತಿ ಗಾಯನ: ಭಾರತಿ ಶ್ರೀಕಾಂತ್ ಮತ್ತು ತಂಡ, ಸ್ಥಳ: ವೆಂಕಟರಮಣ ಸ್ವಾಮಿ ದೇವಸ್ಥಾನ ಕಣಿಯರ ಕಾಲೊನಿ, ಚಾಮರಾಜಪೇಟೆ, ಸಂಜೆ 6.30

ಶರನ್ನವರಾತ್ರಿ ಮತ್ತು ವಿಜಯದಶಮಿ: ದೊಡ್ಡಮ್ಮ ದೇವಿಗೆ ವೀಳ್ಯದೆಲೆ ಅಲಂಕಾರ, ಸ್ಥಳ: ಚಿಕ್ಕದೇವಸಂದ್ರ, ಕೃಷ್ಣರಾಜಪುರ, ಸಂಜೆ 7.30

ನಿಧನ ವಾರ್ತೆ

ಕೆ.ವೃಂದಾ ಆಚಾರ್ಯ



ಬೆಂಗಳೂರು: ಮಲ್ಲೇಶ್ವರ ನಿವಾಸಿಯಾಗಿದ್ದ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ಕೆ.ವೃಂದಾ ಆಚಾರ್ಯ (42) ಅವರು ಸೋಮವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ಮೃದಂಗ ವಾದಕರಾಗಿರುವ ಪತಿ ಅರ್ಜುನ್ ಕುಮಾರ್ ಇದ್ದಾರೆ. ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಗೊಂಬೆ ಪ್ರದರ್ಶನ ವೀಕ್ಷಣೆಗೆ ಅವಕಾಶ

ಪುರಾಣ ಕಥೆ ಹೇಳುವ ಗೊಂಬೆಗಳು

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ತಿರುಪತಿಯ ಏಳು ಬೆಟ್ಟಗಳು, ಹಂಪಿ ಉತ್ಸವ, ಗ್ರಾಮೀಣ ಬದುಕಿನ ಚಿತ್ರಣ, ರಾಮಾಯಣ, ಮಹಾಭಾರತದ ಕಥನಗಳು..

ದಸರಾ ಉತ್ಸವದ ಅಂಗವಾಗಿ ಅಂದ್ರಹಳ್ಳಿಯ ಶ್ರೀವಿದ್ಯಮಾನ್ಯ ವಿದ್ಯಾ ಕೇಂದ್ರದ ಶಾಲೆಯಲ್ಲಿ ವಿದ್ಯಾರ್ಥಿಗಳು ಜೋಡಿಸಿರುವ ಗೊಂಬೆಗಳಲ್ಲಿ ಕಾಣುವ ‘ದೃಶ್ಯ ಕಾವ್ಯ’ ಇದು.

ವಿದ್ಯಾರ್ಥಿಗಳು, ರಾಮಾಯಣ, ಮಹಾಭಾರತದ ಘಟನೆ ವಿವರಿಸುವಂತೆ ಅನುಕ್ರಮವಾಗಿ ಗೊಂಬೆಗಳನ್ನು ಜೋಡಿಸಿದ್ದಾರೆ. ಶ್ರೀಕೃಷ್ಣನ ಜನನ, ಕಂಸ ವಧೆ, ಶ್ರೀಕೃಷ್ಣ ಲೀಲೆ, ಕೃಷ್ಣ ಸುಧಾಮರ ಕಥೆ, ದ್ರೌಪದಿಯ ಸ್ವಯಂವರ, ಗೀತೋಪದೇಶ, ದುರ್ಯೋಧನನ ಸಂಹಾರದಂತಹ ಘಟನೆಗಳನ್ನು ಪರಿಚಯಿಸುವ ಗೊಂಬೆಗಳು ಪ್ರದರ್ಶನದಲ್ಲಿವೆ.


ಅಂದ್ರಹಳ್ಳಿಯ ಶ್ರೀವಿದ್ಯಾಮಾನ್ಯ ವಿದ್ಯಾಕೇಂದ್ರದ ಶಾಲೆಯಲ್ಲಿ ವಿದ್ಯಾರ್ಥಿಗಳು ಜೋಡಿಸಿರುವ ಗೊಂಬೆಗಳು

ಶ್ರೀರಾಮನ ಜನನ, ಬಾಲ್ಯ, ತಾಟಕಿಯ ಸಂಹಾರ, ಸೀತಾ ಸ್ವಯಂವರ, ವನವಾಸ, ಸೀತಾಪಹರಣ, ಸೇತುವೆ ನಿರ್ಮಾಣ, ಲಂಕಾ ದಹನ, ರಾವಣ ಸಂಹಾರ, ಶ್ರೀರಾಮನ ಪಟ್ಟಾಭಿಷೇಕ, ಅಶ್ವಮೇಧಯಾಗ.. ಹೀಗೆ ಸಂಪೂರ್ಣ ರಾಮಾಯಣದ ಕಥೆಯನ್ನೂ ಗೊಂಬೆಗಳು ಹೇಳುತ್ತವೆ.

‘ನಮ್ಮ ಪುರಾಣ, ಸಂಸ್ಕೃತಿಯನ್ನು ಗೊಂಬೆಗಳ ಮೂಲಕ ಪರಿಚಯಿಸುವುದು ಈ ಉತ್ಸವದ ಉದ್ದೇಶವಾಗಿದೆ. ಮಕ್ಕಳಲ್ಲಿರುವ ಪ್ರತಿಭೆ ಕಂಡು ಅಚ್ಚರಿ ಆಗಿದೆ. ನವರಾತ್ರಿ ಮುಗಿಯುವವರೆಗೂ ಪೋಷಕರು ಮತ್ತು ಸಾರ್ವಜನಿಕರಿಗೆ ಗೊಂಬೆ ಪ್ರದರ್ಶನ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ’ ಎಂದು ಶಾಲೆಯ ಕಾರ್ಯದರ್ಶಿ ಭರತ್ ಸೌಂದರ್ಯ ತಿಳಿಸಿದರು.

‘ನಮ್ಮ ಶಾಲೆಯ ಮಕ್ಕಳು ರಾಮಾಯಣ, ಮಹಾಭಾರತವನ್ನು ಓದಿ ಅರ್ಥಮಾಡಿಕೊಂಡು, ಗೊಂಬೆಗಳ ಮೂಲಕ ಪ್ರಸ್ತುತಪಡಿಸಿದ್ದಾರೆ. ತಿರುಪತಿಯ ಏಳು ಬೆಟ್ಟಗಳು, ಹಂಪಿ ಉತ್ಸವ, ಗುಡ್ಡಗಾಡಿನಲ್ಲಿನ ರೈತರ ಜೀವನದಂತಹ ಘಟನೆಗಳನ್ನು ಅನಾವರಣಗೊಳಿಸಿದ್ದಾರೆ. ಇದಕ್ಕೆ ಶಾಲೆಯ ಆಡಳಿತ ಮಂಡಳಿಯ ಪ್ರೋತ್ಸಾಹ ಮತ್ತು ಪೋಷಕರ ಸಹಕಾರ ಮಹತ್ವದ್ದಾಗಿದೆ’ ಎಂದು ಪ್ರಾಂಶುಪಾಲರಾದ ಶಾರದಾ ತಿಳಿಸಿದರು.

ಚಿತ್ರಾವಳಿ


ನಗರದ ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಸೋಮವಾರ ಸ್ವಚ್ಛತಾ ಹೀ ಸೇವಾ ಕಾರ್ಯಕ್ರಮದಲ್ಲಿ ಕೆ.ಆರ್.ಪುರ ಕ್ಷೇತ್ರದ ಶಾಸಕ ಬಿ.ಎ.ಬಸವರಾಜು ಮಾತನಾಡಿದರು. ಬಿಬಿಎಂಪಿ ಎಂಜಿನಿಯರ್ ಶ್ರೀನಿಧಿ, ಪ್ರಾಂಶುಪಾಲ ಆಗಸ್ಟಿನ್ ಜಾರ್ಜ್, ಹಣಕಾಸು ಆಡಳಿತಾಧಿಕಾರಿ ಜಯಸ್ ವಿ.ಥಾಮಸ್ ಭಾಗವಹಿಸಿದ್ದರು


ನಗರದ ಚಂದ್ರಾ ಬಡಾವಣೆಯಲ್ಲಿರುವ ಶಕ್ತಿ ದೇವತೆ ದುರ್ಗಾಪರಮೇಶ್ವರಿಯ ನೂತನ ಪುಷ್ಪ ರಥವನ್ನು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಸಮರ್ಪಿಸಿ, ರಥೋತ್ಸವವನ್ನು ಉದ್ಘಾಟಿಸಿದರು. ಮುಖಂಡರಾದ ಅರುಣ್ ಸೋಮಣ್ಣ, ಶೈಲಜಾ ಸೋಮಣ್ಣ, ದೇವಸ್ಥಾನದ ಆಡಳಿತ ಮಂಡಳಿ ಉಪಾಧ್ಯಕ್ಷ ಹರೀಶ್ ಶೆಟ್ಟಿ, ಬಿಬಿಎಂಪಿ ಮಾಜಿ ಸದಸ್ಯರಾದ ವಿಶ್ವನಾಥ್ ಗೌಡ, ಮೋಹನ್ ಕುಮಾರ್ ದಾಸೇಗೌಡ, ಸಿ.ಎಂ. ರಾಜಪ್ಪ, ಕ್ರಾಂತಿರಾಜು ರವಿ ಉಪಸ್ಥಿತರಿದ್ದರು


ಅನ್ ಬಾಕ್ಸಿಂಗ್ ಬೆಂಗಳೂರು ವತಿಯಿಂದ ಕಬ್ಬನ್ ಉದ್ಯಾನದ ಆವಣದಲ್ಲಿರುವ ಬಾಲಭವನದಲ್ಲಿ 13ನೇ ಆವೃತ್ತಿಯ ‘ನಿಮ್ಮ ಉದ್ಯಾನದಲ್ಲಿ ಹಬ್ಬ’ ಕಾರ್ಯಕ್ರಮದಲ್ಲಿ ವಿವಿಧ ಮನೋರಂಜನಾ ಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸಿದ್ದರು

ಪ್ರಜಾವಾಣಿ

ನವವರ್ಣ

ಕೆಂಪು ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಮಂಗಳವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


ಸುಧಾ ಮತ್ತು ತಂಡ


ರಶ್ಮಿ, ವೃಶಾಲಿ, ಮಾನ್ವಿತಾ


ಶ್ರೀಲಕ್ಷ್ಮಿ


ಇನ್ನೋವೇಟಿವ್ ಅಡ್ವಾನ್ಸಡ್ ಮೀಡಿಯಾ ಸಿಬ್ಬಂದಿ


ಪುಷ್ಪಾ ಮತ್ತು ಸ್ನೇಹಿತರು


ಶಾಲಿನಿ ಮತ್ತು ಗೆಳತಿಯರು


ವಿಸ್ಮಯ



ಅನನ್ಯಾ ಮತ್ತು ಗೆಳತಿಯರು


ತೇಜಸ್ವಿನಿ ಮತ್ತು ಗೆಳತಿಯರು




ಸಂಯಮ ಯೋಗ ಕೇಂದ್ರ


ತೇಜಸ್ವಿನಿ ಮತ್ತು ಗೆಳತಿಯರು


ಶ್ರೀ ಸಿದ್ಧಗಂಗಾ ಹೈಯರ್ ಪ್ರೈಮರಿ ಸ್ಕೂಲ್, ಚಂದ್ರಾ ಬಡಾವಣೆ, ಬೆಂಗಳೂರು.

ಇಂದಿನ ಅಧಿದೇವತೆ
ಕಾತ್ಯಾಯನಿ




ಸುಶೀಲಾ, ಮಧುರಾ


ಶ್ರೀದೇವಿ ಮತ್ತು ಗೆಳತಿಯರು


ಶ್ರೀವಾಣಿ ಮತ್ತು ಗೆಳತಿಯರು


ಶಾಲಿನಿ ಇಂಟರ್‌ನ್ಯಾಷನಲ್ ಸ್ಕೂಲ್

ಇಂದಿನ ಬಣ್ಣ - ಕೆಂಪು


ಸಂಭ್ರಮ ಮತ್ತು ಗೆಳತಿಯರು


ತಿಶಾ


ಶಕೀಲಾ ಮತ್ತು ತಂಡ


ರಮ್ಯಾ


ರೇಖಾ


RES ಪಾಲಿಟೆಕ್ನಿಕ್


ಸೌಮ್ಯಾ ಮತ್ತು ಗೆಳತಿಯರು


ಕವಿತಾ ಮತ್ತು ಗೆಳತಿಯರು



ಉಷಾ, ರೇಖಾ


ವೀಣಾ ಮತ್ತು ಗೆಳತಿಯರು


ಸುಬ್ಬಲಕ್ಷ್ಮಿ


ಶಾಂತಾ ಮತ್ತು ಕುಟುಂಬ


ಸ್ನೇಹ ಸಂಗೀತ ತಂಡ





ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗೆ ಆದ್ಯತೆ ● ಸುಸಜ್ಜಿತ ಮತ್ತು ಅತ್ಯಾಧುನಿಕ ಸೌಲಭ್ಯ ● ಬಿಬಿಎಂಪಿಗೂ ಹೊಸ ಆದಾಯ ಮೂಲ

ಪ್ರಯಾಣಿಕರ ಸ್ನೇಹಿ 'ಸ್ಮಾರ್ಟ್ ತಂಗುದಾಣ'

● ಖಲೀಲಅಹ್ಮದ ಶೇಖ

ಬೆಂಗಳೂರು: ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಳಸುವವರಿಗೆ ಅತ್ಯಾಧುನಿಕ ಸೌಲಭ್ಯಗಳನ್ನು ಒದಗಿಸುವುದರ ಜೊತೆಯಲ್ಲೇ ಗರಿಷ್ಠ ಸುರಕ್ಷತೆಯನ್ನೂ ಒದಗಿಸುವಂತಹ 'ಸ್ಮಾರ್ಟ್ ಬಸ್ ತಂಗುದಾಣ'ಗಳ ಪರಿಕಲ್ಪನೆ ನಗರದಲ್ಲಿ ಸಾಕಾರಗೊಂಡಿದೆ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್ಆರ್) ನಿಧಿಯ ನೆರವಿನಲ್ಲಿ ಇಂತಹ ಮೂರು ತಂಗುದಾಣಗಳು ನಿರ್ಮಾಣವಾಗಿದ್ದು, ಈ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡರೆ ಜನಸ್ನೇಹಿ ತಂಗುದಾಣಗಳನ್ನು ನಿರ್ಮಿಸಿ ಹೊಸ ಆದಾಯದ ಮೂಲವನ್ನೂ ಸೃಜಿಸಿಕೊಳ್ಳಬಹುದಾದ ಅವಕಾಶ ಬಿಬಿಎಂಪಿಗೆ ದೊರಕಿದೆ.

ಈ ಆಕರ್ಷಕ ತಂಗುದಾಣಗಳಲ್ಲಿ ಪ್ರಯಾಣಿಕರ ಪ್ರಾಥಮಿಕ ಆದ್ಯತೆಗಳಾದ ಆಸನ ಮತ್ತು ಆಸರೆಯ ವ್ಯವಸ್ಥೆ ಇದ್ದು, ತಂಗುದಾಣದಲ್ಲಿನ ಡಿಜಿಟಲ್ ಪರದೆಯಲ್ಲಿ ಮಾರ್ಗದ ಮೂಲಕ ಹಾದು ಹೋಗುವ ಬಸ್‌ಗಳ ಪಟ್ಟಿ, ತಂಗುದಾಣಕ್ಕೆ ಬಸ್ ಬಂದು ತಲುಪುವ ಸರಾಸರಿ ಸಮಯದ ಮಾಹಿತಿ ಬಿತ್ತರಗೊಳ್ಳಲಿದೆ. ರಾತ್ರಿವೇಳೆ ಎಲ್ಇಡಿ ಬಲ್ಬ್‌ಗಳು ಬೆಳಕು ಬೀರುತ್ತಿರುತ್ತವೆ.

ಸೇಪಿಯನ್ಸ್ ಇಂಡಿಯಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಎಂಬ ಬಹುರಾಷ್ಟ್ರೀಯ ಕಂಪನಿಯ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕಾ ನಿಧಿ (ಸಿಎಸ್ಆರ್) ಅಡಿಯಲ್ಲಿ ಶಿಲ್ಪಾ ಫೌಂಡೇಷನ್ ಸಹಯೋಗದಲ್ಲಿ ₹1.1 ಕೋಟಿ ವೆಚ್ಚದಲ್ಲಿ ನಗರದ ನೃಪತುಂಗ ರಸ್ತೆ, ಕೋರಮಂಗಲದ ನೆಕ್ಸಸ್ ಮಾಲ್ ಮುಂಭಾಗ ಹಾಗೂ ಕಾಡುಬೀಸನಹಳ್ಳಿಯ ನ್ಯೂ ಹೊರೈಝೊನ್ ಕಾಲೇಜಿನ ಮುಂಭಾಗ ಅತ್ಯಾಧುನಿಕ ಹಾಗೂ ಸುಸಜ್ಜಿತ 'ಸ್ಮಾರ್ಟ್ ತಂಗುದಾಣ'ಗಳನ್ನು ನಿರ್ಮಿಸಲಾಗಿದೆ. ಐದು ವರ್ಷಗಳ ನಿರ್ವಹಣೆಯೂ ಯೋಜನೆಯಲ್ಲಿ ಸೇರಿದೆ. ಈಗಾಗಲೇ ಈ ತಂಗುದಾಣಗಳನ್ನು ಬಿಬಿಎಂಪಿಗೆ ಹಸ್ತಾಂತರಿಸಲಾಗಿದೆ.

ಬೆಂಗಳೂರು ನಗರದಲ್ಲಿ ಸಾವಿರಾರು ಬಸ್ ತಂಗುದಾಣಗಳಿದ್ದರೂ, ಪ್ರಯಾಣಿಕ ಸ್ನೇಹಿ ಹಾಗೂ ಅತ್ಯಾಧುನಿಕ ಸೌಲಭ್ಯವುಳ್ಳ ತಂಗುದಾಣಗಳ ಸಂಖ್ಯೆ ವಿರಳ. ಬಿಬಿಎಂಪಿಗೆ ಯಾವುದೇ ರೀತಿಯಲ್ಲೂ ಹೊರೆಯಾಗದಂತೆ ಸುಸಜ್ಜಿತ ಮತ್ತು ಅತ್ಯಾಧುನಿಕ ಸೌಲಭ್ಯಗಳುಳ್ಳ ಬಸ್ ಪ್ರಯಾಣಿಕರ ತಂಗುದಾಣ ಕಲ್ಪಿಸುವ ಉದ್ದೇಶದೊಂದಿಗೆ ಈ ಯೋಜನೆಯನ್ನು ರೂಪಿಸಲಾಗಿದೆ. ಪ್ರಯಾಣಿಕರಿಗೆ ಉಪಯುಕ್ತವಾಗುವ ರೀತಿಯಲ್ಲಿ ತಂಗುದಾಣವನ್ನು ವಿನ್ಯಾಸಗೊಳಿಸಲಾಗಿದೆ.

ನಿರಂತರವಾಗಿ ಸಿಸಿಟಿವಿ ಕ್ಯಾಮೆರಾ ಕಣ್ಗಾವಲು

ಸ್ಮಾರ್ಟ್ ಬಸ್ ತಂಗುದಾಣಗಳಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಕಡಿವಾಣ ಹಾಕಲು ದಿನದ 24 ಗಂಟೆಯೂ ಚಾಲನೆಯಲ್ಲಿ ಇರುವಂತೆ ಸಿಸಿಟಿವಿ ಕ್ಯಾಮೆರಾಗಳ ಕಣ್ಗಾವಲು ವ್ಯವಸ್ಥೆ ಮಾಡಲಾಗಿದೆ. ಈ ಸಿಸಿಟಿವಿ ಕ್ಯಾಮೆರಾಗಳನ್ನು ಸ್ಥಳೀಯ ಪೊಲೀಸ್ ಠಾಣೆಯೊಂದಿಗೆ ಜೋಡಿಸಲಾಗಿದೆ. ಪೊಲೀಸರು ನಿರಂತರವಾಗಿ ನಿಗಾ ಇರಿಸಲು ಅವಕಾಶ ಕಲ್ಪಿಸಲಾಗಿದೆ.

ಇದರ ಜೊತೆಗೆ ಪ್ಯಾನಿಕ್ ಬಟನ್ ಅಳವಡಿಸಲಾಗಿದೆ. ಮಹಿಳೆಯರು ಮಕ್ಕಳು ಸೇರಿದಂತೆ ಪ್ರಯಾಣಿಕರಿಗೆ ಯಾವುದೇ ರೀತಿಯ ಅಪಾಯ ಉಂಟಾಗುವ ಪರಿಸ್ಥಿತಿ ನಿರ್ಮಾಣವಾದ ಸಂದರ್ಭದಲ್ಲಿ ಪ್ಯಾನಿಕ್ ಬಟನ್ ಒತ್ತಿದರೆ ಸ್ಥಳೀಯ ಪೊಲೀಸ್ ಠಾಣೆಗೆ ಸಂದೇಶ ರವಾನೆಯಾಗಲಿದೆ. ಕೆಲವೇ ನಿಮಿಷಗಳಲ್ಲಿ ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ರಕ್ಷಣೆ ಒದಗಿಸಲಿದ್ದಾರೆ.

ಚಾರ್ಜಿಂಗ್ ಸಮಸ್ಯೆಗೂ ಪರಿಹಾರ

'ಈ ತಂಗುದಾಣಗಳಲ್ಲಿ ಚಾರ್ಜಿಂಗ್ ಪಾಯಿಂಟ್‌ಗಳಿದ್ದು, ಪ್ರಯಾಣಿಕರು ತಮ್ಮ ಲ್ಯಾಪ್‌ಟಾಪ್, ಮೊಬೈಲ್‌ಗಳನ್ನು ಚಾರ್ಜಿಂಗ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ಮಳೆ ನೀರು ಪೋಲಾಗದಂತೆ ಗಿಡಗಳಿಗೆ ಅಥವಾ ಇಂಗುಗುಂಡಿಗಳಿಗೆ ಹರಿದು ಹೋಗುವ ವ್ಯವಸ್ಥೆ ಇದೆ. ಸೆನ್ಸಾರ್ ಆಧಾರಿತ ಕಸದ ಬುಟ್ಟಿಗಳನ್ನು ಅಳವಡಿಸಿದ್ದು, ಒಣ ಕಸ ಹಾಗೂ ಹಸಿ ಕಸವನ್ನು ವಿಂಗಡಿಸಿ ತ್ಯಾಜ್ಯ ಶೇಖರಿಸಲಿದೆ. ಕಸದ ಬುಟ್ಟಿ ತುಂಬಿದ ತಕ್ಷಣ ಆನ್‌ಲೈನ್ ಮೂಲಕ ಮಾಹಿತಿ ರವಾನಿಸಲಿದ್ದು, ಬಿಬಿಎಂಪಿ ಸಿಬ್ಬಂದಿ ಬಂದು ತ್ಯಾಜ್ಯ ವಿಲೇವಾರಿ ಮಾಡಬಹುದು' ಎಂದು 'ಸ್ಮಾರ್ಟ್ ತಂಗುದಾಣ' ಯೋಜನೆಯನ್ನು ಅನುಷ್ಠಾನಕ್ಕೆ ತಂದಿರುವ ಶಿಲ್ಪಾ ಫೌಂಡೇಷನ್‌ನ ಸಂಸ್ಥಾಪಕ ಅಚ್ಚುತ್‌ಗೌಡ ತಿಳಿಸಿದರು.

'ಅತ್ಯಾಧುನಿಕ ಹಾಗೂ ಸುಸಜ್ಜಿತ ಬಸ್ ತಂಗುದಾಣವನ್ನು ಬಿಬಿಎಂಪಿಗೆ ಹಸ್ತಾಂತರಿಸಲಾಗಿದೆ. ಸಂಸ್ಥೆಯ ವತಿಯಿಂದ ಯಾವುದೇ ರೀತಿಯ ಜಾಹೀರಾತುಗಳನ್ನು ಅಳವಡಿಸಲಾಗುವುದಿಲ್ಲ. ಡಿಜಿಟಲ್ ಪರದೆಗಳಲ್ಲಿ ಸಾರ್ವಜನಿಕರಿಗೆ ಉಪಯೋಗವಾಗುವ ಜಾಹೀರಾತುಗಳನ್ನು ಬಿತ್ತರಿಸಬಹುದು' ಎಂದರು.



ನಗರದ ನೃಪತುಂಗ ರಸ್ತೆಯಲ್ಲಿರುವ ಸ್ಮಾರ್ಟ್ ಬಸ್ ತಂಗುದಾಣದ ಮುಂಭಾಗದಲ್ಲಿ ಬಸ್‌ಗಾಗಿ ಕಾಯುತ್ತಿದ್ದ ಪ್ರಯಾಣಿಕರು
ಪ್ರಜಾವಾಣಿ ಚಿತ್ರಗಳು: ರಂಜು ಪಿ.

ಮುಖ್ಯಾಂಶಗಳು

- ಪ್ಯಾನಿಕ್ ಬಟನ್ ವ್ಯವಸ್ಥೆ
- 24/7 ಸಿಸಿಟಿವಿ ಕ್ಯಾಮೆರಾ
- ಚಾರ್ಜಿಂಗ್ ಪಾಯಿಂಟ್‌ಗಳು



ಸ್ಮಾರ್ಟ್ ಬಸ್ ತಂಗುದಾಣದಲ್ಲಿ ಪ್ರಯಾಣಿಕರೊಬ್ಬರು ಮೊಬೈಲ್ ಚಾರ್ಜ್ ಮಾಡಿಕೊಳ್ಳುತ್ತಿರುವುದು

ಸೇಪಿಯನ್ಸ್ ಹಾಗೂ ಶಿಲ್ಪಾ ಫೌಂಡೇಷನ್ ನಿರ್ಮಿಸಿರುವ ಸ್ಮಾರ್ಟ್ ತಂಗುದಾಣವು ಹಲವಾರು ಸೌಲಭ್ಯಗಳಿಂದ ಕೂಡಿದ್ದು, ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಇದನ್ನು ಸಾರ್ವಜನಿಕರು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಬೇಕು

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ



ಸ್ಮಾರ್ಟ್ ಬಸ್ ತಂಗುದಾಣದಲ್ಲಿರುವ ಪ್ಯಾನಿಕ್ ಬಟನ್

ಅಂಕಿ ಅಂಶಗಳು

3 ನಗರದಲ್ಲಿ ನಿರ್ಮಿಸಲಾಗಿರುವ ಸ್ಮಾರ್ಟ್ ತಂಗುದಾಣಗಳ ಸಂಖ್ಯೆ

1,689 ನಗರದಲ್ಲಿರುವ ಒಟ್ಟು ಬಸ್ ತಂಗುದಾಣಗಳ ಸಂಖ್ಯೆ

1.1 ಕೋಟಿ ಒಟ್ಟು ವೆಚ್ಚ

ಯಾರು ಏನಂತಾರೆ?



ಮಹಿಳೆಯರು ಮತ್ತು ಮಕ್ಕಳು ಸಾರ್ವಜನಿಕ ಪ್ರದೇಶಗಳಲ್ಲಿ ಅದರಲ್ಲೂ ಬಸ್ ತಂಗುದಾಣಗಳಲ್ಲಿ ನಿರ್ಭೀತಿಯಿಂದ ಇರಬೇಕು ಎಂಬ ಉದ್ದೇಶದಿಂದ ಸ್ಮಾರ್ಟ್ ತಂಗುದಾಣವನ್ನು ನಿರ್ಮಿಸಲಾಗಿದೆ. ಮುಂದಿನ ದಿನಗಳಲ್ಲಿ ಇಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ವಿಡಿಯೊಗಳನ್ನು ಪ್ರದರ್ಶಿಸಲು ಬಿಬಿಎಂಪಿ ಜೊತೆಗೆ ಮಾತುಕತೆ ನಡೆಸುತ್ತೇವೆ.

ಅಚ್ಚುತ್ ಗೌಡ, ಶಿಲ್ಪಾ ಫೌಂಡೇಷನ್‌ನ ಸಂಸ್ಥಾಪಕರು



ಸೇಪಿಯನ್ಸ್ ಸಂಸ್ಥೆಯು ತನ್ನ ಸಿಎಸ್ಆರ್ ನಿಧಿ ಬಳಸಿಕೊಂಡು ವಿನೂತನ ಶೈಲಿಯ ಸ್ಮಾರ್ಟ್ ತಂಗುದಾಣವನ್ನು ನಿರ್ಮಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಿದೆ. ಹೊಸ ತಲೆಮಾರಿನವರಿಗೆ ಹೊಸತನವನ್ನು ನೀಡುವ ಉದ್ದೇಶದಿಂದ ಸ್ಮಾರ್ಟ್ ತಂಗುದಾಣ ನಿರ್ಮಿಸಲಾಗಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡರೆ ಈ ಯೋಜನೆ ಯಶಸ್ವಿಯಾಗಲಿದೆ.

ಸುರಜಿತ್ ಬಸು, ಸೇಪಿಯನ್ಸ್ ಸಂಸ್ಥೆಯ ಪ್ರಾದೇಶಿಕ ವ್ಯವಸ್ಥಾಪಕರು ಹಾಗೂ ಸೇಪಿಯನ್ಸ್ ವಿಶ್ವವಿದ್ಯಾಲಯದ ಮುಖ್ಯಸ್ಥ



ನೃಪತುಂಗ ರಸ್ತೆಯಲ್ಲಿರುವ ತಂಗುದಾಣದಲ್ಲಿ ರಾತ್ರಿ ಸಮಯದಲ್ಲಿ ಹೆಚ್ಚು ಪ್ರಯಾಣಿಕರು ಇರುವುದಿಲ್ಲ. ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಪ್ಯಾನಿಕ್ ಬಟನ್ ಮತ್ತು ಸಿಸಿಟಿವಿ ಕ್ಯಾಮೆರಾ ಅಳವಡಿಸಿರುವುದು ಶ್ಲಾಘನೀಯ.

ಗಗನಶ್ರೀ, ಎಂ.ಟೆಕ್ ವಿದ್ಯಾರ್ಥಿನಿ



ನಗರ ಪ್ರದೇಶಗಳಲ್ಲಿ ಇತ್ತೀಚೆಗೆ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಬಸ್ ತಂಗುದಾಣಗಳಲ್ಲಿ ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡಿರುವುದು ಒಳ್ಳೆಯ ಕ್ರಮ. ಇಂತಹ ತಂಗುದಾಣಗಳ ಸಂಖ್ಯೆ ಹೆಚ್ಚಾಗಲಿ

ಅನಿತಾ ಭಾರದ್ವಾಜ್, ಗೃಹಿಣಿ



ಸ್ಮಾರ್ಟ್ ಬಸ್ ತಂಗುದಾಣದಲ್ಲಿರುವ ಸ್ಯಾನಿಟರಿ ಪ್ಯಾಡ್ ವೆಂಡಿಂಗ್ ಮೆಷಿನ್

ಸ್ಯಾನಿಟರಿ ಪ್ಯಾಡ್ ವೆಂಡಿಂಗ್ ಮಷಿನ್

ಸ್ಮಾರ್ಟ್ ತಂಗುದಾಣದಲ್ಲಿ ಮಹಿಳೆಯರಿಗಾಗಿ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಸ್ಯಾನಿಟರಿ ಪ್ಯಾಡ್ ವೆಂಡಿಂಗ್ ಮಷಿನ್ ಅಳವಡಿಸಲಾಗಿದೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಸ್ಯಾನಿಟರಿ ಪ್ಯಾಡ್‌ಗಳನ್ನು ಖರೀದಿಸಬಹುದು. ಇಂತಹ ಸೌಲಭ್ಯ ಬೆಂಗಳೂರಿನ ಬಸ್ ಪ್ರಯಾಣಿಕರ ತಂಗುದಾಣಗಳಲ್ಲಿ ಇದೇ ಮೊದಲ ಬಾರಿಗೆ ಲಭಿಸಿದೆ.



ಆದಾಯಕ್ಕೂ ಇದೆ ಅವಕಾಶ

'ಸ್ಮಾರ್ಟ್ ತಂಗುದಾಣ'ಗಳಲ್ಲಿ ಅಳವಡಿಸಿರುವ ಡಿಜಿಟಲ್ ಪರದೆಗಳಲ್ಲಿ ಖಾಸಗಿಯವರಿಗೆ ಜಾಹೀರಾತು ಪ್ರಕಟಣೆಗೆ ಅವಕಾಶ ಕಲ್ಪಿಸಿ, ಆದಾಯ ಪಡೆಯುವ ಅವಕಾಶವೂ ಬಿಬಿಎಂಪಿಗೆ ಇದೆ.

'ಖುಷಿಯಷ್ಟೇ ಭವಿಷ್ಯದ ಯೋಚನೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳು ಖುಷಿಯಲ್ಲೇ ಕಾಲ ಕಳೆಯುವ ಬದಲು, ಭವಿಷ್ಯದ ಬಗ್ಗೆಯೂ ಯೋಚಿಸಬೇಕು. ಕಾಲೇಜಿನಲ್ಲಿ ಯಶಸ್ವಿನ ಕಥೆಗಳನ್ನು ಬಿಟ್ಟು ಹೋಗಬೇಕು ಎಂದು ಜೈಪುರದ ಮಾಳವೀಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ನಿರ್ದೇಶಕ ನಾರಾಯಣ ಪ್ರಸಾದ್ ಪಾಧ್ಯ ಸಲಹೆ ನೀಡಿದರು.

ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಬಿ.ಟೆಕ್ ತರಗತಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪಾಲಕರ ಒತ್ತಾಯದ ಮೇರೆಗೆ ಓದಬಾರದು. ಇಷ್ಟಪಟ್ಟು ಕಲಿಯಬೇಕು. ಎಲ್ಲ ಕಡೆ ಅಂಕವೇ ಮುಖ್ಯವಲ್ಲ. ಹಲವು ಕಡೆಗಳಲ್ಲಿ ಆತ್ಮವಿಶ್ವಾಸ, ಕೌಶಲ ಮುಖ್ಯವಾಗಲಿದೆ ಎಂದರು.

ಗುವಾಹಟಿ ಐಐಟಿಯ ಕೆಮಿಕಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಕೌಸ್ತುಭ ಮೊಹಂತಿ ಮಾತನಾಡಿ, 'ನಾನು ಇದೇ ಕಾಲೇಜಿನ ವಿದ್ಯಾರ್ಥಿ' ಎಂದು ನೆನಪು ಮಾಡಿಕೊಂಡರು. 'ವಿದ್ಯಾರ್ಥಿಗಳು ತಾತ್ಸಾರ ಇಲ್ಲದೇ ವ್ಯಾಸಂಗ ಮಾಡಬೇಕು. ಕೀಳರಿಮೆ ಬಿಟ್ಟು ಓದಬೇಕು' ಎಂದು ಕಿವಿಮಾತು ಹೇಳಿದರು.

ಗೋಕುಲ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ಆರ್. ಜಯರಾಂ ಮಾತನಾಡಿ, 'ಇಂದು ಕಾಲೇಜಿನಿಂದ ಪದವಿ ಪಡೆದು ಹೊರಬರುತ್ತಿರುವ ವಿದ್ಯಾರ್ಥಿಗಳಲ್ಲಿ ಶೇ 10ರಷ್ಟು ವಿದ್ಯಾರ್ಥಿಗಳಿಗೆ ಮಾತ್ರ ಉದ್ಯೋಗಾವಕಾಶಗಳು ಸಿಗುತ್ತಿವೆ. ಉಳಿದವರಲ್ಲಿ ಕೌಶಲದ ಕೊರತೆ ಇರುವ ಕಾರಣದಿಂದ ಉದ್ಯೋಗ ವಂಚಿತರಾಗುತ್ತಿದ್ದಾರೆ. ಅದಕ್ಕಾಗಿ ನಾವು ಕೌಶಲ ಕೇಂದ್ರ ಆರಂಭಿಸಿದ್ದೇವೆ' ಎಂದು ತಿಳಿಸಿದರು. ಗೋಕುಲ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಎಂ.ಆರ್. ಸೀತಾರಾಂ, ಕಾರ್ಯದರ್ಶಿ ಎಂ.ಆರ್. ರಾಮಯ್ಯ, ಮುಖ್ಯ ಕಾರ್ಯನಿರ್ವಾಹಕ ಬಿ.ಎಸ್. ರಾಮಪ್ರಸಾದ್, ಶೈಕ್ಷಣಿಕ ಸಲಹೆಗಾರ ಕರಿಸಿದ್ದಪ್ಪ, ಪ್ರಾಂಶುಪಾಲ ಎನ್.ವಿ.ಆರ್. ನಾಯ್ಡು ಭಾಗವಹಿಸಿದ್ದರು.



ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಬಿ.ಟೆಕ್ ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಜೈಪುರದ ಮಾಳವೀಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ನಿರ್ದೇಶಕ ನಾರಾಯಣ ಪ್ರಸಾದ್ ಪಾಧ್ಯ ಅವರನ್ನು ಸನ್ಮಾನಿಸಲಾಯಿತು

ಮಸಿ ಬಳಿಯಲು ಯತ್ನ: ಸಿದ್ದರಾಮಯ್ಯ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ನ್ಯಾಯ, ಶೋಷಿತ- ದಮನಿತರ ಪರವಾಗಿ ಮತ್ತು ಜಾತಿ ವ್ಯವಸ್ಥೆ ವಿರುದ್ಧ ಇದ್ದೇನೆ ಎನ್ನುವ ಕಾರಣಕ್ಕೆ ನನಗೆ ಮಸಿ ಬಳಿಯಲು ಕೆಲವರು ಯತ್ನಿಸುತ್ತಿದ್ದಾರೆ. ಈ ಪ್ರಯತ್ನಗಳು ಹೇಗೆ ಯಶಸ್ವಿಯಾಗುತ್ತದೆ ಎಂದು ನಾನೂ ನೋಡುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಸಮರ್ಥ ಜನ ನಾಯಕ- ವಿ.ಎಸ್. ಉಗ್ರಪ್ಪ' (ಲೇಖಕರು: ವೀರೇಶ ನಾಯಕ ಬೈಲಮರ್ಚೇಡ್ ಮತ್ತು ಗೂರೂ ಶ್ರೀರಾಮುಲು) ಕೃತಿಯನ್ನು ಭಾನುವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ನಾನು ಬಳ್ಳಾರಿ ಪಾದಯಾತ್ರೆ ಮಾಡುವುದಕ್ಕೂ ಮೊದಲೇ ಉಗ್ರಪ್ಪ ಗಣಿ ಹಗರಣ ಮತ್ತು ರೆಡ್ಡಿ ಸಹೋದರರ ವಿಚಾರದ ಬಗ್ಗೆ ಸತ್ಯ ಶೋಧನಾ ವರದಿ ನೀಡಿದ್ದರು. ಈ ವರದಿ ಬಳ್ಳಾರಿ ಪಾದಯಾತ್ರೆಗೆ ನಾನು ತೋಳು ತಟ್ಟುವಂತಾಯಿತು' ಎಂದರು.

'ಆರೆಸ್ಸೆಸ್ ಹಿನ್ನೆಲೆಯಿಂದ ರಾಜಕಾರಣಕ್ಕೆ ಬಂದಿರುವ ಉಗ್ರಪ್ಪ, ಅಡ್ವಾಣಿ, ವಾಜಪೇಯಿ ಜತೆ ತುರ್ತು ಪರಿಸ್ಥಿತಿ ವಿರೋಧಿಸಿ ಜೈಲು ವಾಸ ಅನುಭವಿಸಿದ್ದರು. ನಂತರ ಆರೆಸ್ಸೆಸ್ ಸಿದ್ಧಾಂತ ವಿರೋಧಿಸಿ ಜನತಾ ಪಕ್ಷ ಮತ್ತು ಕಾಂಗ್ರೆಸ್ ಸೇರಿದರು' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಉಗ್ರಪ್ಪ ಅವರು ಗುಂಡು ಹೊಡೆದ ರೀತಿಯಲ್ಲಿ ಸದನದ ಹೊರಗೆ ಮತ್ತು ಒಳಗೆ ಮಾತನಾಡುತ್ತಾರೆ' ಎಂದು ಪ್ರಶಂಸಿಸಿದರು.

'ಗಾಜಿನ ಮನೆಯಲ್ಲಿ ಕುಳಿತವರು ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುತ್ತಿದ್ದಾರೆ. ರಾಜೀನಾಮೆ ಕೇಳಲು ಅವರು ಯಾರು?' ಎಂದು ಪಿ.ಜಿ.ಆರ್. ಸಿಂಧ್ಯ ಪ್ರಶ್ನಿಸಿದರು.

'ಜನತಾ ಪರಿವಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ದೇವರಾಜ ಅರಸು ಮತ್ತು ಬಂಗಾರಪ್ಪ ಕಾರಣ. ದೇವರಾಜ ಅರಸು ಬಡವರ ಪರ ಕಾರ್ಯಕ್ರಮ ರೂಪಿಸಿದರು. ಅಂಥವರನ್ನೇ ಕೆಲವರು ಕಟಕಟೆಗೆ ನಿಲ್ಲಿಸಿದರು. ಅಂಥವರೇ ಈಗ ಹಲವು ಯೋಜನೆ ಜಾರಿಗೆ ತಂದಿರುವ ಸಿದ್ದರಾಮಯ್ಯ ಅವರಿಗೆ ಅದೇ ರೀತಿಯ ಕಾಟ ಕೊಡುತ್ತಿದ್ದಾರೆ' ಎಂದರು.

ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋನ ದಾಸ್, ಸಾಹಿತಿ ಬರಗೂರು ರಾಮಚಂದ್ರಪ್ಪ, ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಚ್.ಎಂ. ರೇವಣ್ಣ, ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್ ಇದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಸಮರ್ಥ ಜನ ನಾಯಕ– ವಿ.ಎಸ್ ಉಗ್ರಪ್ಪ' ಕೃತಿಯನ್ನು ಬಿಡುಗಡೆ ಮಾಡಿದರು. ಬರಗೂರು ರಾಮಚಂದ್ರಪ್ಪ, ವಿ.ಎಸ್ ಉಗ್ರಪ್ಪ, ಡಿ.ಕೆ. ಶಿವಕುಮಾರ್, ನಿವೃತ್ತ ನ್ಯಾಯಮೂರ್ತಿ ಎಚ್ ಎನ್ ನಾಗಮೋಹನ ದಾಸ್ ಅವರು ಇದ್ದರು

ಬಸವರಾಜ ಮಗಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಮಹದೇವಪುರ ವಲಯದ ಕಂದಾಯ ಅಧಿಕಾರಿ ಬಸವರಾಜ ಮಗಿ ಅವರನ್ನು ಅಮಾನತುಗೊಳಿಸಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಲೋಕಾಯುಕ್ತ ತನಿಖಾಧಿಕಾರಿಗಳು 2024ರ ಜುಲೈ 11ರಂದು ನಡೆಸಿದ ದಾಳಿಯಿಂದ ಬಸವರಾಜ ಮಗಿ ಅವರು ಆದಾಯಕ್ಕಿಂತ ಶೇ 578.59ರಷ್ಟು ಹೆಚ್ಚು ಆಸ್ತಿ ಹೊಂದಿರುವುದು ಪತ್ತೆಯಾಗಿತ್ತು. ಬಸವರಾಜ ಅವರ ಮನೆ, ಕರ್ತವ್ಯ ನಿರ್ವಹಿಸುತ್ತಿದ್ದ ಕಚೇರಿ, ಕಲಬುರಗಿಯಲ್ಲಿರುವ ಅವರ ಕುಟುಂಬದವರ ಮನೆಗಳು ಸೇರಿದಂತೆ ಒಂಬತ್ತು ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ಶೋಧ ನಡೆಸಿದ್ದರು.

₹5.95 ಕೋಟಿಯಷ್ಟು ಅಕ್ರಮ ಸ್ವತ್ತುಗಳನ್ನು ಹೊಂದಿರುವುದು ಪ್ರಾಥಮಿಕ ತನಿಖೆಯಿಂದ ಕಂಡು ಬಂದಿದೆ. ತನಿಖೆಗೆ ಹಸ್ತಕ್ಷೇಪ ಮಾಡುವ, ಸಾಕ್ಷ್ಯಗಳನ್ನು ನಾಶಪಡಿಸುವ ಸಾಧ್ಯತೆ ಇರುವುದರಿಂದ ಬಸವರಾಜ ಮಗಿ ಅವರನ್ನು ಅಮಾನತು ಮಾಡಬೇಕು ಎಂದು ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ನಗರಾಭಿವೃದ್ಧಿ ಇಲಾಖೆಗೆ 2024ರ ಆಗಸ್ಟ್ 9ರಂದು ಪ್ರಸ್ತಾವ ಸಲ್ಲಿಸಿದ್ದರು. ಇದನ್ನು ಪರಿಗಣಿಸಿರುವ ನಗರಾಭಿವೃದ್ಧಿ ಇಲಾಖೆ, ಬಸವರಾಜ ಮಗಿ ಅವರನ್ನು ಅಮಾನತುಗೊಳಿಸಿ ಅಕ್ಟೋಬರ್ 4ರಂದು ಆದೇಶ ಹೊರಡಿಸಿದೆ.



ಬಸವರಾಜ ಮಗಿ

ಇಂದಿನಿಂದ ವರ್ತೂರಿನಲ್ಲಿ ವೈಭವದ ದಸರಾ

ಕೆ.ಆರ್.ಪುರ: ವಿಶ್ವ ವಿಖ್ಯಾತ ಮೈಸೂರು ದಸರಾ ಮಾದರಿಯಲ್ಲಿ ವರ್ತೂರಿನಲ್ಲಿ ವೈಭವದ ದಸರಾ ಮಹೋತ್ಸವವನ್ನು ಜೈ ಶ್ರೀರಾಮ್ ಸೇವಾ ಸಮಿತಿಯಿಂದ ಆಚರಿಸಲಾಗುವುದು ಎಂದು ಸಮಿತಿ ಅಧ್ಯಕ್ಷ ಕುಪ್ಪಿ ಮಂಜುನಾಥ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಂಗಳವಾರ ದುರ್ಗಾದೇವಿಯನ್ನು ಪ್ರತಿಷ್ಠಾಪನೆ ಮಾಡುವ ಮೂಲಕ ಐದು ದಿನಗಳು ದಸರಾ ಉತ್ಸವಕ್ಕೆ ಚಾಲನೆ ದೊರೆಯಲಿದೆ' ಎಂದು ಹೇಳಿದರು.

ಸಚಿವರಾದ ರಾಮಲಿಂಗಾರೆಡ್ಡಿ, ಶಿವರಾಜ್ ತಂಗಡಗಿ, ಚಿತ್ರ ನಟ–ನಟಿಯರು, ಹಾಸ್ಯಕಲಾವಿದರು, ಗಾಯಕ –ಗಾಯಕಿಯರು, ಬಿಗ್‌ಬಾಸ್ ಸ್ಪರ್ಧಿಗಳು, ಗಿಚ್ಚಿಗಿಲಿಗಿಲಿ ಹಾಸ್ಯ ಕಲಾವಿದರು ಪಾಲ್ಗೊಳ್ಳಲಿದ್ದಾರೆ ಎಂದರು.

ಕಬ್ಬನ್ ಪಾರ್ಕ್ ಮಾದರಿಯಲ್ಲಿ ನಿರ್ಮಾಣ: ಸಚಿವ ಈಶ್ವರ್ ಖಂಡ್ರೆ

ನಗರದಲ್ಲಿ ಮತ್ತೊಂದು ಸಸ್ಯೋದ್ಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಪಾರ್ಕ್ ಮಾದರಿಯಲ್ಲಿ ಯಲಹಂಕದಲ್ಲಿ 153 ಎಕರೆ ಅರಣ್ಯ ಜಮೀನಿನಲ್ಲಿ ಸಸ್ಯೋದ್ಯಾನ ನಿರ್ಮಿಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ತಿಳಿಸಿದರು.

ಅರಣ್ಯ ಇಲಾಖೆ ಸೋಮವಾರ ಆಯೋಜಿಸಿದ್ದ 70ನೇ ವನ್ಯಜೀವಿ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಯಲಹಂಕ ಪ್ರಾದೇಶಿಕ ಸಾರಿಗೆ ಕಚೇರಿ ಬಳಿಯ ಮಾದಪ್ಪನಹಳ್ಳಿಯಲ್ಲಿ ಅರಣ್ಯ ಇಲಾಖೆಗೆ ಸೇರಿದ ಜಮೀನು ಇದಾಗಿದ್ದು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮಕ್ಕೆ ಗುತ್ತಿಗೆ ನೀಡಲಾಗಿತ್ತು. ಗುತ್ತಿಗೆ ಅವಧಿ ಮುಕ್ತಾಯವಾಗಿರುವುದರಿಂದ ಇಲ್ಲಿ ಸಾಲುಮರದ ತಿಮ್ಮಕ್ಕನ ಹೆಸರಲ್ಲಿ ಶೀಘ್ರದಲ್ಲಿಯೇ ಸಸ್ಯೋದ್ಯಾನ ಮಾಡಲಾಗುವುದು ಎಂದು ತಿಳಿಸಿದರು.

ಬೆಂಗಳೂರಿಗೆ ಉದ್ಯಾನ ನಗರಿ ಎಂಬ ಹೆಸರಿದೆ. ನಗರವು 89 ಚದರ ಕಿಲೋಮೀಟರ್‌ನಷ್ಟು ಅರಣ್ಯ ಪ್ರದೇಶ ಹೊಂದಿದ್ದ ಕಾರಣ ಈ ಹೆಸರು ಬಂದಿತ್ತು. 10 ವರ್ಷಗಳಲ್ಲಿ 5 ಚದರ ಕಿಲೋಮೀಟರ್‌ನಷ್ಟು ಹಸಿರು ಕಡಿಮೆಯಾಗಿದೆ ಎಂಬ ವರದಿ ಇದೆ. ಎಲ್ಲ ಕಡೆ ಸಸಿಗಳನ್ನು ಬೆಳೆಸುವ ಮೂಲಕ ನಗರದಲ್ಲಿ ಹಸಿರು ವನಗಳನ್ನು ಹೆಚ್ಚು ಮಾಡಲಾಗುವುದು. ಜೊತೆಗೆ ರಾಜಧಾನಿಯಲ್ಲಿ ಒತ್ತುವರಿಯಾಗಿರುವ ಅರಣ್ಯ ಜಮೀನುಗಳನ್ನು ಮರಳಿ ಇಲಾಖೆಯ ವಶಕ್ಕೆ ಪಡೆಯಲಾಗುವುದು ಎಂದು ಹೇಳಿದರು.

ಮನುಷ್ಯರಂತೆ ಎಲ್ಲ ಜೀವಿಗಳಿಗೂ ಬದುಕುವ ಹಕ್ಕು ಇದೆ. ಅದಕ್ಕೆ ಪೂರಕವಾದ ಪರಿಸರ ಇರಬೇಕಿದ್ದರೆ ಕಾಡು ಉಳಿಯಬೇಕು. ಅರಣ್ಯ ಹೆಚ್ಚಾದರೆ ಮಾತ್ರ ಮಾನವ–ವನ್ಯಜೀವಿ ಸಂಘರ್ಷವನ್ನು ತಗ್ಗಿಸಲು ಸಾಧ್ಯ ಎಂದು ಪ್ರತಿಪಾದಿಸಿದರು.

ಅರಣ್ಯ ಕಾರ್ಯಪಡೆ ಮುಖ್ಯಸ್ಥ ಬ್ರಿಜೇಶ್ ಕುಮಾರ್ ದೀಕ್ಷಿತ್, ಮುಖ್ಯ ವನ್ಯ ಜೀವಿ ಪರಿಪಾಲಕ ಸುಭಾಷ್ ಮಾಲ್ಖಡೆ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ವನ್ಯಜೀವಿ ಛಾಯಾಚಿತ್ರ ಪ್ರದರ್ಶನ ಮತ್ತು ಅಂಚೆ ಚೀಟಿ ಪ್ರದರ್ಶನ ಏರ್ಪಡಿಸಲಾಗಿತ್ತು. ವನ್ಯಜೀವಿ ಸಪ್ತಾಹದ ಅಂಗವಾಗಿ ಹಮ್ಮಿಕೊಂಡಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.



ವನ್ಯಜೀವಿ ಸಪ್ತಾಹದ ಅಂಗವಾಗಿ ಅರಣ್ಯ ಇಲಾಖೆ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳ ವಿಜೇತ ವಿದ್ಯಾರ್ಥಿಗಳಿಗೆ ಅರಣ್ಯ ಸಚಿವ ಈಶ್ವರ್ ಬಿ. ಖಂಡ್ರೆ ಸೋಮವಾರ ಸಪ್ತಾಹದ ಸಮಾರೋಪದಲ್ಲಿ ಬಹುಮಾನ ವಿತರಿಸಿದರು —ಪ್ರಜಾವಾಣಿ ಚಿತ್ರ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನವವರ್ಣ

ಕೆಂಪು ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಮಂಗಳವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...
7338018541


ಹರ್ಷಿತಾ ಮತ್ತು ಗೆಳತಿಯರು


ಪುಷ್ಪಾ ಮತ್ತು ಸ್ನೇಹಿತರು


ಗಂಗಾ ಮತ್ತು ಗೆಳತಿಯರು


ಕೃಪಾನಿಧಿ ಕಾಲೇಜು


ಕವಿತಾ ಮತ್ತು ಸ್ನೇಹಿತರು


AKVK ಯೋಗ ಕೇಂದ್ರ


ಚಾಲ್ತಿವಿಭಾಗ, ನಗರ ಸಿವಿಲ್ ನ್ಯಾಯಾಲಯ


KPTCL ಸಿಬ್ಬಂದಿ


ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ


MCECHS ಲೇಔಟ್


ಕವಿತಾ ಮತ್ತು ಗೆಳತಿಯರು



ಅಲ್ಲಾನಿಕ್ಸ್ ಉದ್ಯೋಗಿಗಳು


CJM ನ್ಯಾಯಾಲಯ


ಲಕ್ಷ್ಮಿ ಮತ್ತು ಗೆಳತಿಯರು


ಆಶಾಕಿರಣ್ ಪಿಯು


ಆಶಾಕಿರಣ್ ಪಿಯು


ಧನ್ವಿತಾ


ಪದ್ಮಾ ಮತ್ತು ಗೆಳತಿಯರು


ಬೆಂಗಳೂರು ಜಲ ಮಂಡಳಿ


ಅನುಷಾ ಮತ್ತು ಗೆಳತಿಯರು


ನೇತ್ರಾವತಿ ಮತ್ತು ಗೆಳತಿಯರು


ಅಕ್ಷಿತಾ ಮತ್ತು ಕುಟುಂಬ


ಬಸವೇಶ್ವರ ನಗರ ಮಹಿಳಾ ಮಂಡಳಿ


DCP ಕಚೇರಿ ಪೂರ್ವ ವಿಭಾಗದ ಸಿಬ್ಬಂದಿ


ಜ್ಯೋತಿ, ಶಾರು


ಸರ್ಕಾರಿ ITI ಸಂಸ್ಥೆ


ಕವಿಪ್ರನಿನಿ B.R.A.Z, ಹೆಬ್ಬಾಳ


ನಾರಾಯಣ ನೇತ್ರಾಲಯ


MES ಎಜುಕೇಶನ್ ಸೊಸೈಟಿ


ಮಾಧಶ್ರೀ


ಪುನರ್ವಿ




ಸರ್ CV ರಾಮನ್ ಜನರಲ್ ಹಾಸ್ಪಿಟಲ್ ಸಿಬ್ಬಂದಿ


ಮ್ಯಾಕ್ಸ್ಮುಲ್ಲರ್ ಕುಟುಂಬ


ಜಯಲಕ್ಷ್ಮಿ ಮತ್ತು ಗೆಳತಿಯರು

ಷೇರುಪೇಟೆ ವಹಿವಾಟು 638



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,014
ಇಂದಿನ ಅಂತ್ಯ	24,795
▼	218
ದಿನದ ಕನಿಷ್ಠ	24,694

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹210
ಆರ್‌ಎಸ್‌ಎಸ್-5 ₹206
ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹196

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹250-535
ದ್ವಿತಳಿ (ಬಿ.ವಿ) ₹255-668

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹15000-15500
ದಾವಣಗೆರೆ	₹8800-8800
ತಿಪಟೂರು	₹15700-16500
ತುರುವೇಕೆರೆ	₹15000-15500

ವಿನಿಮಯ ದರ

$ ಡಾಲರ್	84.00
£ ಪೌಂಡ್	110.12
€ ಯುರೊ	92.20
¥ ಯೆನ್ (100ಕ್ಕೆ)	57

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1510 (1510)
ಸೋಯಾ (ರಿಫೈನ್ಡ್)	₹1290 (1280)
ಸೂರ್ಯಕಾಂತಿ (ರಿಫೈನ್ಡ್)	₹1290 (1280)
ಪಾಮೋಲಿನ್	₹1310 (1310)

ಬಿತ್ತನೆ ವೇಳೆ ಮೊಲಾಸಿಸ್ ಬಳಸಿ ಯಶಸ್ವಿಯಾದ ರೈತ

30 ಗುಂಟೆಗೆ 12 ಕ್ವಿಂಟಲ್ ಸೋಯಾ ಇಳುವರಿ

• ಸುರೇಶ ಮಂಜರಗಿ

ಸಂಕೇಶ್ವರ (ಬೆಳಗಾವಿ ಜಿಲ್ಲೆ): ಸಮೀಪದ ಕುರಣಿ ಗ್ರಾಮದ ರೈತ ಅಡಿವೆಪ್ಪ ಶಿವಪ್ಪ ಕಾಚಿ ಅವರು 30 ಗುಂಟೆ ಜಮೀನಿನಲ್ಲಿ 12 ಕ್ವಿಂಟಲ್ ಸೋಯಾಬಿನ್ ಇಳುವರಿ ಪಡೆದಿದ್ದಾರೆ. ತಾವೇ ಕಾದಿಟ್ಟ ಬಿತ್ತನೆ ಬೀಜಗಳಿಗೆ ಸರಿಯಾಗಿ ಪೋಷಣೆ, ಜತೆಗೆ ಸಕ್ಕರೆ ಕಾರ್ಖಾನೆಯಿಂದ ಹೊರಬರುವ ವ್ಯರ್ಥ ಮೊಲಾಸಿಸ್ ಅನ್ನು ಬಿತ್ತನೆ ವೇಳೆ ಬಳಸುವ ಮೂಲಕ ಈ ಪ್ರಯೋಗದಲ್ಲಿ ಯಶಸ್ವಿಯಾಗಿದ್ದಾರೆ.

ಪ್ರತಿ ವರ್ಷ ರೈತರಿಗೆ ವಿವಿಧ ಕಂಪನಿಗಳು ಬಿತ್ತನೆ ಬೀಜ ನೀಡುತ್ತವೆ. ಆದರೆ, ಅಡಿವೆಪ್ಪ ಕಂಪನಿ ಬೀಜಗಳಿಂದ ದೂರ. ಹಿಂದಿನ ವರ್ಷ ತಾವೇ ಬೆಳೆದ ಬೆಳೆಯಲ್ಲಿನ ಕೆಲ ಭಾಗವನ್ನು ಬಿತ್ತನೆ ಬೀಜಕ್ಕಾಗಿ ಇಟ್ಟುಕೊಳ್ಳುವುದು ಅವರ ರೂಢಿ. ಕಾಯ್ದಿಟ್ಟುಕೊಂಡಿದ್ದ ಸೋಯಾಬಿನ್ ಬೀಜಗಳಿಂದಲೇ ಈಗ ಭರ್ಜರಿ ಇಳುವರಿ ಪಡೆದಿದ್ದಾರೆ.

ಸೋಯಾಬಿನ್‌ಗೆ ನೀರಾವರಿ ಅವಶ್ಯಕತೆ ಇಲ್ಲ ಎಂಬ ಕಾರಣಕ್ಕೆ ಒಣಭೂಮಿಯ ರೈತರೇ ಹೆಚ್ಚಾಗಿ ಬೆಳೆಯುತ್ತಾರೆ. ಸಾಮಾನ್ಯವಾಗಿ ಒಂದು ಎಕರೆಗೆ (40 ಗುಂಟೆ) ಗರಿಷ್ಠ 7ರಿಂದ 8 ಕ್ವಿಂಟಲ್‌ನಷ್ಟು ಇಳುವರಿ ಬರುತ್ತದೆ. ಆದರೆ, ಅಡಿವೆಪ್ಪ ಅವರು ಮಾಡಿದ ಪ್ರಯೋಗ ಉತ್ತಮ ಫಸಲು ನೀಡಿದೆ.



ಅಡಿವೆಪ್ಪ ಶಿವಪ್ಪ ಕಾಚಿ ಅವರ ಹೊಲದಲ್ಲಿ ಹುಲುಸಾಗಿ ಬೆಳೆದ ಸೋಯಾಬಿನ್

ಸೋಯಾ ಬೀಜ ಬಿತ್ತನೆ ಮಾಡುವ ವೇಳೆ ಸಕ್ಕರೆ ಕಾರ್ಖಾನೆಯಿಂದ ಬರುವ ಮೊಲಾಸಿಸ್ ನೀರನ್ನು ಹಾಕಿದ್ದರು. ವಾರದ ಬಳಿಕ ಕೊಟ್ಟಿಗೆ ಗೊಬ್ಬರ ನೀಡಿದ್ದರು. ನಂತರ ಒಂದು ಚೀಲ ಡಿಎಪಿ ಗೊಬ್ಬರ, ತಿಂಗಳ ಬಳಿಕ 19:19:19 ಗೊಬ್ಬರ, ಮೂರನೇ ತಿಂಗಳಿಗೆ 00:00:50 ಪೊಟ್ಯಾಷ್ ಲಿಕ್ವಿಡ್ ಗೊಬ್ಬರ ಉಣಿಸಿದ್ದಾರೆ. ಜೂನ್‌ನಲ್ಲಿ ಬಿತ್ತನೆ ಮಾಡಿದ ಬೆಳೆ ಈಗ ಕಟಾವು ನಡೆದಿದೆ. ಹೊಲದ ತುಂಬೆಲ್ಲ ಸೋಯಾ ಗೊಂಚಲಿನಲ್ಲಿ ದಪ್ಪನೆ ಗಾತ್ರದ ಕಾಯಿಗಳು ಸಮೃದ್ಧವಾಗಿ ಕಟ್ಟಿವೆ.

> **ರೋಗಾಣುಗಳು ಅಂಟಿಕೊಳ್ಳದಂತೆ, ಬೀಜಗಳಿಗೆ ಹೆಚ್ಚು ಪೋಷಣೆ ಸಿಗುವಂತೆ ಮಾಡಲು ನಾನು ಮೊಲಾಸಿಸ್ ಉಪಯೋಗಿಸಿದ್ದೆ**
> **ಅಡಿವೆಪ್ಪ ಶಿವಪ್ಪ ಕಾಚಿ,** ರೈತ

‘ಒಳ್ಳೆಯ ಬೀಜಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಬೇಕು. ಬಿತ್ತನೆ ಮಾಡುವಾಗ ಕೊಟ್ಟಿಗೆ ಗೊಬ್ಬರ ಬಳಸಬೇಕು. ಬೆಳೆ ಮೇಲೆ ಬಂದಾಗ ಸರಿಯಾದ ಸಮಯಕ್ಕೆ ಪೋಷಕಾಂಶಗಳನ್ನು ನೀಡಬೇಕು. ಜತೆಗೆ ಮೊಲಾಸಿಸ್ ಬಳಕೆ ಯಶಸ್ವಿಯಾಗಿದೆ’ ಎನ್ನುವುದು ಅಡಿವೆಪ್ಪ ಅವರ ಅನುಭವ.

ಆಸಕ್ತ ರೈತರು ಅಡಿವೆಪ್ಪ ಅವರನ್ನು (9008718952) ಸಂಪರ್ಕಿಸಬಹುದು.

ಗಾಜಾ: ನೆಮ್ಮದಿ ಕಸಿದ ಒಂದು ವರ್ಷ

ಅವಶೇಷಗಳ ಬೀಡಾದ ಗಾಜಾಪಟ್ಟಿ • ಸೇನಾ ವಾಹನಗಳ ತಗ್ಗದ ಸದ್ದು • ಆರದ ಸೇಡಿನ ಕಿಡಿ

ಗಾಜಾ ಪಟ್ಟಿ (ಎ.ಪಿ): ಈಗ ಇದು ಅವಶೇಷಗಳ ಬೀಡು. ಇಸ್ರೇಲ್‌ನ ಸೇನೆಯ ನಿರಂತರ ದಾಳಿಯಿಂದ ನಲುಗಿಹೋಗಿದೆ. ಕಟ್ಟಡ ಅವಶೇಷಗಳ ರಾಶಿ. ಸಾಂಕ್ರಾಮಿಕ ಭೀತಿ ಮೂಡಿಸಿರುವ, ನಿಂತ ಕಲುಷಿತ ನೀರು. ವಾತಾವರಣವನ್ನು ಆವರಿಸಿರುವ, ಇನ್ನೂ ಪೂರ್ಣ ತೆರವಾಗದ, ಕೊಳೆತ ಶವಗಳಿಂದ ಹೊರಹೊಮ್ಮುವ ದುರ್ವಾಸನೆ. ಈ ಎಲ್ಲದಕ್ಕೂ ಸಾಕ್ಷಿಯಾಗಿ ಅಲ್ಲಲ್ಲಿ ನಿಂತಿರುವ ಫಿರಂಗಿಗಳು.

ಇದು, ಗಾಜಾಪಟ್ಟಿ. ಲಕ್ಷಾಂತರ ಪ್ಯಾಲೆಸ್ಟೀನಿಯರ ನೆಲೆ. ಇದೇ ಗಾಜಾಪಟ್ಟಿಯಲ್ಲಿದ್ದ ಹಮಾಸ್ ಬಂಡುಕೋರರು 2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ನಡೆಸಿದ ಅಪ್ರಚೋದಿತ ದಾಳಿಯ ಒಂದು ವರ್ಷದಲ್ಲಿ ಆಗಿರುವ, ಜನರ ನೆಮ್ಮದಿ ಕಸಿದಿರುವ ‘ಬದಲಾವಣೆ’

ಇಸ್ರೇಲ್ ಮೇಲೆ ಹಮಾಸ್ ಬಂಡುಕೋರರು ಅಪ್ರಚೋದಿತ ದಾಳಿಯ ಹಿಂದೆಯೇ ಪ್ರತಿಯಾಗಿ ಇಸ್ರೇಲ್ ಸೇನೆ ಗಾಜಾಪಟ್ಟಿಯ ಮೇಲೆ ನಿರಂತರ ದಾಳಿ ನಡೆಸಿದೆ. ದಾಳಿಯ ಕಿಚ್ಚು ವರ್ಷದ ನಂತರವೂ ಆರಿಲ್ಲ.

ರಕ್ಷಣಾತ್ಮಕ ಕ್ರಮವಾಗಿ ಇಸ್ರೇಲ್ ಸೇನೆ ನಡೆಸಿದ ದಾಳಿಯನ್ನು ಇತ್ತೀಚಿನ ಇತಿಹಾಸದಲ್ಲಿಯೇ ಭಯಂಕರ ಮತ್ತು ಅತಿ ವಿಧ್ವಂಸಕವಾದ ದಾಳಿ ಎನ್ನಲಾಗಿದೆ. ಕಳೆದ ಒಂದು ವರ್ಷದಲ್ಲಿ ಅಸುನೀಗಿದವರ ಅಧಿಕೃತ ಸಂಖ್ಯೆಯೇ 41,000. ಇವರಲ್ಲಿ ಮಕ್ಕಳು, ಮಹಿಳೆಯರೇ ಅಧಿಕ.

ಲಕ್ಷಾಂತರ ಕುಟುಂಬಗಳು ಮನೆ ತೊರೆದು ವಲಸೆ ಹೋಗಿವೆ. ವಾಪಸು ಗೂಡು ಸೇರಿಕೊಳ್ಳುವ ವಾತಾವರಣ ಇನ್ನೂ ನಿರ್ಮಾಣವಾಗಿಲ್ಲ. ಸಂಘರ್ಷ ನಿಲ್ಲುವ ಸೂಚನೆ ಸದ್ಯ ಕಾಣುತ್ತಿಲ್ಲ. ಗತಸ್ಥಿತಿ ಮರಳಲು ಎಷ್ಟು ವರ್ಷ ಬೇಕು ಎಂಬುದು ಅಂದಾಜಿಗೆ ನಿಲುಕದ ವಿಷಯ.



ಗಾಜಾ ಪಟ್ಟಿಯ ದಕ್ಷಿಣ ಭಾಗವನ್ನು ತೆರವುಗೊಳಿಸಬೇಕು ಎಂಬ ಇಸ್ರೇಲ್ ಸೇನೆಯ ಸೂಚನೆಯಿಂದಾಗಿ ಸೋಮವಾರ ಸಾವಿರಾರು ನಿರಾಶ್ರಿತರು ಖಾನ್ ಯೂನಿಸ್ ನಗರಕ್ಕೆ ಗುಳೆ ಬಂದರು –ಎಎಫ್‌ಪಿ ಚಿತ್ರ

ಒಂದು ವರ್ಷದಲ್ಲಿ ಆಗಿದ್ದು...

ಹಮಾಸ್ ದಾಳಿಯಿಂದ ಇಸ್ರೇಲ್‌ನಲ್ಲಿ ಸತ್ತವರು	1,200
ಹಮಾಸ್ ಒತ್ತೆ ಇರಿಸಿಕೊಂಡ ಇಸ್ರೇಲಿಯನ್ನರು	251
ಇನ್ನೂ ಒತ್ತೆಯಾಳಾಗಿ ಇರುವವರು	66
ಒತ್ತೆಯಾಳಾಗಿದ್ದ ಅವಧಿಯಲ್ಲಿಯೇ ಮೃತಪಟ್ಟವರು	35
ಗಾಜಾದಲ್ಲಿ ಮೃತಪಟ್ಟ ಪ್ಯಾಲೆಸ್ಟೀನಿಯರು	41,000
ಗಾಯಗೊಂಡ ಪ್ಯಾಲೆಸ್ಟೀನಿಯರು	96,000
ಇಸ್ರೇಲ್ ಸೇನೆ ಹತ್ಯೆ ಮಾಡಿದ ಬಂಡುಕೋರರು	17,000
ದಾಳಿ ವೇಳೆ ಮೃತರಾದ ಇಸ್ರೇಲ್‌ನ ಯೋಧರು	720
ಗಾಜಾದಿಂದ ಗುಳೆಹೊರಟ ಪ್ಯಾಲೆಸ್ಟೀನಿಯರು	19 ಲಕ್ಷ
ಗಾಜಾದಲ್ಲಿ ಹಾನಿಗೊಂಡ ನಿರ್ಮಾಣಗಳು	1,20 ಲಕ್ಷ
ಪೂರ್ಣ ಧ್ವಂಸಗೊಳಿಸಲಾದ ಮನೆ, ನಿರ್ಮಾಣಗಳು	2.50 ಲಕ್ಷ

ಹಮಾಸ್‌ನಿಂದ ರಾಕೆಟ್ ದಾಳಿ

ಗಾಜಾಪಟ್ಟಿ (ಎ.ಪಿ): ಹಮಾಸ್ ದಾಳಿ ನಡೆಸಿ ಒಂದು ವರ್ಷ ಕಳೆದ ದಿನದಂತೆ ಗಾಜಾದಲ್ಲಿರುವ, ಪ್ಯಾಲೆಸ್ಟೀನ್ ಬಂಡುಕೋರರು ಇಸ್ರೇಲ್ ಗುರಿಯಾಗಿಸಿ ನಾಲ್ಕು ರಾಕೆಟ್‌ಗಳನ್ನು ಪ್ರಯೋಗಿಸಿದ್ದಾರೆ. ಅಲ್ಲದೆ, ವಿವಿಧೆಡೆ ಇಸ್ರೇಲ್ ಸೇನೆಯನ್ನು ಗುರಿಯಾಗಿಸಿಯೂ ದಾಳಿ ನಡೆಸಲಾಗಿದೆ ಎಂದು ಹಮಾಸ್ ಹೇಳಿಕೊಂಡಿದೆ.

ಗಾಜಾದಿಂದ ಪ್ರಯೋಗಿಸಲಾಗಿದ್ದ ರಾಕೆಟ್‌ಗಳಲ್ಲಿ ಮೂರನ್ನು ಹೊಡೆದುರುಳಿಸಲಾಗಿದೆ. ಒಂದು ರಾಕೆಟ್ ಬಯಲು ಪ್ರದೇಶದಲ್ಲಿ ಬಿದ್ದಿದೆ. ಪ್ರಾಣಹಾನಿ ಸಂಭವಿಸಿಲ್ಲ ಎಂದು ಇಸ್ರೇಲ್ ಸೇನೆ ಹೇಳಿದೆ.

ಸೇನೆ ತುಕಡಿಗಳು ಇನ್ನೂ ಈ ವಲಯದಲ್ಲಿ ಬೀಡು ಬಿಟ್ಟಿದ್ದು, ಲಕ್ಷಾಂತರ ಜನರು ನಿರಾಶ್ರಿತರ ಶಿಬಿರಗಳಲ್ಲಿಯೇ ದಿನ ಕಳೆಯಬೇಕಾಗಿದೆ. ಪರಿಣಿತರ ಪ್ರಕಾರ, ಗಾಜಾಪಟ್ಟಿ ಜನವಸತಿ ಮರು ನಿರ್ಮಾಣಗೊಳ್ಳಲು ದಶಕಗಳೇ ಬೇಕಾಗಬಹುದು.

‘ಈ ಯುದ್ಧ ವಿಧ್ವಂಸಕ ಮತ್ತು ಶೋಚನೀಯವಾದುದು. ಕಲ್ಲೂ ಕೂಡಾ ರೋದಿಸುವಂತಹ ಸ್ಥಿತಿ’ ಎನ್ನುತ್ತಾರೆ ನಿರಾಶ್ರಿತರ ಶಿಬಿರದಲ್ಲಿ ನೆಲೆಸಿರುವ 60 ವರ್ಷದ ಶಿಫಾ ಹೆಜ್ಜೊ. ‘ಗಾಜಾಪಟ್ಟಿಯ ಆ ದಿನಗಳ ಕಂಡವರು ಇಂದು ಕಣ್ಣೀರಿಡುವುದು ಖಚಿತ’ ಎನ್ನುತ್ತಾರೆ.

ಇಂದಿನ ಸ್ಥಿತಿಗೆ ಹಮಾಸ್ ನೇರ ಕಾರಣ ಎಂದು ಇಸ್ರೇಲ್ ಸೇನೆ ದೂಷಿಸುತ್ತದೆ. ಕಳೆದ ಅಕ್ಟೋಬರ್ 7ರಂದು ದಾಳಿ ನಡೆಸಿ 1,200 ಮಂದಿಯನ್ನು ಹತ್ಯೆ ಮಾಡಿ, 250 ಜನರನ್ನು ಒತ್ತೆಯಾಳಾಗಿ ಒಯ್ದಿತ್ತು. ಇದೇ ಯುದ್ಧದ ಕಿಡಿ ಹೊತ್ತಿಸಿತು ಎಂಬುದು ಸೇನೆ ವಾದ. ಹಮಾಸ್ ದಾಳಿ ನಡೆಸಿ, ಇಸ್ರೇಲ್‌ನಲ್ಲಿ ನೂರಾರು ಕಿ.ಮೀ ದೂರದ ಸುರಂಗ, ಮೂಲಸೌಕರ್ಯ ಹಾಳುಗೆಡವಿದೆ ಎನ್ನುತ್ತದೆ ಸೇನೆ.

ಈ ಒಂದು ವರ್ಷದಲ್ಲಿ ಗಾಜಾಪಟ್ಟಿಯಲ್ಲಿ ಶೇ 66ರಷ್ಟು ಕಟ್ಟಡಗಳು ಧ್ವಂಸವಾಗಿವೆ. 2.27 ಲಕ್ಷ ಮನೆಗಳು ನಾಶವಾಗಿವೆ. ಹೆಚ್ಚಿನವು ತೀವ್ರ ಸ್ವರೂಪದಲ್ಲಿ ಹಾನಿಗೊಂಡಿವೆ.

ವಿಶ್ವಬ್ಯಾಂಕ್ ಅಂದಾಜಿಸಿರುವ ಪ್ರಕಾರ, ನಷ್ಟದ ಒಟ್ಟು ಮೊತ್ತ 18.5 ಬಿಲಿಯನ್ ಡಾಲರ್‌ಗಳು. ಇದು, ವೆಸ್ಟ್‌ಬ್ಯಾಂಕ್ ಮತ್ತು ಗಾಜಾದ 2022ರ ವರ್ಷದ ಒಟ್ಟು ಹಣಕಾಸು ಮೊತ್ತಕ್ಕೆ ಸಮನಾದುದು. ಸುಮಾರು 23 ಲಕ್ಷ ಜನರು ಅತಂತ್ರರಾಗಿದ್ದಾರೆ.

ಗಾಜಾದಲ್ಲಿ ಮೂಡಿರುವ ಅವಶೇಷಗಳ ತೂಕವೇ ಸುಮಾರು 4 ಕೋಟಿ ಟನ್ ಆಗಿದೆ. ಈ ಅವಶೇಷಗಳನ್ನು ತೆರವುಗೊಳಿಸುವುದಕ್ಕಾಗಿಯೇ 15 ವರ್ಷ ಬೇಕು ಎಂಬುದು ವಿಶ್ವಸಂಸ್ಥೆಯ ಅಂದಾಜು.

ಲೆಬನಾನ್‌ನ 10 ಅಗ್ನಿಶಾಮಕ ಸಿಬ್ಬಂದಿ ಸಾವು

ಬೈರೂತ್ (ಎ.ಪಿ): ಇಸ್ರೇಲ್ ಸೇನೆಯು ಬೈರೂತ್ ನಗರದ ಮೇಲೆ ಸೋಮವಾರ ವಾಯುದಾಳಿ ನಡೆಸಿದ್ದು, 10 ಮಂದಿ ಅಗ್ನಿಶಾಮಕ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ತಿಳಿಸಿದೆ.

ಅಗ್ನಿಶಾಮಕ ಸಿಬ್ಬಂದಿ ನೆಲಸಿದ್ದ ಕಟ್ಟಡದ ಮೇಲೆದಾಳಿಯಾಗಿದೆ. ಅವಶೇಷಗಳಡಿ ಹಲವರು ಸಿಲುಕಿದ್ದು, ಸಾವಿನ ಸಂಖ್ಯೆ ಏರಬಹುದೆಂದು ಅದು ಹೇಳಿದೆ.

ದಕ್ಷಿಣ ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಉಗ್ರರ 120 ನೆಲೆಗಳನ್ನು ಸೋಮವಾರ ಒಂದೇ ತಾಸಿನಲ್ಲಿ ಧ್ವಂಸಗೊಳಿಸಿರುವುದಾಗಿ ಇಸ್ರೇಲ್ ಸೇನೆ ಹೇಳಿದೆ.

> **ಅಕ್ಟೋಬರ್ 7 ಅನ್ನು ಪ್ಯಾಲೆಸ್ಟೀನಿಯರ ಪಾಲಿನ ಕರಾಳ ದಿನವಾಗಿಯೂ ಇತಿಹಾಸ ಸ್ಮರಿಸುತ್ತದೆ. ಇದಕ್ಕೆ ಆ ದಿನದಂದು ಸಂಘರ್ಷವನ್ನು ಆರಂಭಿಸಿದ ಹಮಾಸ್ ಕಾರಣ. ಈ ಒಂದು ವರ್ಷದಲ್ಲಿ ಹಲವು ನಾಗರಿಕರು ಸಾಕಷ್ಟು ನೋವು ಅನುಭವಿಸಿದ್ದಾರೆ.**
> **ಜೋ ಬೈಡನ್,** ಅಮೆರಿಕ ಅಧ್ಯಕ್ಷ

> **ನೋವು ಶಮನವಾಗಿಲ್ಲ. ಒಂದು ವರ್ಷದ ಹಿಂದೆ ಇದ್ದಷ್ಟೇ ಈಗಲೂ ಹಸಿಯಾಗಿದೆ. ಇಸ್ರೇಲ್ ನಾಗರಿಕರ ನೋವು ನಮ್ಮದೂ ಆಗಿದೆ.**
> **ಇಮ್ಯಾನುಯೆಲ್ ಮ್ಯಾಕ್ರನ್**
> ಫ್ರಾನ್ಸ್ ಪ್ರಧಾನಿ

> **ಅಂತರರಾಷ್ಟ್ರೀಯ ಮಟ್ಟದಲ್ಲಿ ಇಸ್ರೇಲ್‌ನ ಸ್ಥಾನಕ್ಕೆ ತೀವ್ರ ಧಕ್ಕೆಯಾಗಿದೆ. ತೀವ್ರ ಪೆಟ್ಟು ತಿಂದಿದೆ ಎಂದುಕೊಂಡಿದ್ದ ದೇಶವೇ ಈಗ ಜನರನ್ನು ಶಿಕ್ಷಿಸುವ ದೇಶವಾಗಿದೆ**
> **ಬಿಗ್ನ್ಯೂ ಜೆಜಿನ್‌ಸ್ಕಿ**
> ಅಮೆರಿಕದ ಮಾಜಿ ಭದ್ರತಾ ಸಲಹೆಗಾರ

> **ನಾವು ನಮ್ಮ ಮಕ್ಕಳ ಹಿತದೃಷ್ಟಿ, ಹಾಗೂ ದೇಶದ ಭವಿಷ್ಯಕ್ಕಾಗಿ ಈ ವಲಯದ ಭದ್ರತೆಯ ಸ್ವರೂಪವನ್ನೇ ಬದಲಿಸುತ್ತಿದ್ದೇವೆ. ಅಕ್ಟೋಬರ್ 7, 2023ರ ಘಟನೆ ಮತ್ತೆಂದೂ ಮರುಕಳಿಸಬಾರದು**
> **ಬೆಂಜಮಿನ್ ನೆತನ್ಯಾಹು,** ಪ್ರಧಾನಮಂತ್ರಿ, ಇಸ್ರೇಲ್

ಕರಾಚಿ: ಬಾಂಬ್ ದಾಳಿಗೆ ಚೀನಾದ ಇಬ್ಬರು ಸಾವು

ಕರಾಚಿ (ಪಿಟಿಐ): ಪಾಕಿಸ್ತಾನದ ಕರಾಚಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೊರವಲಯದಲ್ಲಿ ಭಾನುವಾರ ತಡರಾತ್ರಿ ಬಾಂಬ್ ದಾಳಿ ನಡೆದಿದ್ದು, ಇಬ್ಬರು ಚೀನಾ ಪ್ರಜೆಗಳು ಮೃತಪಟ್ಟಿದ್ದಾರೆ. ದಾಳಿಯ ಹೊಣೆಯನ್ನು ಬಲೂಚ್ ಲಿಬರೇಶನ್ ಆರ್ಮಿ (ಬಿಎಲ್‌ಎ) ಹೊತ್ತುಕೊಂಡಿದೆ.

ಬಲೂಚಿಸ್ತಾನ ಪ್ರತ್ಯೇಕತಾವಾದಿ ಸಂಘಟನೆಯಾಗಿರುವ ಬಿಎಲ್‌ಎ, ಚೀನಾ ಪ್ರಜೆಗಳನ್ನು ಗುರಿಯಾಗಿಸಿ ಆತ್ಮಾಹುತಿ ದಾಳಿ ನಡೆಸಿರುವುದಾಗಿ ಸೋಮವಾರ ತಿಳಿಸಿದೆ. ಘಟನೆಯಲ್ಲಿ ಬೆಂಗಾವಲು ಪಡೆ ಸಿಬ್ಬಂದಿ ಸಹಿತ ಎಂಟು ಮಂದಿ ಗಾಯಗೊಂಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಮೃತರು ಚೀನಾದ ಸಹಕಾರದೊಂದಿಗೆ ಪಾಕಿಸ್ತಾನ ಆರಂಭಿಸಿರುವ ಪೋರ್ಟ್ ಕಾಸಿಂ ಉಷ್ಣ ವಿದ್ಯುತ್ ಸ್ಥಾವರದಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಎಂದು ಚೀನಾ ರಾಯಭಾರ ಕಚೇರಿ ತಿಳಿಸಿದೆ.

ಚೀನಾ ಮುಂದಾಳತ್ವದ ಶಾಂಘೈ ಸಹಕಾರ ಸಂಸ್ಥೆಯ ಶೃಂಗಸಭೆಯು ಪಾಕಿಸ್ತಾನದಲ್ಲಿ ಇದೇ 15 ಮತ್ತು 16ರಂದು ನಡೆಯಲಿದೆ.

ಪ್ರಶಾಂತ್ ಕುಮಾರ್ ಎಎಐ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೂಪ್‌ಎಂ ಮೀಡಿಯಾ (ಇಂಡಿಯಾ) ಪ್ರೈ. ಲಿಮಿಟೆಡ್‌ನ ದಕ್ಷಿಣ ಏಷ್ಯಾ ವಿಭಾಗದ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ (ಸಿಇಒ) ಪ್ರಶಾಂತ್ ಕುಮಾರ್ ಅವರು ಭಾರತೀಯ ಜಾಹೀರಾತು ಏಜೆನ್ಸಿಗಳ ಒಕ್ಕೂಟದ (ಎಎಎಐ) 2024–25ನೇ ಸಾಲಿನ ಅಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ.

ಮುಂಬೈನಲ್ಲಿ ನಡೆದ ಒಕ್ಕೂಟದ ವಾರ್ಷಿಕ ಸಭೆಯಲ್ಲಿ ಕುಮಾರ್ ಅವರ ಆಯ್ಕೆ ನಡೆದಿದೆ ಎಂದು ಪ್ರಕಟಣೆ ತಿಳಿಸಿದೆ. ಹವಸ್ ಇಂಡಿಯಾದ ಗ್ರೂಪ್ ಸಿಇಒ ರಾಣಾ ಬರುವಾ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. 2022–23ನೇ ಸಾಲಿನಲ್ಲೂ ಪ್ರಶಾಂತ್ ಕುಮಾರ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ನಿಕಟಪೂರ್ವ ಅಧ್ಯಕ್ಷೆ, ಅನುಪ್ರಿಯಾ ಆಚಾರ್ಯ ಅವರು ಇದೇ ಅವಧಿಗೆ ಮಂಡಳಿಯ ಪದನಿಮಿತ್ತ ಸದಸ್ಯೆಯಾಗಿದ್ದಾರೆ.

ಸದಸ್ಯರಾಗಿ ಮ್ಯಾಡಿಸನ್ ಕಮ್ಯುನಿಕೇಷನ್‌ನ ಸ್ಯಾಮ್ ಬಲ್ಸಾರಾ, ಎವರೆಸ್ಟ್ ಬ್ರ್ಯಾಂಡ್ ಸಲ್ಯೂಷನ್ಸ್‌ನ ತಾನ್ಯಾ ಗೋಯಲ್, ಬಿಇಐ ಕನ್ಫ್ಲುಯೆನ್ಸ್ ಕಮ್ಯುನಿಕೇಷನ್‌ನ ತಪಸ್ ಗುಪ್ತಾ, ಮ್ಯಾಟ್ರಿಕ್ಸ್ ಪಬ್ಲಿಸಿಟೀಸ್ ಆ್ಯಂಡ್ ಮೀಡಿಯಾ ಇಂಡಿಯಾದ ವಿಶಾಂದಾಸ್ ಹರ್ದಸಾನಿ, ಹವಸ್ ಮೀಡಿಯಾ ಇಂಡಿಯಾದ ಮೋಹಿತ್ ಜೋಶಿ, ಇನ್ನೋಸಿಯನ್ ವರ್ಲ್ಡ್‌ವೈಡ್ ಕಮ್ಯುನಿಕೇಷನ್‌ನ ಸಂತೋಷ್‌ಕುಮಾರ್, ಕ್ರಯೋನ್ಸ್ ಅಡ್ವರ್ಟೈಸಿಂಗ್‌ನ ಕುನಾಲ್ ಲಲಾನಿ, ಕಿನೆಕ್ಟ್‌ನ ರೋಹನ್ ಮೆಹ್ತಾ, ಕೊಚ್ಚಿನ್‌ನ ಮೈತ್ರಿ ಅಡ್ವರ್ಟೈಸಿಂಗ್ ವರ್ಕ್ಸ್‌ನ ಚಂದ್ರಮೌಳಿ ಮುತ್ತು ಪ್ಲಾಟಿನಂ ಅಡ್ವರ್ಟೈಸಿಂಗ್‌ನ ವಿಕ್ರಮ್ ಸಖುಜಾ, ಸ್ಟ್ಯಾಂಡರ್ಡ್ ಪಬ್ಲಿಸಿಟಿಯ ಕಲ್ಯಾಣ್ ಸರ್ಕಾರ್ ಮತ್ತು ಹೈದರಾಬಾದ್‌ನ ಶ್ಲೋಕ ಅಡ್ವರ್ಟೈಸಿಂಗ್‌ನ ಕೆ.ಶ್ರೀನಿವಾಸ್ ಅವರು ಆಯ್ಕೆಯಾಗಿದ್ದಾರೆ.



ಪ್ರಶಾಂತ್ ಕುಮಾರ್

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	19000-28500
ಹಳತು	40500-48000
ಚಿತ್ರದುರ್ಗ	
ಅಪಿ	48119-48559
ಬೆಟ್ಟೆ	32629-33069
ಕೆಂಪುಗೋಟು	27449-27810
ರಾಶಿ	47639-48099
ಕುಮಟ	
ಚಿಪ್ಪು	23019-26019
ಕೋಕ	6099-22099
ಫ್ಯಾಕ್ಟರಿ	3019-16269
ಹಳೆಚಾಲಿ	36699-38939
ಹೊಸಚಾಲಿ	30199-34399
ಪುತ್ತೂರು	
ಹೊಸತು	26000-31000
ಹಳತು	32000-48000
ಸಾಗರ	
ಬಿಳಿಗೋಟು	10199-25509
ಚಾಲಿ	27119-32909
ಕೋಕ	10521-24001
ಕೆಂಪುಗೋಟು	16019-35029
ರಾಶಿ	30899-49109
ಸಿಪ್ಪೆಗೋಟು	9000-16611
ಶಿವಮೊಗ್ಗ	
ಬೆಟ್ಟೆ	36366-55399
ಗೊರಬಲು	13181-32219
ಹೊಸತು	45059-46559
ರಾಶಿ	28100-49050
ಸರಕು	55169-78799
ಸಿದ್ದಾಪುರ	
ಬಿಳಿಗೋಟು	24619-28899
ಚಾಲಿ	31309-34109
ಕೋಕ	21019-26289
ಕೆಂಪುಗೋಟು	21709-22199
ರಾಶಿ	40099-45929
ತಟ್ಟಿಬೆಟ್ಟೆ	31099-43569
ಶಿರಸಿ	
ಬೆಟ್ಟೆ	27921-37009
ಬಿಳಿಗೋಟು	20899-30298
ಚಾಲಿ	32315-36201
ರಾಶಿ	40709-44589
ಯಲ್ಲಾಪುರ	
ಬಿಳಿಗೋಟು	15499-28490
ಚಾಲಿ	29299-34640
ಕೋಕ	4141-14299
ಕೆಂಪುಗೋಟು	16012-22099
ರಾಶಿ	38333-52000
ತಟ್ಟಿಬೆಟ್ಟೆ	26899-33400

ಷೇರುಪೇಟೆ: ನಿಲ್ಲದ ಕರಡಿ ಕುಣಿತ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದು ಮತ್ತು ವಿದೇಶಿ ಬಂಡವಾಳದ ಹೊರಹರಿವಿನಿಂದ ಸೋಮವಾರದ ವಹಿವಾಟಿನಲ್ಲೂ ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ.

ಸತತ ಆರನೇ ದಿನದ ವಹಿವಾಟಿನಲ್ಲೂ ಕರಡಿ ಕುಣಿತ ಮುಂದುವರಿದಿದೆ. ಇದರಿಂದ ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯ ₹8.90 ಲಕ್ಷ ಕೋಟಿ ಇಳಿಕೆಯಾಗಿದ್ದು, ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯ ₹451 ಲಕ್ಷ ಕೋಟಿ ಆಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 638 ಅಂಶ ಇಳಿಕೆಯಾಗಿ, 81,050ಕ್ಕೆ ಸ್ಥಿರಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 218 ಅಂಶ ಕಡಿಮೆಯಾಗಿ 24,795ಕ್ಕೆ ವಹಿವಾಟು ಅಂತ್ಯಗೊಂಡಿದೆ.



ವಿದ್ಯುತ್‌ಚಾಲಿತ ವಾಹನ ತಯಾರಿಕಾ ಕಂಪನಿ ಓಲಾದ ಷೇರಿನ ಮೌಲ್ಯ ಶೇ 8ರಷ್ಟು ಇಳಿದಿದೆ. ಅದಾನಿ ಪೋರ್ಟ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ಸ್, ಎನ್‌ಟಿಪಿಸಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪವರ್‌ಗ್ರಿಡ್, ಇಂಡಸ್‌ಇಂಡ್ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಟೈಟನ್ ಮತ್ತು ಅಲ್ಟ್ರಾಟೆಕ್ ಸಿಮೆಂಟ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಮಹೀಂದ್ರಾ ಆ್ಯಂಡ್ ಮಹೀಂದ್ರಾ, ಐಟಿಸಿ, ಭಾರ್ತಿ ಏರ್‌ಟೆಲ್, ಇನ್ಫೊಸಿಸ್, ಬಜಾಜ್ ಫೈನಾನ್ಸ್, ಟಿಸಿಎಸ್ ಮತ್ತು ಟೆಕ್ ಮಹೀಂದ್ರ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಶೇ 2.09ರಷ್ಟು ಏರಿಕೆಯಾಗಿದೆ. ಪ್ರತಿ ಬ್ಯಾರೆಲ್‌ಗೆ 79.68 ಡಾಲರ್‌ಗೆ (₹6,692) ತಲುಪಿದೆ. ಏಷ್ಯಾದ ಮಾರುಕಟ್ಟೆಯಲ್ಲಿ ಟೋಕಿಯೊ, ಶಾಂಘೈ, ಹಾಂಗ್‌ಕಾಂಗ್ ಮತ್ತು ಸೋಲ್ ಸಕಾರಾತ್ಮಕ ವಹಿವಾಟು ನಡೆಸಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರದ ವಹಿವಾಟಿನಲ್ಲಿ ₹9,896 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇದೇ ವೇಳೆ ದೇಶಿ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ₹8,905 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

‘2030ರ ವೇಳೆಗೆ ದೇಶದ ವಿಮಾನ ಪ್ರಯಾಣಿಕರ ಸಂಖ್ಯೆ 30 ಕೋಟಿ’

ನವದೆಹಲಿ (ಪಿಟಿಐ): ದೇಶದ ವಿಮಾನ ಪ್ರಯಾಣಿಕರ ಸಂಖ್ಯೆ 2030ರ ವೇಳೆಗೆ 30 ಕೋಟಿಗೆ ತಲುಪುವ ನಿರೀಕ್ಷೆ ಇದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ್ ನಾಯ್ಡು ಸೋಮವಾರ ಹೇಳಿದ್ದಾರೆ.

ದೇಶದ ವಿಮಾನ ನಿಲ್ದಾಣಗಳ ಅಭಿವೃದ್ಧಿಗೆ ₹92 ಸಾವಿರ ಕೋಟಿಗೂ ಹೆಚ್ಚು ಖರ್ಚು ಮಾಡಲಾಗುತ್ತಿದೆ. ಭಾರತ ಮತ್ತು ಫ್ರಾನ್ಸ್ ದೃಢವಾದ ಜಾಗತಿಕ ಸುಸ್ಥಿರ ವಿಮಾನ ಇಂಧನ (ಎಸ್‌ಎಎಫ್) ಪೂರೈಕೆಯನ್ನು ಅಭಿವೃದ್ಧಿಪಡಿಸಲು ಒಟ್ಟಾಗಿ ಕೆಲಸ ಮಾಡಲಿದೆ ಎಂದು ಇಲ್ಲಿ ಆಯೋಜಿಸಿದ್ದ ಫ್ರೆಂಚ್ ಏರೋಸ್ಪೇಸ್ ಇಂಡಸ್ಟ್ರೀಸ್ ಅಸೋಸಿಯೇಷನ್ (ಜಿಐಎಫ್‌ಎಎಸ್) ಕಾರ್ಯಕ್ರಮದಲ್ಲಿ ಹೇಳಿದರು.



ಭಾರತವು ಜಗತ್ತಿನಲ್ಲಿ ನಾಗರಿಕ ವಿಮಾನಯಾನ ಮಾರುಕಟ್ಟೆಗಳಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಹೆಚ್ಚುತ್ತಿರುವ ಬೇಡಿಕೆಗೆ ವಿಮಾನಯಾನ ಸಂಸ್ಥೆಗಳು ವಿಮಾನಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿವೆ ಎಂದರು. ಪ್ರಸ್ತುತ ದೇಶದಲ್ಲಿ 157 ವಿಮಾನ ನಿಲ್ದಾಣ, ಹೆಲಿಪೋರ್ಟ್ ಮತ್ತು ವಾಟರ್ ಡ್ರೋಮ್‌ಗಳು ಇವೆ. 2025ರ ಅಂತ್ಯದ ವೇಳೆಗೆ ವಿಮಾನ ನಿಲ್ದಾಣಗಳ ಸಂಖ್ಯೆ 200ಕ್ಕೆ ಏರಿಕೆಯಾಗುವ ಅಂದಾಜಿದೆ ಎಂದು ಹೇಳಿದರು.

ಮುಂಬೈ ಧಾರಣೆ (ಶೇಂಗಾ)
07-10-2024

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1520)
ಒಂದು ವಾರದ ಡೆಲಿವರಿ	1515 (1515)
ಪಾಮ್ ವಾರದ ಡೆಲಿವರಿ	1308 (1305)
ಸೂರ್ಯಕಾಂತಿ ಎಣ್ಣೆ ಕಚ್ಚಾ	1210 (1205)


ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹**75,700** (75,700)
ಬೆಳ್ಳಿ ಕೆ.ಜಿ ₹**92,100** (92,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಆರೋಗ್ಯವಾಗಿದ್ದೇನೆ: ರತನ್ ಟಾಟಾ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಕೈಗಾರಿಕೋದ್ಯಮಿ ಮತ್ತು ಟಾಟಾ ಸನ್ಸ್ ಅಧ್ಯಕ್ಷ ರತನ್ ಟಾಟಾ (86) ಅವರು ವೈದ್ಯಕೀಯ ತಪಾಸಣೆಗೆ ಸೋಮವಾರ ಒಳಗಾಗಿದ್ದಾರೆ.



ರತನ್ ಟಾಟಾ

ಈ ಕುರಿತು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ರತನ್ ಟಾಟಾ, ‘ನಾನು ಮುಂಬೈನ ಆಸ್ಪತ್ರೆಯೊಂದರಲ್ಲಿ ದಾಖಲಾಗಿರುವುದು ಸುಳ್ಳು. ವಯೋಸಂಬಂಧ ವೈದ್ಯಕೀಯ ತಪಾಸಣೆಗೆ ಒಳಗಾಗಿರುವೆ. ನಾನು ಆರೋಗ್ಯವಾಗಿದ್ದೇನೆ. ಸಾರ್ವಜನಿಕರು ಮತ್ತು ಮಾಧ್ಯಮಗಳು ತಪ್ಪು ಮಾಹಿತಿ ಹರಡಬೇಡಿ’ ಎಂದು ಹೇಳಿದ್ದಾರೆ.


ರಕ್ತದೊತ್ತಡ ಕಡಿಮೆಯಾದ ಕಾರಣ ರತನ್ ಟಾಟಾ ಅವರನ್ನು ಸೋಮವಾರ ಮುಂಜಾನೆ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ಕರೆದೊಯ್ಯಲಾಯಿತು ಎಂದು ಮಾಧ್ಯಮಗಳು ವರದಿ ಮಾಡಿದ್ದವು.

ಜನಗಣತಿ ವಿಳಂಬ ಏಕೆ: ಕಾಂಗ್ರೆಸ್ ಪ್ರಶ್ನೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಜನಗಣತಿ ನಡೆಸಲು ವಿಳಂಬ ನೀತಿ ಅನುಸರಿಸುತ್ತಿರುವುದು ಏಕೆ ಎಂದು ಕಾಂಗ್ರೆಸ್ ಸೋಮವಾರ ಪ್ರಶ್ನಿಸಿದೆ.

ಜಾತಿಗಣತಿ ಮೂಲಕ ಮಾತ್ರ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ಸ್ಥಾಪಿಸಲು ಸಾಧ್ಯ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಹೇಳಿದ್ದಾರೆ.

'ಆರ್ಥಿಕ ಬಿಕ್ಕಟ್ಟು ಮತ್ತು ರಾಜಕೀಯ ಪ್ರಕ್ಷುಬ್ಧತೆ ನಡುವೆಯೂ ಶ್ರೀಲಂಕಾ ಇತ್ತೀಚೆಗೆ ಜನಸಂಖ್ಯೆ ಮತ್ತು ವಸತಿ ಗಣತಿಯ ಮಾಹಿತಿಯನ್ನು ಬಹಿರಂಗಪಡಿಸಿದೆ. ಆದರೆ ಭಾರತದಲ್ಲಿ ಇನ್ನೂ ವಿಳಂಬ ನೀತಿಯನ್ನು ಅನುಸರಿಸಲಾಗುತ್ತಿದೆ. 2021ರಲ್ಲಿಯೇ ದಶವಾರ್ಷಿಕ ಜನಗಣತಿ ನಡೆಯಬೇಕಿತ್ತು, ಆದರೆ ಇದುವರೆಗೂ ನಡೆದಿಲ್ಲ, ನಡೆಸುವ ಸೂಚನೆಯೂ ಕಾಣುತ್ತಿಲ್ಲ' ಎಂದು ಅವರು ‘ಎಕ್ಸ್’ನಲ್ಲಿ ಹೇಳಿದ್ದಾರೆ.



ಜೈರಾಮ್ ರಮೇಶ್

‘10 ಕೋಟಿಗೂ ಅಧಿಕ ಭಾರತೀಯರು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ– 2013 ಅಥವಾ ಪಿ.ಎಂ ಗರೀಬ್ ಕಲ್ಯಾಣ್ ಅನ್ನ ಯೋಜನೆ ಅಡಿಯಲ್ಲಿ ಸಿಗಬೇಕಾದ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಎಂದು ಹೇಳಿದ್ದಾರೆ.

ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದಂತೆ 1951ರಿಂದ ಪ್ರತಿ ಹತ್ತು ವರ್ಷಗಳಿಗೊಮ್ಮೆ ಜನಗಣತಿ ನಡೆಯುತ್ತಿದೆ. ಆದರೆ ಹಿಂದುಳಿದ ವರ್ಗ ಮತ್ತು ಇತರೆ ಜಾತಿಗಳ ವಿಚಾರವಾಗಿಯೂ ಇಂಥದ್ದೇ ಜನಗಣತಿಯ ಅಗತ್ಯ ಇದೆ ಎಂದು ಒತ್ತಿ ಹೇಳಿದರು.

ಜನಗಣತಿಯಲ್ಲಿ ಜಾತಿ ಸಂಬಂಧಿತ ವಿಷಯಗಳನ್ನು ಸೇರಿಸುವ ಬಗ್ಗೆ ಕಾಂಗ್ರೆಸ್ ಸೇರಿದಂತೆ ಇತರೆ ಎಲ್ಲಾ ರಾಜಕೀಯ ಪಕ್ಷಗಳ ಒತ್ತಾಯಿಸಿದರೂ ಈವರೆಗೂ ಉತ್ತರವೇ ಸಿಕ್ಕಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಮೈಕ್ರೋಆರ್‌ಎನ್‌ಎ’ ಆವಿಷ್ಕಾರಕ್ಕಾಗಿ ಅಮೆರಿಕದ ವಿಜ್ಞಾನಿಗಳಿಗೆ ಸಂದ ಗೌರವ

ಆ್ಯಂಬ್ರೋಸ್, ರುವ್ಕನ್‌ಗೆ ವೈದ್ಯಕೀಯ ನೊಬೆಲ್

ಸ್ಟಾಕ್‌ಹೋಮ್ (ಎಪಿ): ಕ್ಯಾನ್ಸರ್‌ಗೆ ಹೊಸ ವಿಧಾನದಲ್ಲಿ ಚಿಕಿತ್ಸೆ ನೀಡಲು ಸಾಧ್ಯವಾಗಬಲ್ಲ ‘ಮೈಕ್ರೋಆರ್‌ಎನ್‌ಎ’ ಆವಿಷ್ಕಾರಕ್ಕಾಗಿ ಅಮೆರಿಕದ ವಿಕ್ಟರ್ ಆ್ಯಂಬ್ರೋಸ್ ಮತ್ತು ಗ್ಯಾರಿ ರುವ್ಕನ್ ಅವರಿಗೆ ಈ ಬಾರಿಯ ವೈದ್ಯಕೀಯ ಕ್ಷೇತ್ರದ ನೊಬೆಲ್ ಪುರಸ್ಕಾರ ಘೋಷಿಸಲಾಗಿದೆ.

‘ಇವರಿಬ್ಬರ ಹೊಸ ಆವಿಷ್ಕಾರವು ಜೀನ್‌ಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಹೊಸ ಸಿದ್ಧಾಂತವನ್ನು ಜಗತ್ತಿನ ಮುಂದಿಟ್ಟಿದೆ’ ಎಂದು ಆಯ್ಕೆ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಆ್ಯಂಬ್ರೋಸ್ ಅವರು ತಮಗೆ ನೊಬೆಲ್ ಪುರಸ್ಕಾರ ತಂದುಕೊಟ್ಟ ಸಂಶೋಧನೆಯನ್ನು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ನಡೆಸಿದ್ದಾರೆ. ಅವರು ಪ್ರಸ್ತುತ ಮೆಸಾಚುಸೆಟ್ಸ್ ಮೆಡಿಕಲ್ ಸ್ಕೂಲ್‌ನಲ್ಲಿ ನ್ಯಾಚುರಲ್ ಸೈನ್ಸ್ ವಿಷಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ರುವ್ಕನ್ ಅವರು ಮೆಸಾಚುಸೆಟ್ಸ್ ಜನರಲ್ ಹಾಸ್ಪಿಟಲ್ ಮತ್ತು ಹಾರ್ವರ್ಡ್ ಮೆಡಿಕಲ್ ಸ್ಕೂಲ್‌ನಲ್ಲಿ ಸಂಶೋಧನೆ ಕೈಗೊಂಡಿದ್ದಾರೆ ಎಂದು ನೊಬೆಲ್ ಪ್ರಶಸ್ತಿ ಸಮಿತಿಯ ಕಾರ್ಯದರ್ಶಿ ಥಾಮಸ್ ಪರ್ಲ್‌ಮನ್ ಹೇಳಿದ್ದಾರೆ.



ವಿಕ್ಟರ್ ಆ್ಯಂಬ್ರೋಸ್



ಗ್ಯಾರಿ ರುವ್ಕನ್

‘ಕೋಶಗಳ ಮಟ್ಟದಲ್ಲಿ ಜೀನ್‌ಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ನಿಯಂತ್ರಿಸಲು ಸಹಾಯ ಮಾಡುವ ಮೂಲಕ ಕ್ಯಾನ್ಸರ್‌ನಂತಹ ಕಾಯಿಲೆಗಳಿಗೆ ಹೊಸ ವಿಧಾನದ ಚಿಕಿತ್ಸೆ ಕಂಡುಹಿಡಿಯುವ ಅವಕಾಶವನ್ನು ಮೈಕ್ರೋಆರ್‌ಎನ್‌ಎ, ವಿಜ್ಞಾನಿಗಳ ಮುಂದಿಟ್ಟಿದೆ’ ಎಂದು ಇಂಪೀರಿಯಲ್ ಕಾಲೇಜ್ ಲಂಡನ್‌ನ ಉಪನ್ಯಾಸಕಿ ಡಾ.ಕ್ಲೇರ್ ಫ್ಲೆಚರ್ ತಿಳಿಸಿದ್ದಾರೆ.

ವೈದ್ಯಕೀಯ ನೊಬೆಲ್ ವಿಜೇತರ ಹೆಸರು ಪ್ರಕಟಿಸುವುದರೊಂದಿಗೆ ಈ ವರ್ಷದ ನೊಬೆಲ್ ಪುರಸ್ಕಾರ ಘೋಷಣೆಗೆ ಚಾಲನೆ ಸಿಕ್ಕಂತಾಗಿದೆ.

ಭೌತವಿಜ್ಞಾನ ಮತ್ತು ರಸಾಯನವಿಜ್ಞಾನದ ಪ್ರಶಸ್ತಿ ವಿಜೇತರ ಹೆಸರನ್ನು ಕ್ರಮವಾಗಿ ಮಂಗಳವಾರ ಹಾಗೂ ಬುಧವಾರ ಪ್ರಕಟಿಸಲಾಗುತ್ತದೆ. ಸಾಹಿತ್ಯ ಕ್ಷೇತ್ರದ ಪುರಸ್ಕಾರವನ್ನು ಗುರುವಾರ ಹಾಗೂ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಶುಕ್ರವಾರ ಘೋಷಿಸಲಾಗುತ್ತದೆ.

ನೊಬೆಲ್ ಪ್ರಶಸ್ತಿಯು 10 ಲಕ್ಷ ಅಮೆರಿಕನ್ ಡಾಲರ್ (ಸುಮಾರು ₹8.39 ಕೋಟಿ) ನಗದು ಬಹುಮಾನ ಒಳಗೊಂಡಿದೆ.

ನಿವೃತ್ತಿ ಘೋಷಿಸಿದ 'ಪ್ರೊಡೊನೊವಾ ರಾಣಿ' • ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದ ತಾರೆ

ಜಿಮ್ನಾಸ್ಟಿಕ್ಸ್: ಅಪ್ರತಿಮ ಸಾಧಕಿ ದೀಪಾ

ನವದೆಹಲಿ (ಪಿಟಿಐ): ಒಲಿಂಪಿಕ್ ಕೂಟದ ಮಹಿಳೆಯರ ಜಿಮ್ನಾಸ್ಟಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ ಭಾರತದ ಮೊದಲ ಜಿಮ್ನಾಸ್ಟ್ ದೀಪಾ ಕರ್ಮಾಕರ್ ಸೋಮವಾರ ನಿವೃತ್ತಿ ಘೋಷಿಸಿದ್ದಾರೆ.

ಜಿಮ್ನಾಸ್ಟಿಕ್ಸ್‌ನಲ್ಲಿ ಅತ್ಯಂತ ಕಠಿಣ ವಿಭಾಗವಾದ ಪ್ರೊಡೊನೊವಾ ವಾಲ್ಟ್‌ನಲ್ಲಿ ಅವರು ಸಾಧನೆ ಮೆರೆದಿದ್ದರು. ಅದಕ್ಕಾಗಿಯೇ ಅವರನ್ನು 'ಪ್ರೊಡೊನೊವಾ ರಾಣಿ' ಎಂದೇ ಕರೆಯಲಾಗುತ್ತದೆ.

'ಬಹಳಷ್ಟು ಚಿಂತನ-ಮಂಥನ ನಡೆಸಿದ ನಂತರ ಸ್ಪರ್ಧಾತ್ಮಕ ಜಿಮ್ನಾಸ್ಟಿಕ್ಸ್‌ನಿಂದ ನಿವೃತ್ತಿಯಾಗಲು ನಿರ್ಧರಿಸಿದ್ದೇನೆ. ಈ ತೀರ್ಮಾನ ಕೈಗೊಳ್ಳುವುದು ಸುಲಭವಾಗಿರಲಿಲ್ಲ. ಆದರೆ ಇದು ನಿವೃತ್ತಿಗೆ ಸಕಾಲ ಎಂಬ ಅರಿವು ನನಗಿದೆ' ಎಂದು ತ್ರಿಪುರಾದ 31 ವರ್ಷ ವಯಸ್ಸಿನ ದೀಪಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2016ರ ರಿಯೊ ಡಿ ಜನೈರೊ ಒಲಿಂಪಿಕ್ಸ್‌ನಲ್ಲಿ ಅವರು ಮಹಿಳೆಯರ ವಿಭಾಗದ ವಾಲ್ಟ್‌ನಲ್ಲಿ ಫೈನಲ್ ತಲುಪಿ ಚಾರಿತ್ರಿಕ ಸಾಧನೆ ಮಾಡಿದ್ದರು. 0.15 ಅಂಕಗಳ ಅಂತರದಿಂದ ಅವರಿಗೆ ಅಂದು ಪದಕ ಕೈತಪ್ಪಿತ್ತು.

'ಜಿಮ್ನಾಸ್ಟಿಕ್ಸ್ ನನ್ನ ಜೀವನದ ಕೇಂದ್ರಬಿಂದುವಾಗಿದೆ. ಈ ಕ್ರೀಡೆಯಲ್ಲಿ ನಾನು ತೊಡಗಿಸಿಕೊಂಡ ಪ್ರತಿಕ್ಷಣವನ್ನೂ ಸದಾಕಾಲ ಸ್ಮರಿಸುತ್ತೇನೆ. ಈ ನಡುವೆ ಕಂಡ ಯಶಸ್ಸು, ವೈಫಲ್ಯಗಳು ಮತ್ತು ವಿಭಿನ್ನ ಸನ್ನಿವೇಶಗಳಿಗೆ ನಾನು ಆಭಾರಿಯಾಗಿರುವೆ' ಎಂದು ದೀಪಾ ಹೇಳಿದ್ದಾರೆ.

ಜಿಮ್ನಾಸ್ಟ್ ಆಗಿ ತಾವು ಗಳಿಸಿದ ಅನುಭವವನ್ನು ಮುಂದಿನ ಪೀಳಿಗೆಗೆ ಧಾರೆಯೆರೆಯಲು ನಿರ್ಧರಿಸಿದ್ದಾರೆ. ತರಬೇತುದಾರರಾಗಿ ಕಾರ್ಯನಿರ್ವಹಿಸುವ ಸಿದ್ಧತೆ ನಡೆಸಿದ್ದಾರೆ.

'ಯುವ ಜಿಮ್ನಾಸ್ಟ್‌ಗಳ ಕನಸು ನನಸು ಮಾಡಲು ಬೆಂಬಲಿಸುತ್ತೇನೆ' ಎಂದಿದ್ದಾರೆ.

ಅಗರ್ತಲಾದ ದೀಪಾ ಅವರು 'ವಾಲ್ಟ್ ಆಫ್ ಡೆತ್' ಎಂದೇ ಕರೆಯಲಾಗುವ ಪ್ರಕಾರದ ಕಸರತ್ತಿನಲ್ಲಿ ಪರಿಣತಿ ಗಳಿಸಿದ್ದರು. ಜಿಮ್ನಾಸ್ಟಿಕ್ಸ್ ಇತಿಹಾಸದಲ್ಲಿ ಈ ಸಾಧನೆ ಮಾಡಿದ ಐವರು ಮಹಿಳೆಯರಲ್ಲಿ ಇವರೂ ಒಬ್ಬರಾಗಿದ್ದಾರೆ. ಈ ವಿಭಾಗವು ಅತ್ಯಂತ ಕ್ಲಿಷ್ಟ ಮತ್ತು ಅಪಾಯಕಾರಿಯೂ ಹೌದು. ಜಿಮ್ನಾಸ್ಟ್ ಗಾಯಗೊಳ್ಳುವ ಸಾಧ್ಯತೆಗಳು ಹೆಚ್ಚು. ಎರಡು ಸೊಮರ್‌ಸಾಲ್ಟ್‌ಗಳು ಇರುವ ಕಸರತ್ತು ಇದು.

'ನನ್ನ ಜೀವನವನ್ನು ಹಿಂದಿರುಗಿ ಒಮ್ಮೆ ನೋಡಿದಾಗ ಮಾಡಿದ ಸಾಧನೆಗಳ ಬಗ್ಗೆ ಹೆಮ್ಮೆಯಾಗುತ್ತದೆ. ವಿಶ್ವಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿದ್ದು, ಪದಕಗಳನ್ನು ಜಯಿಸಿದ್ದು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ರಿಯೊ ಒಲಿಂಪಿಕ್ಸ್‌ನಲ್ಲಿ ಪ್ರೊಡೊನೊವಾ ವಾಲ್ಟ್‌ನಲ್ಲಿ ಸ್ಪರ್ಧಿಸಿದ್ದು ಅವಿಸ್ಮರಣೀಯವಾಗಿವೆ' ಎಂದು ದೀಪಾ ಪ್ರಕಟಣೆಯಲ್ಲಿ ಉಲ್ಲೇಖಿಸಿದ್ದಾರೆ.

'ಈ ಕ್ರೀಡೆಗಾಗಿ ನಾನು ಬೆವರು, ರಕ್ತ ಮತ್ತು ಕಣ್ಣೀರು ಹರಿಸಿರುವೆ. ಅದರೊಂದಿಗೆ ಮನದ ತುಂಬ ಅಮೋಘವಾದ ನೆನಪುಗಳನ್ನು ತುಂಬಿಕೊಂಡು ಹೊರನಡೆಯುತ್ತಿದ್ದೇನೆ. ಈ ಕ್ರೀಡೆಯು ನನಗೆ ಸಕಲವನ್ನೂ ನೀಡಿದೆ. ಜೀವನದ ಮಹತ್ವದ ಪಾಠಗಳನ್ನೂ ಕಲಿಸಿದೆ. ಕೋಚ್‌ಗಳು, ಸಹಪಾಠಿಗಳು, ನೆರವು ಸಿಬ್ಬಂದಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ನೀವೆಲ್ಲ ಅಭಿಮಾನಿಗಳಿಗೆ ನಾನು ಆಭಾರಿಯಾಗಿರುವೆ' ಎಂದು ದೀಪಾ ಹೇಳಿದ್ದಾರೆ.

ಪದ್ಮಶ್ರೀ, ಮೇಜರ್ ಧ್ಯಾನಚಂದ್ ಖೇಲ್‌ರತ್ನ ಮತ್ತು ಅರ್ಜುನ್ ಪ್ರಶಸ್ತಿಗಳು ಅವರಿಗೆ ಸಂದಿವೆ.


2016ರಲ್ಲಿ ರಿಯೊ ಡಿ ಜನೈರೊದಲ್ಲಿ ನಡೆದಿದ್ದ ಒಲಿಂಪಿಕ್ಸ್ ಕೂಟದ ಮಹಿಳೆಯರ ಜಿಮ್ನಾಸ್ಟಿಕ್ಸ್‌ನ ವಾಲ್ಟ್‌ನಲ್ಲಿ ಸ್ಪರ್ಧಿಸಿದ್ದ ದೀಪಾ ಕರ್ಮಾಕರ್
—ಪ್ರಜಾವಾಣಿ ಚಿತ್ರ ಸಂಗ್ರಹ: ಕೆ.ಎನ್. ಶಾಂತಕುಮಾರ್

ಚಪ್ಪಟೆ ಪಾದಗಳ ಸಮಸ್ಯೆ ಮೀರಿದ ಛಲಗಾತಿ ಕರ್ಮಾಕರ್

ದೀಪಾ ಅವರಿಗೆ ಬಾಲ್ಯದಲ್ಲಿ ಚಪ್ಪಟೆ ಪಾದಗಳಿದ್ದವು. ಇದರಿಂದಾಗಿ ಅವರು ಜಿಮ್ನಾಸ್ಟಿಕ್ಸ್ ಮಾಡುವುದು ಕಷ್ಟವಾಗಿತ್ತು. ಈ ಸಮಸ್ಯೆಯಿಂದಾಗಿ ಅವರ ಕನಸು ಕಮರುವ ಸಾಧ್ಯತೆ ಇತ್ತು.

'ನನಗಿನ್ನೂ ನೆನಪಿದೆ. ಆಗಿನ್ನೂ ನನಗೆ ಐದು ವರ್ಷಗಳು. ಚಪ್ಪಟೆ ಪಾದವಿರುವುದರಿಂದ ಜಿಮ್ನಾಸ್ಟ್ ಆಗುವುದು ಅಸಾಧ್ಯವೆಂದು ಹಲವರು ಹೇಳಿದ್ದರು' ಎಂದು ದೀಪಾ ಉಲ್ಲೇಖಿಸಿದ್ದಾರೆ.

ಆದರೆ ದೀಪಾ ಆರು ವರ್ಷದ ಬಾಲಕಿಯಾಗಿದ್ದಾಗಲೇ ಜಿಮ್ನಾಸ್ಟಿಕ್ಸ್ ಕಲಿಕೆ ಆರಂಭಿಸಿದರು. ಸೋಮಾ ನಂದಿ ಮತ್ತು ವಿಶ್ವೇಶ್ವರ್ ನಂದಿ ಅವರ ಮಾರ್ಗದರ್ಶನದಲ್ಲಿ ಅವರು ತರಬೇತಿ ಪಡೆದರು. ದೀಪಾ ಅವರ ಕ್ರೀಡಾಜೀವನದುದ್ದಕ್ಕೂ ನಂದಿ ಕೋಚ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಹಲವು ಅಂತರರಾಷ್ಟ್ರೀಯ ಪದಕ ಜಯಿಸಲು ದೀಪಾ ಅವರಿಗೆ ಪ್ರೇರಣೆ ತುಂಬಿದ್ದಾರೆ. ಸೌಲಭ್ಯಗಳ ಕೊರತೆ ಇರುವ ಜಿಮ್ನಾಷಿಯಂಗಳಲ್ಲಿ ತರಬೇತಿ ಪಡೆದರು. ಹಲವು ಸವಾಲುಗಳನ್ನು ಎದುರಿಸಿ ರಿಯೊ ಒಲಿಂಪಿಕ್ಸ್‌ವರೆಗೆ ತಲುಪಿದ್ದೇ ದೊಡ್ಡ ಸಾಧನೆ.

2008ರಲ್ಲಿ ಅವರು ಜಲಪಾಯ್‌ಗುಡಿಯಲ್ಲಿ ಜೂನಿಯರ್ ರಾಷ್ಟ್ರೀಯ ಜಿಮ್ನಾಸ್ಟಿಕ್ಸ್‌ನಲ್ಲಿ ಗೆಲುವು ಸಾಧಿಸಿದ ನಂತರ ಅವರು ಸ್ಪರ್ಧಾತ್ಮಕ ಜಗತ್ತಿನ ಗಮನ ಸೆಳೆದರು. 2014ರಲ್ಲಿ ಗ್ಲಾಸ್ಗೊದಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಕಂಚು ಗೆದ್ದರು. ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳಾ ಜಿಮ್ನಾಸ್ಟ್ ಆದರು. 2015ರಲ್ಲಿ ಏಷ್ಯನ್ ಚಾಂಪಿಯನ್‌ಷಿಪ್ ಕಂಚು ಮತ್ತು ಅದೇ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಐದನೇ ಸ್ಥಾನ ಪಡೆದರು.

ಆದರೆ ರಿಯೊ ಒಲಿಂಪಿಕ್ಸ್ ನಂತರ ಗಾಯದ ಸಮಸ್ಯೆ ಎದುರಿಸಿದರು. ಅದಕ್ಕೆ ಶಸ್ತ್ರಚಿಕಿತ್ಸೆಯೂ ಆಯಿತು. ಚೇತರಿಸಿಕೊಂಡ ನಂತರ 2018ರಲ್ಲಿ ಟರ್ಕಿಯಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು. ಈ ಸಾಧನೆ ಮಾಡಿದ ಮೊದಲ ಭಾರತೀಯ ಮಹಿಳೆಯಾದರು. ಅದೇ ವರ್ಷ ಜರ್ಮನಿಯಲ್ಲಿ ವಿಶ್ವಕಪ್ ಸ್ಪರ್ಧೆಯಲ್ಲಿ ಕಂಚು ಗಳಿಸಿದರು.

2021ರಲ್ಲಿ ಅವರ ಜೀವನಕ್ಕೆ ಮತ್ತೊಂದು ತಿರುವು ಲಭಿಸಿತು. ತಾಷ್ಕೆಂಟ್‌ನಲ್ಲಿ ನಡೆದ ಏಷ್ಯನ್ ಜಿಮ್ನಾಸ್ಟಿಕ್ಸ್‌ನಲ್ಲಿ ಚಿನ್ನ ಗೆದ್ದರು.

ಆದರೆ ಅದೇ ವರ್ಷ ಅವರು ಉದ್ದೀಪನ ಮದ್ದು ಸೇವನೆ ವಿವಾದದಲ್ಲಿ ಸಿಲುಕಿದರು. ನಿಷೇಧಿತ ಹಿಗೆನಾಮೈನ್ ಅಂಶವಿರುವ ಮದ್ದು ಸೇವಿಸಿದ್ದು ಪರೀಕ್ಷೆಯಲ್ಲಿ ಖಚಿತವಾಯಿತು. ಇದಕ್ಕಾಗಿ ಎರಡು ವರ್ಷಗಳ ನಿಷೇಧವನ್ನು ಅವರ ಮೇಲೆ ಹಾಕಲಾಯಿತು. ಈ ಮದ್ದನ್ನು ಅಸ್ತಮಾ ಮತ್ತು ಕಫದ ತೊಂದರೆಯ ಚಿಕಿತ್ಸೆಗೂ ಬಳಸಲಾಗುತ್ತದೆ. 2023ರ ಜುಲೈನಲ್ಲಿ ಅವರ ಶಿಕ್ಷೆ ಪೂರ್ಣಗೊಂಡಿತು.

ಏನೇ ಆಗಲಿ; ದೀಪಾ ಅವರ ಕ್ರೀಡಾ ಜೀವನದಲ್ಲಿ ವಿವಾದಗಳಿಗಿಂತ ಹೆಚ್ಚು ಸಾಧನೆಗಳು ಸದ್ದು ಮಾಡಿರುವುದು ಗಮನಾರ್ಹ.

ನರ್ವಾಲ್ ವಾಪಸ್; ತಂಡಕ್ಕೆ ಆನೆಬಲ

ಬೆಂಗಳೂರು ಬುಲ್ಸ್ ಕೋಚ್ ರಣಧೀರ್ ಸಿಂಗ್ ಅಭಿಮತ

• ಪ್ರದೀಶ್ ಎಚ್. ಮರೋಡಿ

ಬೆಂಗಳೂರು: 'ಹೊಸ ನಾಯಕತ್ವ, ಹೊಸ ತಂತ್ರಗಾರಿಕೆ ಮತ್ತು ಹೊಸ ಹುಮ್ಮಸ್ಸಿನೊಂದಿಗೆ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ 11ನೇ ಆವೃತ್ತಿಗೆ ಸಜ್ಜಾಗಿದೆ. ಅನುಭವಿಗಳು ಮತ್ತು ನವಪ್ರತಿಭೆಗಳನ್ನು ಒಳಗೊಂಡ ತಂಡವು ಈ ಬಾರಿ ಮೋಡಿ ಮಾಡಲಿದೆ...' ಇದು ತಂಡದ ಕೋಚ್ ರಣಧೀರ್ ಸಿಂಗ್ ಅವರ ವಿಶ್ವಾಸದ ನುಡಿ.

ಪ್ರೊ ಕಬಡ್ಡಿ ಟೂರ್ನಿಗೆ ಇದೇ 18ರಂದು ಚಾಲನೆ ದೊರೆಯಲಿದೆ. ಉದ್ಘಾಟನಾ ಪಂದ್ಯದಲ್ಲಿ ಬುಲ್ಸ್ ಮತ್ತು ತೆಲುಗು ಟೈಟನ್ಸ್ ತಂಡಗಳು ಮುಖಾಮುಖಿಯಾಗಲಿವೆ. ಈ ಬಾರಿ ಬೆಂಗಳೂರು ತಂಡವನ್ನು ಅನುಭವಿ ಪ್ರದೀಪ್ ನರ್ವಾಲ್ ಮುನ್ನಡೆಸಲಿದ್ದಾರೆ. ಎರಡನೇ ಆವೃತ್ತಿಯಲ್ಲಿ ಬುಲ್ಸ್ ತಂಡದ ಮೂಲಕ ಪ್ರೊ ಕಬಡ್ಡಿಗೆ ಪದಾರ್ಪಣೆ ಮಾಡಿದ್ದ 27 ವರ್ಷ ವಯಸ್ಸಿನ ನರ್ವಾಲ್, ಪಟ್ನಾ ಪೈರೇಟ್ ತಂಡದಿಂದ ಮತ್ತೆ ವಾಪಸಾಗಿದ್ದಾರೆ. ಅವರ ನಾಯಕತ್ವದಲ್ಲಿ ಆರು ವರ್ಷಗಳ ಬಳಿಕ ತಂಡವು ಮತ್ತೆ ಚಾಂಪಿಯನ್ ಕಿರೀಟ ಮುಡಿಗೇರಿಸಿಕೊಳ್ಳುವ ತವಕದಲ್ಲಿದೆ. ಈ ಮಧ್ಯೆ ತಂಡದ ಯೋಜನೆ ಮತ್ತು ಕಾರ್ಯತಂತ್ರದ ಕುರಿತು ರಣಧೀರ್, 'ಪ್ರಜಾವಾಣಿ' ಜೊತೆ ಮಾತನಾಡಿದರು.

'ಕಳೆದ ಆವೃತ್ತಿಯಲ್ಲಿ ಬೆಂಗಳೂರು ತಂಡವು ಎಂಟನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತ್ತು. ಆ ಫಲಿತಾಂಶದಿಂದ ನಾವು ಹತಾಶರಾಗಿಲ್ಲ. ಪಂದ್ಯಗಳಲ್ಲಿ ಸೋಲು ಗೆಲುವು ಸಾಮಾನ್ಯ. ಸೋಲಿನಿಂದಲೂ ಕಲಿಯುವುದು ಸಾಕಷ್ಟಿದೆ. ಕಳೆದ ಬಾರಿ ನಾವು ಎಲ್ಲಿ ಎಡವಿದ್ದೇವೆ, ನಮ್ಮ ನ್ಯೂನತೆಗಳೇನು ಎಂಬುದನ್ನು ಅರಿತುಕೊಂಡು, ಅದನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡಿದ್ದೇವೆ. ಈ ಬಾರಿಯ ಆವೃತ್ತಿಯಲ್ಲಿ ಅದರ ಪ್ರತಿಫಲ ಕಾಣಬಹುದು' ಎಂದರು.

10 ಆವೃತ್ತಿಗಳಲ್ಲಿ ಬುಲ್ಸ್ ತಂಡವು ಆರು ಬಾರಿ ಪ್ಲೇ ಆಫ್ ಹಂತ ತಲುಪಿದೆ. 2018ರಲ್ಲಿ ಚಾಂಪಿಯನ್ ಆಗಿದೆ. 'ಇದು ಸಾಮಾನ್ಯ ಸಾಧನೆಯಲ್ಲ. ಟೂರ್ನಿಯಲ್ಲಿರುವ 12 ತಂಡಗಳೂ ಒಂದಕ್ಕಿಂತ ಒಂದು ಬಲಿಷ್ಠವಾಗಿದೆ. ಪ್ರತಿ ತಂಡವೂ ಪ್ರತಿಭಾನ್ವಿತ ಆಟಗಾರರನ್ನು ಹೊಂದಿದೆ. ಬದಲಾವಣೆಗೆ ತಕ್ಕಂತೆ ತಂಡವನ್ನು ಸಿದ್ಧಗೊಳಿಸುವುದು ಇಂದಿನ ಸವಾಲು. ಈ ನಿಟ್ಟಿನಲ್ಲಿ ಬುಲ್ಸ್ ತಂಡದ ಎಲ್ಲಾ ವಿಭಾಗಗಳನ್ನೂ ಬಲಿಷ್ಠಗೊಳಿಸಲಾಗಿದೆ' ಎಂದು ಹೇಳಿದರು.

ರೈಡರ್ ನರ್ವಾಲ್ ನಾನೇ ಗುರುತಿಸಿದ್ದ ಪ್ರತಿಭೆ. 17 ವರ್ಷ ಪ್ರಾಯದಲ್ಲಿ ಅವರನ್ನು ಬೆಂಗಳೂರು ಬುಲ್ಸ್ ಮೂಲಕ ಪರಿಚಯಿಸಿದ್ದೆ. ಬಳಿಕ ಅವರು ಪಟ್ನಾ ತಂಡದ ಮೂಲಕ ಹೊಸ ಅಲೆಯನ್ನು ಸೃಷ್ಟಿಸಿದರು. 170 ಪಂದ್ಯಗಳಲ್ಲಿ 1690 ಪಾಯಿಂಟ್ಸ್ ಗಳಿಸಿರುವ ಅವರು, ಪ್ರೊ ಕಬಡ್ಡಿ ಇತಿಹಾಸದಲ್ಲೇ 1500ಕ್ಕಿಂತ ಅಧಿಕ ಅಂಕ ಗಳಿಸಿದ ಏಕೈಕ ಆಟಗಾರ. ಅವರು ವಾಪಸಾಗಿರುವುದು ನಮಗೆ ಆನೆ ಬಲ ಬಂದಂತಾಗಿದೆ. ಅವರ ಅನುಭವ, ತಂತ್ರಗಾರಿಕೆ ಮತ್ತು ಸಾಮರ್ಥ್ಯವನ್ನು ತಂಡವು ಬಳಸಿಕೊಳ್ಳಲಿದೆ ಎಂದರು.

ಉದ್ಘಾಟನಾ ಪಂದ್ಯದಲ್ಲಿ ನನ್ನ ಇಬ್ಬರು ಶಿಷ್ಯಂದಿರಾದ ಪ್ರದೀಪ್ ಮತ್ತು ಪವನ್ ಸೆಹ್ರಾವತ್ (ಟೈಟನ್ಸ್) ಮುಖಾಮುಖಿಯಾಗುತ್ತಿದ್ದಾರೆ. ಈ ಪಂದ್ಯದ ಬಗ್ಗೆ ಎಲ್ಲರಿಗಿಂತ ಹೆಚ್ಚಿನ ಕುತೂಹಲ ನನಗಿದೆ. ಇಬ್ಬರೂ ಕೂಡಾ ಅದ್ಭುತ ರೈಡರ್‌ಗಳು. ಕೆಲ ಆವೃತ್ತಿಗಳಲ್ಲಿ ಪ್ರದೀಪ್ ಅವರಿಂದ ನೈಜ ಆಟ ಹೊರಬಂದಿಲ್ಲ. ಆದರೆ, ಈ ಬಾರಿ ಲಯ ಕಂಡುಕೊಳ್ಳಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


ಬೆಂಗಳೂರು ಬುಲ್ಸ್ ಆಟಗಾರರೊಂದಿಗೆ ಕೋಚ್ ರಣಧೀರ್ ಸಿಂಗ್ –ಎಕ್ಸ್ ಚಿತ್ರ

PRO KABADDI

ಸೋಫಿ ಉತ್ತಮ ಬೌಲಿಂಗ್; ಬ್ರಂಟ್ ಅಬ್ಬರ

ದಕ್ಷಿಣ ಆಫ್ರಿಕಾ ವಿರುದ್ಧ ಇಂಗ್ಲೆಂಡ್‌ಗೆ ಜಯ


ಶಾರ್ಜಾ (ಪಿಟಿಐ): ಸೋಫಿ ಎಕ್ಲೆಸ್ಟೋನ್ ಅವರ ಉತ್ತಮ ಬೌಲಿಂಗ್ ಮತ್ತು ನ್ಯಾಟ್ ಸಿವರ್ ಬ್ರಂಟ್ ಅವರ ಬ್ಯಾಟಿಂಗ್ ಬಲದಿಂದ ಇಂಗ್ಲೆಂಡ್ ತಂಡವು ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾ ಎದುರು ಜಯಿಸಿತು.

ಶಾರ್ಜಾ ಕ್ರಿಕೆಟ್ ಕ್ರೀಡಾಂಗಣ ದಲ್ಲಿ ಸೋಮವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು 7 ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕಿ ಲಾರಾ ವೊಲ್ವಾರ್ಟ್ (42; 39ಎ, 4X3) ಮತ್ತು ಮರಿಯಾನ್ ಕ್ಯಾಪ್ (26; 17ಎ, 4X3) ಅವರು ಉತ್ತಮ ಬ್ಯಾಟಿಂಗ್ ಮಾಡಿದರು. ಆದರೆ ಇವರಿಬ್ಬರ ವಿಕೆಟ್ ಕಬಳಿಸಿದ ಬೌಲರ್ ಸೋಫಿ ತಂಡದ ರನ್‌ಗಳಿಕೆಗೆ ಕಡಿವಾಣ ಹಾಕಿದರು. ಇದರಿಂದಾಗಿ ದಕ್ಷಿಣ ಆಫ್ರಿಕಾ ತಂಡಕ್ಕೆ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 124 ರನ್‌ಗಳ ಸಾಧಾರಣ ಮೊತ್ತ ಗಳಿಸಲು ಸಾಧ್ಯವಾಯಿತು.

ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡವು 19.2 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗುರಿ ಮುಟ್ಟಿತು. ತಂಡದ ಆರಂಭಿಕ ಆಟಗಾರ್ತಿ ಡ್ಯಾನಿಲ್ ವೈಟ್ ಹಾಜ್ 43 (43ಎ) ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್ ನ್ಯಾಟ್ ಸಿವರ್ ಬ್ರಂಟ್ (ಔಟಾಗದೆ 48) ಅವರು ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 124 (ಲಾರಾ ವೊಲ್ವಾರ್ಟ್ 42, ಮರಿಯಾನ್ ಕ್ಯಾಪ್ 26, ಎನೆರಿ ಡಾರ್ಕಸೆನ್ ಔಟಾಗದೆ 20, ಸೋಫಿ ಎಕ್ಲೆಸ್ಟೋನ್ 15ಕ್ಕೆ2) ಇಂಗ್ಲೆಂಡ್: 19.2 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 125 (ಡ್ಯಾನಿಲ್ ವೈಟ್ ಹಾಜ್ 43, ಅಲೈಸ್ ಕ್ಯಾಪ್ಸಿ 19, ನ್ಯಾಟ್ ಸಿವರ್ ಬ್ರಂಟ್ 48, ಮರಿಯಾನ್ ಕ್ಯಾಪ್ 17ಕ್ಕೆ1) **ಫಲಿತಾಂಶ:** ಇಂಗ್ಲೆಂಡ್ ತಂಡಕ್ಕೆ 7 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ್ತಿ: ಸೋಫಿ ಎಕ್ಲೆಸ್ಟೋನ್.


ಇಂಗ್ಲೆಂಡ್ ತಂಡದ ಸೋಫಿ ಎಕ್ಲೆಸ್ಟೋನ್ ಸಂಭ್ರಮ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2024

ಟೆನಿಸ್: ಮುಖ್ಯಸುತ್ತಿಗೆ 7 ಭಾರತೀಯರು

• ಪ್ರಜಾವಾಣಿ ವಾರ್ತೆ

ಮೈಸೂರು: ಅಪೂರ್ವ ವೇಮುರಿ, ಮಂಡ್ಯದ ಕಾಶ್ವಿ ಸುನಿಲ್ ಸೇರಿ ಏಳು ಭಾರತೀಯ ಆಟಗಾರ್ತಿಯರು ಇಲ್ಲಿ ನಡೆಯುತ್ತಿರುವ ಐಟಿಎಫ್– ಮಹಿಳೆಯರ ವಿಶ್ವ ಟೆನಿಸ್ ಟೂರ್ ಟೂರ್ನಿಯ ಮುಖ್ಯಸುತ್ತಿಗೆ ಸೋಮವಾರ ಪ್ರವೇಶ ಪಡೆದರು.

ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್ (ಎಂಟಿಸಿ)ನಲ್ಲಿ ನಡೆದ ಪಂದ್ಯದಲ್ಲಿ ಅಪೂರ್ವ ವೇಮುರಿ 5–3ರಿಂದ ಚವಿಕಾ ರೆಡ್ಡಿ ಸಮಾ ವಿರುದ್ಧ ಮೊದಲ ಸೆಟ್ ಗೆದ್ದರು. ಈ ವೇಳೆ ಗಾಯಗೊಂಡು ಚವಿಕಾ ನಿವೃತ್ತರಾದರು.

ಮಂಡ್ಯದ ಕಾಶ್ವಿ ಸುನಿಲ್ ಟೂರ್ನಿಯ ಅಗ್ರಶ್ರೇಯಾಂಕಿತೆ ಪ್ರಿಯಾಂಶಿ ಭಂಡಾರಿ ಅವರನ್ನು ಅರ್ಹತಾ ಸುತ್ತಿನ ಫೈನಲ್‌ನಲ್ಲಿ ಎದುರಾದರು. 5-7, 0-3ರಿಂದ ಮುನ್ನಡೆ ಸಾಧಿಸಿದ್ದ ಪ್ರಿಯಾಂಶಿ, ಭುಜದ ನೋವಿನಿಂದ ನಿವೃತ್ತರಾದರು. ಅದರಿಂದ ಕಾಶ್ವಿ ಹಿನ್ನಡೆ ಅನುಭವಿಸಿ ದ್ದರೂ ಮುಖ್ಯ ಸುತ್ತಿಗೆ ಪ್ರವೇಶ ಪಡೆಯುವ ಅವಕಾಶ ಸಿಕ್ಕಿತು.

ಮೂರನೇ ಶ್ರೇಯಾಂಕಿತೆ ಅಭಯಾ ವೇಮುರಿ ಅವರು ಈಶ್ವರಿ ಮಾತೆರೆ ವಿರುದ್ಧ 6–1, 6–2ರಿಂದ ಗೆದ್ದರೆ, ಲಕ್ಷ್ಮಿಪ್ರಭಾ ಅರುಣ್ ಕುಮಾರ್ 6–2, 6–3ರಿಂದ ಹಾಕ್‌ಕಾಂಗ್‌ನ ನಿಯೊಮಿ ಹಾಗಿ ಅವರನ್ನು ಮಣಿಸಿದರು.

ಫಲಿತಾಂಶ: ಅರ್ಹತಾ ಸುತ್ತು: ಜಪಾನ್‌ನ ಖೈಲಿ ಡೆಮಿತ್ರೊ 6–0, 6–2ರಿಂದ ಶ್ರೀನಿಧಿ ಬಾಲಾಜಿ ಎದುರು, ಕಾಶಿಶ್ ಭಾಟಿಯಾ 7–5, 6–0ರಿಂದ ಫ್ರಾನ್ಸ್‌ನ ನಿಯೊಮಿ ದಾದೌನ್ ಎದುರು, ಸೆಜಲ್ ಗೋಪಾಲ್ ಬೂತಾಡ 6–4. 6–3ರಿಂದ ಜಪಾನ್‌ನ ನೋಲಾನಿ ಸಾರಾತ್ಸೋ ಎದುರು, ಅದಿತಿ ರಾವತ್ 4–6, 6–2, 12-10ರಿಂದ ಜನನಿ ರಮೇಶ್ ಎದುರು ಜಯ.


ಭಾರತದ ಅಪೂರ್ವ ವೇಮುರಿ ಆಟದ ವೈಖರಿ – ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ

ವೇಗಿ ಮಯಂಕ್‌ಗೆ ಸೂಪರ್ ಜೈಂಟ್ಸ್‌ನಿಂದ ಬಂಪರ್ ಮೌಲ್ಯ



ನವದೆಹಲಿ (ಪಿಟಿಐ): ವೇಗದ ಬೌಲಿಂಗ್ ವಿಭಾಗದ ಹೊಸ ಪ್ರತಿಭೆ ಮಯಂಕ್ ಯಾದವ್ ಅವರಿಗೆ ಈಗ 'ಮಿಲಿಯನ್ ಡಾಲರ್' ಮೌಲ್ಯ ಕುದುರಿದೆ. ಅದರಿಂದಾಗಿ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಅವರನ್ನು ತಮ್ಮ ತಂಡದಲ್ಲಿಯೇ ಉಳಿಸಿಕೊಳ್ಳಲು ಲಖನೌ ಸೂಪರ್ ಜೈಂಟ್ಸ್ ₹ 11 ಕೋಟಿ ನೀಡಲಿದೆ.

ಹೋದ ಸಲದ ಐಪಿಎಲ್‌ನಲ್ಲಿ ಪ್ರತಿ ಗಂಟೆಗೆ 150 ಕಿಲೋಮೀಟರ್‌ಗಿಂತಲೂ ಹೆಚ್ಚು ವೇಗದ ಎಸೆತಗಳನ್ನು ಹಾಕಿ ಗಮನ ಸೆಳೆದಿದ್ದರು. ಭಾನುವಾರ ಅವರು ಬಾಂಗ್ಲಾದೇಶ ಎದುರಿನ ಟಿ20 ಪಂದ್ಯದಲ್ಲಿ ಭಾರತ ತಂಡದಲ್ಲಿ ಪದಾರ್ಪಣೆ ಮಾಡಿದರು. ಅವರೊಂದಿಗೆ ಇದೇ ಪಂದ್ಯದಲ್ಲಿ ಆಡಿದ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಅವರನ್ನೂ ಸನ್‌ರೈಸರ್ಸ್ ಹೈದರಾಬಾದ್ ತಂಡವೂ ₹ 11 ಕೋಟಿ ಮೌಲ್ಯವನ್ನು ನೀಡಿ ಉಳಿಸಿಕೊಂಡಿದೆ.

ಐಪಿಎಲ್ ತಂಡದಲ್ಲಿ ಇರುವ 'ಅನ್‌ಕ್ಯಾಪ್ಡ್ ಆಟಗಾರ' ಪ್ರಸಕ್ತ ಸಾಲಿನ ಹರಾಜು ಪ್ರಕ್ರಿಯೆ ಮುಗಿಯುವ ಮುನ್ನ ಅಂತರರಾಷ್ಟ್ರೀಯ ಪಂದ್ಯಕ್ಕೆ ಪದಾರ್ಪಣೆ ಮಾಡಿ 'ಕ್ಯಾಪ್' ಪಡೆದರೆ ಮೌಲ್ಯ ಹೆಚ್ಚಿಸಬೇಕು ಎಂಬ ನಿಯಮ ಇದೆ. ಸದ್ಯದ ನಿಯಮಾವಳಿಯ ಪ್ರಕಾರ ಅಂತರರಾಷ್ಟ್ರೀಯ ಪಂದ್ಯ ಆಡಿರುವ ಆಟಗಾರರನ್ನು ಉಳಿಸಿಕೊಳ್ಳಲು ₹ 18 ಕೋಟಿ (ನಂ 1), ₹ 14 ಕೋಟಿ (ನಂ. 2) ಮತ್ತು ₹ 11 ಕೋಟಿ (ನಂ. 3) ನೀಡಬೇಕು.

ಶೂಟಿಂಗ್ ಚಾಂಪಿಯನ್‌ಷಿಪ್: 24 ಪದಕ ಗೆದ್ದ ಭಾರತ

ನವದೆಹಲಿ (ಪಿಟಿಐ): ಭಾರತದ ತಂಡವು ಪೆರು ರಾಜಧಾನಿ ಲಿಮಾದಲ್ಲಿ ನಡೆದ ಜೂನಿಯರ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ 24 ಪದಕಗಳನ್ನು ಗೆದ್ದು ಅಗ್ರಸ್ಥಾನದೊಂದಿಗೆ ಅಭಿಯಾನ ಮುಗಿಸಿದೆ.

ಕೂಟದಲ್ಲಿ ಭಾರತ 13 ಚಿನ್ನ, 3 ಬೆಳ್ಳಿ ಮತ್ತು 8 ಕಂಚಿನ ಪದಕಗಳನ್ನು ಜಯಿಸಿದೆ. 5 ಚಿನ್ನ ಸೇರಿದಂತೆ 10 ಪದಕ ಗೆದ್ದ ಇಟಲಿ ಮತ್ತು ನಾಲ್ಕು ಚಿನ್ನ ಸೇರಿ 10 ಪದಕ ಜಯಿಸಿರುವ ನಾರ್ವೆ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದಿವೆ.

ಸ್ಪರ್ಧೆಯ ಕೊನೆಯ ದಿನವಾದ ಸೋಮವಾರ ಭಾರತದ ಪುರುಷರ ತಂಡವು 50 ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸಿತು. ದೀಪಕ್ ದಲಾಲ್ (545 ಅಂಕ), ಕಮಲಜೀತ್ (543) ಮತ್ತು ರಾಜ್ ಚಂದ್ರ (528) ಅವರನ್ನು ಒಳಗೊಂಡ ತಂಡವು 1616 ಪಾಯಿಂಟ್ಸ್ ಗಳಿಸಿತು. ಅಜರ್‌ಬೈಜಾನ್ ಮತ್ತು ಅರ್ಮೇನಿಯಾ ಕ್ರಮವಾಗಿ ಬೆಳ್ಳಿ, ಕಂಚು ಗೆದ್ದಿತು.

ಮುಕೇಶ್ ನೆಲವಳ್ಳಿ (548) ಅವರು ವೈಯಕ್ತಿಕ 50 ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚು ಗೆದ್ದರು. ಕೂಟದಲ್ಲಿ ಅವರಿಗೆ ಇದು ಆರನೇ ಪದಕವಾಗಿದೆ.

ಪುನಶ್ಚೇತನಗೊಳಿಸಿದ ಕೆರೆಗಳ ಹಸ್ತಾಂತರಿಸಿದ ಆರ್‌ಸಿಬಿ

ಪ್ರಜಾವಾಣಿ ವಾರ್ತೆ

ಯಲಹಂಕ: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ಫ್ರ್ಯಾಂಚೈಸಿಯು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಲ್ಲಿ(ಸಿಎಸ್‌ಆರ್) ಇಂಡಿಯಾ ಕೇರ್ಸ್ ಫೌಂಡೇಶನ್ ಹಾಗೂ ಫ್ರೆಂಡ್ಸ್ ಆಫ್ ಲೇಕ್ ಸಂಸ್ಥೆಯ ಸಹಯೋಗದಲ್ಲಿ ಪುನಶ್ಚೇತನ ಗೊಳಿಸಿರುವ ಇಟಗಲ್‌ಪುರ ಮತ್ತು ಸಾದೇನಹಳ್ಳಿ ಕೆರೆಗಳನ್ನು ರಾಜಾನುಕುಂಟೆ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಿತು.

ಈ ವೇಳೆ ಮಾತನಾಡಿದ ಶಾಸಕ ಎಸ್.ಆರ್. ವಿಶ್ವನಾಥ್, 'ಆರ್‌ಸಿಬಿ ಸಂಸ್ಥೆಯವರು ₹1.10 ಕೋಟಿ ವೆಚ್ಚದಲ್ಲಿ ಇಟಗಲ್‌ಪುರ ಮತ್ತು ಸಾದೇನಹಳ್ಳಿ ಕೆರೆಗಳನ್ನು ಅಭಿವೃದ್ಧಿಗೊಳಿಸಿದ್ದಾರೆ. ಈ ಕೆರೆಗಳನ್ನು ಸಂರಕ್ಷಣೆ ಮಾಡಿಕೊಳ್ಳಬೇಕಾದ ಜವಾಬ್ದಾರಿ ಜನಪ್ರತಿನಿಧಿಗಳು ಹಾಗೂ ಗ್ರಾಮಸ್ಥರ ಮೇಲಿದೆ' ಎಂದರು.

ಇಟಗಲ್‌ಪುರ ಗ್ರಾಮದ ಮುಖಂಡ ಎಂ.ಮೋಹನ್‌ಕುಮಾರ್ ಮಾತನಾಡಿ, 'ಕೆರೆ ಪುನಶ್ಚೇತನಗೊಳಿಸಿರುವುದರಿಂದ ಈ ಭಾಗದಲ್ಲಿ ಅಂತರ್ಜಲಮಟ್ಟ ವೃದ್ಧಿಯಾಗಿ ಕೊಳವೆ ಬಾವಿಗಳಲ್ಲಿ ನೀರು ಸಿಗುವಂತಾಗಿದೆ. ವ್ಯವಸಾಯಕ್ಕೂ ಅನುಕೂಲವಾಗಿದೆ' ಎಂದರು.

ಕೆರೆಯ ಗಡಿಯನ್ನು ಗುರುತಿಸಿ, 20 ಸಾವಿರ ಟನ್ ಹೂಳು ತೆಗೆಯಲಾಗಿದೆ. ಕೆರೆ ಸುತ್ತ ಬೆಳೆದಿದ್ದ ಕಳೆ-ಗಿಡಗಳನ್ನು ತೆರವುಗೊಳಿಸಲಾಗಿದೆ. ಏರಿ ನಿರ್ಮಿಸಲಾಗಿದೆ. ಕಾಲುವೆಗಳನ್ನು ಸ್ವಚ್ಛಗೊಳಿಸಿ ಕೆರೆಗೆ ಸರಾಗವಾಗಿ ಮಳೆ ನೀರು ಹರಿಯುವಂತೆ ಮಾಡಲಾಗಿದೆ. ಕೆರೆ ಸುತ್ತಲೂ ಔಷಧಿ ಸಸ್ಯಗಳು ಸೇರಿದಂತೆ ಎರಡು ಸಾವಿರಕ್ಕೂ ಹೆಚ್ಚು ವಿವಿಧ ಪ್ರಭೇದದ ಗಿಡಗಳನ್ನು ನೆಡಲಾಗಿದೆ.

ಆರ್‌ಸಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಮೆನನ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಚನ್ನಮ್ಮ ಇದ್ದರು.

ಅರುಂಧತಿ ರೆಡ್ಡಿಗೆ ವಾಗ್ದಂಡನೆ



ದುಬೈ (ಪಿಟಿಐ): ಪಾಕಿಸ್ತಾನ ವಿರುದ್ಧದ ಪಂದ್ಯದ ವೇಳೆ ಐಸಿಸಿಯ ನಿಯಮ ಉಲ್ಲಂಘಿಸಿದ ಭಾರತದ ತಂಡದ ಬೌಲರ್ ಅರುಂಧತಿ ರೆಡ್ಡಿ ಅವರನ್ನು ವಾಗ್ದಂಡನೆಗೆ ಗುರಿ ಪಡಿಸಲಾಗಿದೆ.

ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಭಾನುವಾರ ಭಾರತ ತಂಡವು ಆರು ವಿಕೆಟ್‌ಗಳಿಂದ ಜಯ ಸಾಧಿಸಿತ್ತು. ಈ ಪಂದ್ಯದಲ್ಲಿ ಮೂರು ವಿಕೆಟ್ ಪಡೆದು ಗೆಲುವಿನ ರೂವಾರಿಯಾಗಿದ್ದರು. ಆದರೆ, ಅರುಂಧತಿ ಅವರು ಪಾಕ್ ತಂಡದ ನಿದಾ ದಾರ್ ಅವರನ್ನು ಔಟ್ ಮಾಡಿದ ನಂತರ ಆಕ್ರಮಣಕಾರಿಯಾಗಿ ಸಂಭ್ರಮಿಸಿದ್ದರು. ಅಲ್ಲದೇ, ಪೆವಿಲಿಯನ್‌ಗೆ ಹೋಗುವಂತೆ ಕೈ ಸನ್ನೆ ಮಾಡಿದ್ದರು.

'ಐಸಿಸಿಯ ನೀತಿ ಸಂಹಿತೆಯ ವಿಧಿ 2.5 ಅನ್ನು ಉಲ್ಲಂಘಿಸಿದ್ದಕ್ಕಾಗಿ ಅರುಂಧತಿ ರೆಡ್ಡಿ ತಪ್ಪಿತಸ್ಥರೆಂದು ಸಾಬೀತಾಗಿದೆ. ಯಾವುದೇ ಆಟಗಾರರು ಔಟಾದಾಗ ಆಕ್ರಮಣಕಾರಿ ವರ್ತನೆ ತೋರುವುದು ಮತ್ತು ಪಂದ್ಯದ ವೇಳೆ ಅವಾಚ್ಯ ಭಾಷೆ, ಕ್ರಿಯೆಗಳು ಅಥವಾ ಸನ್ನೆಗಳನ್ನು ಬಳಸುವುದನ್ನು ಈ ನಿಯಮ ಸೂಚಿಸುತ್ತದೆ. ಅರುಂಧತಿ ಅವರಿಗೆ ಒಂದು ಡಿಮೆರಿಟ್ ಪಾಯಿಂಟ್ ನೀಡಲಾಗಿದೆ' ಎಂದು ಐಸಿಸಿಯ ಪ್ರಕಟಣೆ ತಿಳಿಸಿದೆ.

ಉತ್ತರ ಪ್ರದೇಶ: ಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ಜಾರಿ

ಪ್ರಜಾವಾಣಿ ವಾರ್ತೆ

ಲಖನೌ: ಸರ್ಕಾರದ ಹೊರಗುತ್ತಿಗೆ ಹಾಗೂ ಗುತ್ತಿಗೆ ಆಧಾರದ ಉದ್ಯೋಗಿಗಳ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಸಮುದಾಯಗಳಿಗೆ ಮೀಸಲಾತಿ ಜಾರಿಗೊಳಿಸಲು ಉತ್ತರ ಪ್ರದೇಶ ಸರ್ಕಾರ ನಿರ್ಧರಿಸಿದೆ.

ರಾಜ್ಯದ 10 ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ಮೇಲೆ ಕಣ್ಣಿಟ್ಟು ಸರ್ಕಾರ ಈ ನಿರ್ಧಾರ ಕೈಗೊಂಡಿದೆ ಎನ್ನಲಾಗಿದೆ.


ಯೋಗಿ ಆದಿತ್ಯನಾಥ

ಮೂಲಗಳ ಪ್ರಕಾರ, ಈ ಪ್ರಸ್ತಾಪವನ್ನು ಶೀಘ್ರದಲ್ಲೇ ನಡೆಯಲಿರುವ ಸಚಿವ ಸಂಪುಟದಲ್ಲಿ ಮಂಡಿಸಿ, ಒಪ್ಪಿಗೆ ಪಡೆಯಲು ನಿರ್ಧರಿಸಿದೆ. ಪರಿಶಿಷ್ಟ ಜಾತಿ ಹಾಗೂ ಪಂಗಡದ ಸಮುದಾಯಗಳಿಗೆ ಶೇಕಡ 21 ಹಾಗೂ ಶೇ 2 ಹಾಗೂ ಹಿಂದುಳಿದ ವರ್ಗದ ಸಮುದಾಯಗಳಿಗೆ ಶೇಕಡಾ 27ರಷ್ಟು ಮೀಸಲಾತಿ ನೀಡಲು ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ತೀವ್ರ ಹಿನ್ನಡೆ ಅನುಭವಿಸಿತ್ತು. ಇದಾದ ಬಳಿಕ ನಡೆದ ಸಭೆಯಲ್ಲಿ ಬಿಜೆಪಿಯ ಹಲವು ಸಚಿವರು ಹಾಗೂ ಮುಖಂಡರು ಗುತ್ತಿಗೆ ಆಧಾರಿತ ಉದ್ಯೋಗದಲ್ಲಿ ಮೀಸಲಾತಿ ಜಾರಿಗೊಳಿಸುವಂತೆ ಆಗ್ರಹಿಸಿದ್ದರು. ಈ ವಿಚಾರದಲ್ಲಿ ವಿಳಂಬ ಮಾಡಿದ್ದರಿಂದ ಚುನಾವಣೆಯಲ್ಲಿ ಹಲವು ಕ್ಷೇತ್ರಗಳಲ್ಲಿ ಹಿನ್ನಡೆ ಅನುಭವಿಸುವಂತಾಯಿತು ಎಂದು ಅಭಿಪ್ರಾಯಪಟ್ಟಿದ್ದರು.

ಉತ್ತರಪ್ರದೇಶ ಉಪಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ, ಕೇಂದ್ರ ಸಚಿವೆ ಹಾಗೂ ಅಪ್ನಾದಳದ ನಾಯಕಿ ಅನುಪ್ರಿಯಾ ಪಟೇಲ್ ಕೂಡ ಮೀಸಲಾತಿ ವಿಚಾರದಲ್ಲಿ ಶೀಘ್ರ ನಿರ್ಧಾರ ಕೈಗೊಳ್ಳುವಂತೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಒತ್ತಾಯಿಸಿದ್ದರು.

ನಕ್ಸಲ್ ಬಾಧಿತ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ ಅಮಿತ್ ಶಾ ಹೇಳಿಕೆ

'ನಕ್ಸಲರ ಉಪಟಳವೇ ಅಭಿವೃದ್ಧಿಗೆ ಅಡ್ಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ನಕ್ಸಲ್ ಪಿಡುಗನ್ನು 2026ರ ಮಾರ್ಚ್ ಗಡುವಿನೊಳಗೆ ನಿರ್ಮೂಲನೆಗೊಳಿಸಲು ನಕ್ಸಲ್ ಬಾಧಿತ ರಾಜ್ಯಗಳಲ್ಲಿ ನಿಯಮಿತವಾಗಿ ಅಭಿವೃದ್ಧಿ ಮತ್ತು ಭದ್ರತಾ ಕ್ರಮಗಳನ್ನು ನಡೆಸಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ನಕ್ಸಲ್ ಬಾಧಿತ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ, ಒಟ್ಟು ಪರಿಸ್ಥಿತಿ ಪರಿಶೀಲಿಸಿದ ಅವರು, 'ನಕ್ಸಲೀಯರ ಉಪಟಳವೇ ಬುಡಕಟ್ಟು ವಲಯದ ಅಭಿವೃದ್ಧಿಗೆ ಅತಿದೊಡ್ಡ ತೊಡಕಾಗಿದೆ' ಎಂದು ಅಭಿಪ್ರಾಯಪಟ್ಟರು.

'ನಕ್ಸಲರು ತಮ್ಮ ಅತಿರೇಕದಿಂದಾಗಿ ಬುಡಕಟ್ಟು ಜನರಿಗೆ ಅಭಿವೃದ್ಧಿಯ ಫಲ ಸಿಗದಂತೆ ಮಾಡುತ್ತಿದ್ದಾರೆ. ಮಾನವ ಹಕ್ಕುಗಳನ್ನು ಅತಿ ಹೆಚ್ಚು ಉಲ್ಲಂಘಿಸುವವರು ನಕ್ಸಲರೇ ಆಗಿದ್ದಾರೆ' ಎಂದು ಗೃಹ ಸಚಿವ ಟೀಕಿಸಿದರು.

ನಕ್ಸಲ್ ಪೀಡಿತ ರಾಜ್ಯಗಳಲ್ಲಿ ಆಯಾ ಮುಖ್ಯಮಂತ್ರಿಗಳು ಪ್ರತಿ ತಿಂಗಳು ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲಿಸಬೇಕು. ಅಂತೆಯೇ, ಆಯಾ ರಾಜ್ಯಗಳ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರತಿ 15 ದಿನಕ್ಕೊಮ್ಮೆ ಭದ್ರತಾ ಪರಿಸ್ಥಿತಿಯನ್ನು ಪರಿಶೀಲಿಸಬೇಕು ಎಂದು ಸೂಚಿಸಿದರು.

ಬಾಧಿತ ಪ್ರದೇಶಗಳಲ್ಲಿ ಭದ್ರತಾ ಪರಿಶೀಲನೆಯ ವೇಳೆ ನಿಯೋಜಿಸಲಾದ ಅರೆಸೇನಾಪಡೆಗಳ ಜೊತೆಗೂ ಆಯಾ ರಾಜ್ಯಗಳ ಡಿಜಿಪಿಗಳು ರಾತ್ರಿ ವಾಸ್ತವ್ಯ ಹೂಡಬೇಕು ಎಂದು ಸಲಹೆ ನೀಡಿದರು.

'ಬುಡಕಟ್ಟು ಗ್ರಾಮಗಳ ಅಭಿವೃದ್ಧಿಗೆ ನಕ್ಸಲರೇ ಅಡ್ಡಿಯಾಗಿದ್ದಾರೆ. ಶಿಕ್ಷಣ, ಆರೋಗ್ಯ, ಬ್ಯಾಂಕಿಂಗ್, ಮೊಬೈಲ್ ಇಂಟರ್‌ನೆಟ್ ಸೌಲಭ್ಯ ಕಲ್ಪಿಸಲು ತೊಡಕಾಗಿದ್ದಾರೆ. ಸೌಲಭ್ಯಗಳು ಕಟ್ಟಕಡೆಯ ವ್ಯಕ್ತಿಗೂ ತಲುಪಲು ಆಗುವಂತೆ ನಕ್ಸಲ್ ಪಿಡುಗು ನಿರ್ಮೂಲನೆ ಆಗಬೇಕಿದೆ. ನಕ್ಸಲ್ ಪಿಡುಗನ್ನು ಯಾವುದೇ ಕಾರಣಕ್ಕೂ ಸಹಿಸಲಾಗದು' ಎಂದು ಹೇಳಿದರು.

ನಕ್ಸಲ್ ಪಿಡುಗಿನ ಕಾರಣದಿಂದ ಎಂಟು ಕೋಟಿ ಬುಡಕಟ್ಟು ಜನರು ಸೌಲಭ್ಯ ವಂಚಿತರಾಗಿದ್ದಾರೆ. ನಕ್ಸಲರು ಇರಿಸಿರುವ ಕಚ್ಚಾ ಬಾಂಬ್‌ಗಳಿಂದ (ಐಇಡಿ) ಸಾವಿರಾರು ಬುಡಕಟ್ಟು ಜನ ಸತ್ತಿದ್ದಾರೆ. ಇದಕ್ಕಿಂತ ದೊಡ್ಡ ಮಾನವ ಹಕ್ಕುಗಳ ಉಲ್ಲಂಘನೆ ಇನ್ನೊಂದಿಲ್ಲ ಎಂದರು.

ಕಠಿಣ ಕ್ರಮಗಳಿಂದಾಗಿ ನಕ್ಸಲ್ ಚಟುವಟಿಕೆ ಗಣನೀಯವಾಗಿ ತಗ್ಗಿದೆ. ಸಕ್ರಿಯರಾಗಿದ್ದ 14 ಮಂದಿ ಉನ್ನತ ನಕ್ಸಲರನ್ನು ನಿಷ್ಕ್ರಿಯರಾಗಿಸಲಾಗಿದೆ ಎಂದು ಶಾ ಹೇಳಿದರು.

ಛತ್ತೀಸಗಢದಲ್ಲಿ ಇತ್ತೀಚೆಗೆ 31 ಮಾವೋವಾದಿಗಳ ಹತ್ಯೆಯೇ ಬೆನ್ನಲ್ಲೆ ನಡೆದ ಈ ಸಭೆಯಲ್ಲಿ ನಕ್ಸಲ್ ಪೀಡಿತ ರಾಜ್ಯಗಳಲ್ಲಿ ನಡೆದಿರುವ ಕಾರ್ಯಾಚರಣೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಮಾಡಲಾಯಿತು.

ಛತ್ತೀಸಗಢ, ಒಡಿಶಾ, ತೆಲಂಗಾಣ, ಮಹಾರಾಷ್ಟ್ರ, ಜಾರ್ಖಂಡ್, ಬಿಹಾರ, ಆಂಧ್ರಪ್ರದೇಶ ಮತ್ತು ಮಧ್ಯಪ್ರದೇಶ ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಿದ್ದರು.


ನವದೆಹಲಿಯಲ್ಲಿ ಸೋಮವಾರ ನಡೆದ ನಕ್ಸಲ್ ಬಾಧಿತ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ, ಗೃಹ ಸಚಿವ ಅಮಿತ್ ಶಾ, ಆರೋಗ್ಯ ಸಚಿವ ಜೆ.ಪಿ.ನಡ್ಡಾ ಪಾಲ್ಗೊಂಡಿದ್ದರು ಪಿಟಿಐ ಚಿತ್ರ

ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ, ಕೊಲೆ ಪ್ರಕರಣ

ಆರೋಪಿ ವಿರುದ್ಧ ಚಾರ್ಜ್‌ಶೀಟ್

ನವದೆಹಲಿ (ಪಿಟಿಐ): ಕೋಲ್ಕತ್ತದ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದಿದ್ದ ಅತ್ಯಾಚಾರ ಹಾಗೂ ಕೊಲೆ ಪ್ರಕರಣದಲ್ಲಿ ಪ್ರಮುಖ ಆರೋಪಿ ಸಂಜಯ್ ರಾಯ್ ವಿರುದ್ಧ ಸಿಬಿಐ ಚಾರ್ಜ್‌ಶೀಟ್ ಸಲ್ಲಿಸಿದೆ.

'ಸ್ಥಳೀಯ ಪೊಲೀಸರಿಗೆ ಸ್ವಯಂ ಸೇವಕನಂತೆ ಕೆಲಸ ಮಾಡುತ್ತಿದ್ದ ಸಂಜಯ್ ರಾಯ್‌ನೇ ಕೊಲೆ ಪ್ರಕರಣದ ಪ್ರಮುಖ ಆರೋಪಿ' ಎಂದು ಕೋಲ್ಕತ್ತದ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ ಚಾರ್ಜ್‌ಶೀಟ್‌ನಲ್ಲಿ ಸಿಬಿಐ ಉಲ್ಲೇಖಿಸಿದೆ.

ಆಗಸ್ಟ್ 9ರಂದು ವಿರಾಮದ ಅವಧಿಯಲ್ಲಿ ಸಂತ್ರಸ್ತೆಯು ಆಸ್ಪತ್ರೆಯ ಸೆಮಿನಾರ್ ಕೊಠಡಿಗೆ ತೆರಳಿ ನಿದ್ದೆ ಮಾಡುತ್ತಿದ್ದ ಸಮಯದಲ್ಲೇ ಆರೋಪಿ ಅತ್ಯಾಚಾರವೆಸಗಿ ಕೊಲೆಗೈದಿದ್ದಾನೆ. ಸಾಮೂಹಿಕ ಅತ್ಯಾಚಾರ ನಡೆದಿರುವ ಕುರಿತು ಎಲ್ಲಿಯೂ ಉಲ್ಲೇಖಿಸಿಲ್ಲ, ಆತ ಒಬ್ಬನೇ ಕೊಲೆ ಮಾಡಿದ್ದಾನೆ ಎಂದು ಸಿಬಿಐ ತಿಳಿಸಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಸಂಜಯ್ ರಾಯ್

ಆ. 9ರಂದು ಬೆಳಗ್ಗಿನ ಜಾವ ಸೆಮಿನಾರ್ ಕೊಠಡಿಗೆ ಸಂಜಯ್‌ರಾಯ್ ಪ್ರವೇಶಿಸಿದ್ದು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಯಲ್ಲಿ ಸೆರೆಯಾಗಿತ್ತು. ಇದರ ಆಧಾರದಲ್ಲಿ ಆ.10ರಂದು ಆರೋಪಿಯನ್ನು ಕೋಲ್ಕತ್ತ ಪೊಲೀಸರು ಬಂಧಿಸಿದ್ದರು.

ಕಲ್ಕತ್ತ ಹೈಕೋರ್ಟ್ ಆದೇಶದಂತೆ, ಆ.14ರಂದು ಇಡೀ ಪ್ರಕರಣದ ವಿಚಾರಣೆಯನ್ನು ಸಿಬಿಐ ಆರಂಭಿಸಿತ್ತು. ಆರೋಪಿಯನ್ನು ವಶಕ್ಕೆ ಪಡೆದು, ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸಿ ವಿಸ್ತೃತ ವಿಚಾರಣೆಗೂ ಒಳಪಡಿಸಿತ್ತು. ಮಂಪರು ಪರೀಕ್ಷೆಗೆ ಆರೋಪಿ ಒಪ್ಪಿಗೆ ನೀಡದ ಕಾರಣ, ಸಿಬಿಐ ಈ ಪರೀಕ್ಷೆ ನಡೆಸಿರಲಿಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಾಲಾ ಪೊಲೀಸ್ ಠಾಣೆಯ ಠಾಣಾಧಿಕಾರಿ ಅಭಿಜಿತ್ ಮೊಂಡಲ್, ವೈದ್ಯಕೀಯ ಕಾಲೇಜಿನ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಅವರನ್ನು ಕೂಡ ಸಿಬಿಐ ಬಂಧಿಸಿತ್ತು. ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಘೋಷ್ ವಿರುದ್ಧ ಸಿಬಿಐ ಮತ್ತೊಂದು ಪ್ರಕರಣ ದಾಖಲಿಸಿದ್ದು, ವಿಚಾರಣೆ ನಡೆಯುತ್ತಿದೆ.

ಆ.9ರಂದು ಬೆಳಿಗ್ಗೆ 9.30ರ ವೇಳೆಗೆ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ವೈದ್ಯರು ಎಂದಿನಂತೆ ರೋಗಿಗಳನ್ನು ತಪಾಸಣೆ ಮಾಡಲು ವಾರ್ಡ್‌ಗೆ ತೆರಳಿದ್ದ ವೇಳೆ ವೈದ್ಯ ವಿದ್ಯಾರ್ಥಿನಿಯ ದೇಹವನ್ನು ಗಮನಿಸಿದ್ದರು. 'ವೈದ್ಯೆ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾರೆ' ಎಂದು ಸ್ಥಳೀಯ ತಾಲಾ ಠಾಣೆಗೆ ಮಾಹಿತಿ ನೀಡಿದ್ದರೂ ಕೂಡ ಪೊಲೀಸ್ ಠಾಣೆಯ ಅಧಿಕಾರಿಗಳು 10.30ರ ವೇಳೆಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದರು.

ಕಿರಿಯ ವೈದ್ಯೆಯ ಹತ್ಯೆ ವಿಚಾರವು ಇಡೀ ದೇಶದಾದ್ಯಂತ ಪ್ರತಿಭಟನೆಗೆ ಕಾರಣವಾಗಿತ್ತು. ಕೆಲಸದ ಸ್ಥಳದಲ್ಲಿ ಭದ್ರತೆ ಒದಗಿಸುವಂತೆ ಒತ್ತಾಯಿಸಿದ್ದರು.

ಸಂಕ್ಷಿಪ್ತ ಸುದ್ದಿ

ದೇಣಿಗೆ ವಿಚಾರವಾಗಿ ಗಲಭೆ: ವ್ಯಕ್ತಿ ಸಾವು

ಗುವಾಹಟಿ: ದುರ್ಗಾಪೂಜೆಗೆ ದೇಣಿಗೆ ನೀಡುವ ವಿಚಾರದಲ್ಲಿ ಎರಡು ಕೋಮುಗಳ ನಡುವೆ ಭಾನುವಾರ ಭಿನ್ನಾಭಿಪ್ರಾಯ ಉಂಟಾಗಿದ್ದರಿಂದ ಉತ್ತರ ತ್ರಿಪುರಾ ಜಿಲ್ಲೆಯ ಕದಾಮತಲ್ ಗ್ರಾಮದಲ್ಲಿ ಸಂಘರ್ಷ ಉಂಟಾಗಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ಎಸ್‌ಐಟಿ ವಿಚಾರಣೆಗೆ ನಟ ಸಿದ್ದೀಕ್ ಹಾಜರು

ತಿರುವನಂತಪುರ (ಪಿಟಿಐ): ಮಲಯಾಳ ಚಿತ್ರನಟ ಸಿದ್ದೀಕ್ ಅವರು ತಮ್ಮ ವಿರುದ್ಧ ದಾಖಲಾಗಿರುವ ಅತ್ಯಾಚಾರ ಪ್ರಕರಣ ಸಂಬಂಧ ವಿಶೇಷ ತನಿಖಾ ತಂಡದ (ಎಸ್‌ಐಟಿ) ಎದುರು ತನಿಖೆಗೆ ಸೋಮವಾರ ಹಾಜರಾದರು.

ಐಪಿಎಸ್ ಅಧಿಕಾರಿ ನೇತೃತ್ವದ ಎಸ್‌ಐಟಿ, ಇಲ್ಲಿನ ಕಂಟೋನ್ಮೆಂಟ್ ಪೊಲೀಸ್ ಠಾಣೆಯಲ್ಲಿ ಸಿದ್ದೀಕ್ ಅವರನ್ನು ವಿಚಾರಣೆ ನಡೆಸಿತು.

ಆರ್ಕಟಿಕ್ ಓಪನ್ ಬ್ಯಾಡ್ಮಿಂಟನ್ ಇಂದಿನಿಂದ

ಸಿಂಧು, ಲಕ್ಷ್ಯಸೇನ್ ಕಣಕ್ಕೆ


ಪಿ.ವಿ. ಸಿಂಧು —ಎಎಫ್‌ಪಿ ಫೈಲ್ ಚಿತ್ರ

ವಾಂತಾ, ಫಿನ್ಲೆಂಡ್ (ಪಿಟಿಐ): ಒಲಿಂಪಿಯನ್ ಆಟಗಾರರಾದ ಪಿ.ವಿ. ಸಿಂಧು ಹಾಗೂ ಲಕ್ಷ್ಯ ಸೇನ್ ಅವರು, ಮಂಗಳವಾರ ಇಲ್ಲಿ ಆರಂಭವಾಗಲಿರುವ ಆರ್ಕಟಿಕ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸುವಲ್ಲಿ ವಿಫಲರಾಗಿದ್ದ ಸಿಂಧು ಮತ್ತು ಸೇನ್ ಅವರು ಈ ಟೂರ್ನಿಯ ಮೂಲಕ ಮತ್ತೆ ಲಯಕ್ಕೆ ಮರಳುವ ವಿಶ್ವಾಸದಲ್ಲಿದ್ದಾರೆ. ಇವರಿಬ್ಬರೂ ಒಲಿಂಪಿಕ್ಸ್ ನಂತರ ಕಣಕ್ಕಿಳಿಯುತ್ತಿರುವ ಮೊದಲ ಟೂರ್ನಿಯೂ ಇದಾಗಿದೆ.

ಸಿಂಧು ಅವರಿಗೆ ಕೋಚ್ ಆಗಿ ಕರ್ನಾಟಕದ ಅನೂಪ್ ಶ್ರೀಧರ್ ಹಾಗೂ ಕೋರಿಯಾದ ದಿಗ್ಗಜ ಕೋಚ್, ಲೀ ಸಿಯುನ್ ಈಚೆಗೆ ನೇಮಕವಾಗಿದ್ದಾರೆ. ಈ ಹಿಂದೆ ಇದ್ದ ಇಂಡೋನೇಷ್ಯಾದ ಕೋಚ್ ಅಗಸ್ ಡಿವಿ ಸ್ಯಾಂಟೋಸ್ ಅವರು ತಮ್ಮ ದೇಶಕ್ಕೆ ಮರಳಿದ್ದಾರೆ.

ಈ ಟೂರ್ನಿಯಲ್ಲಿ ಸಿಂಧು ಅವರು ಮೊದಲ ಸುತ್ತಿನಲ್ಲಿ ಕೆನಡಾದ ಮಿಚೆಲ್ ಲೀ ವಿರುದ್ಧ ಸೆಣಸುವರು. ಹೈದರಾಬಾದಿನ ಆಟಗಾರ್ತಿ ಪ್ಯಾರಿಸ್‌ನಲ್ಲಿ 16ರ ಘಟ್ಟದಲ್ಲಿ ಇದೇ ಎದುರಾಳಿ ವಿರುದ್ಧ ಸೋತಿದ್ದರು. ಮೊದಲ ಸುತ್ತಿನಲ್ಲಿ ಜಯಿಸಿದರೆ ಸಿಂಧು ಅವರು ಎರಡನೇಯದ್ದರಲ್ಲಿ ಜಪಾನಿನ ಟೊಮ್ಯಾಕೊ ಮಿಯಾಝಾಕಿ ವಿರುದ್ಧ ಕಣಕ್ಕಿಳಿಯುವರು. ಮಿಯಾಝಕಿ ಅವರು ಎರಡು ವರ್ಷಗಳ ಹಿಂದೆ ಜೂನಿಯರ್ ವಿಶ್ವ ಚಾಂಪಿಯನ್ ಆಗಿದ್ದರು.

ಲಕ್ಷ್ಯ ಸೇನ್ ಅವರು ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಅಲ್ಪ ಅಂತರದಲ್ಲಿ ಪದಕ ಕೈತಪ್ಪಿಸಿಕೊಂಡಿದ್ದರು. ನಂತರ ಅವರು ಆಸ್ಟ್ರಿಯಾದ ರೆಡ್‌ಬುಲ್ ಅರೆನಾದಲ್ಲಿ ತಮ್ಮ ದೈಹಿಕ ಸಾಮರ್ಥ್ಯ ವಿಶ್ಲೇಷಣೆಗೊಳಗಾಗಿದ್ದರು. ಅವರು ಇಲ್ಲಿ ಮೊದಲ ಸುತ್ತಿನಲ್ಲಿ ಡೆನ್ಮಾರ್ಕಿನ ರಾಸ್ಮಸ್ ಗೆಮ್ಕೆ ವಿರುದ್ಧ ಆಡುವರು.


ಲಕ್ಷ್ಯ ಸೇನ್

ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್, ಯುವ ಆಟಗಾರರಾದ ಕಿರಣ ಜಾರ್ಜ್ ಮತ್ತು ಸತೀಶ್ ಕುಮಾರ್ ಕರುಣಾಕರನ್ ಕೂಡ ಭಾರತವನ್ನು ಪ್ರತಿನಿಧಿಸುವರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಮಾಳವಿಕಾ ಬನ್ಸೋದ್ ಮತ್ತು ಆಕರ್ಷಿ ಕಶ್ಯಪ್ ಕೂಡ ಕಣದಲ್ಲಿದ್ದಾರೆ.

ಆದರೆ ಪುರುಷರ ಡಬಲ್ಸ್‌ನಲ್ಲಿ ಈ ಬಾರಿ ಭಾರತದ ಸ್ಪರ್ಧಿಗಳು ಇಲ್ಲ. ಮಹಿಳೆಯರ ವಿಭಾಗದಲ್ಲಿ ಋತುಪರ್ಣಾ ಪಂಡಾ ಮತ್ತು ಶ್ವೇತಪರ್ಣ ಪಂಡಾ ಜೋಡಿ ಕಣಕ್ಕಿಳಿಯಲಿದೆ. ಮಿಶ್ರ ಡಬಲ್ಸ್‌ನಲ್ಲಿ ಸತೀಶ್ ಮತ್ತು ಆದ್ಯಾ ವರಿಯತ್ ಜೋಡಿಯು ಸ್ಪರ್ಧಿಸಲಿದೆ.

ಏಷ್ಯನ್ ಕ್ರಾಸ್‌ಕಂಟ್ರಿ: ಗುಲ್ವೀರ್ ಸಿಂಗ್ ಆಯ್ಕೆ


ಗುಲ್ವೀರ್ ಸಿಂಗ್

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್ ಪದಕವಿಜೇತ ಅಥ್ಲೀಟ್ ಗುಲ್ವೀರ್ ಸಿಂಗ್ ಅವರನ್ನು ಹಾಂಗ್‌ಕಾಂಗ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವ ಭಾರತ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಭಾರತೀಯ ಸೇನೆಯ ಉದ್ಯೋಗಿ 26 ವರ್ಷದ ಗುಲ್ವೀರ್ ಅವರು ಹೋದ ವರ್ಷ ಹಾಂಗ್‌ಝೌನಲ್ಲಿ ನಡೆದಿದ್ದ ಏಷ್ಯನ್ ಕ್ರೀಡಾಕೂಟದಲ್ಲಿ 10 ಸಾವಿರ ಮೀಟರ್ಸ್ ಓಟದಲ್ಲಿ ಕಂಚಿನ ಪದಕ ಗಳಿಸಿದ್ದರು. ಹೋದ ತಿಂಗಳು ಜಪಾನಿನಲ್ಲಿ ನಡೆದಿದ್ದ ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್‌ನಲ್ಲಿ ಅವರು 5 ಸಾವಿರ ಮೀಟರ್ಸ್ ಓಟದಲ್ಲಿ (13ನಿ,11.82ಸೆ) ಗಮನ ಸೆಳೆದಿದ್ದರು.

ಅಕ್ಟೋಬರ್ 20ರಂದು ಸ್ಪರ್ಧೆಯು ನಡೆಯಲಿದೆ.

ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಅಧ್ಯಕ್ಷ ಅದಿಲ್ ಸುಮರಿವಾಲಾ ಅವರು ಸೋಮವಾರ ಪ್ರಕಟಿಸಿರುವ ತಂಡ ಇಂತಿದೆ;

ಪುರುಷರು: ಗುಲ್ವೀರ್ ಸಿಂಗ್, ಕಾರ್ತಿಕ್ ಕುಮಾರ್, ಅಭಿಷೇಕ್ ಪಾಲ್, ಅರುಣ್ ರಾಥೋಡ್. **ಮಹಿಳೆಯರು:** ಅಂಕಿತಾ, ಸೀಮಾ, ಸಂಜೀವನಿ ಜಾಧವ್, ಸೋನಿಕಾ. **ಜೂನಿಯರ್ ಬಾಲಕರು:** ಅಮರದೀಪ್ ಪಾಲ್, ಕೃಪಾಶಂಕರ್ ಯಾದವ್, ವಿನೋದ್ ಸಿಂಗ್, ಗೌರವ್ ಭಾಸ್ಕರ್ ಭೋಸಲೆ. **ಜೂನಿಯರ್ ಬಾಲಕಿಯರು:** ಏಕ್ತಾ ಡೇ, ಸುನಿತಾ ದೇವಿ, ಶಿಲ್ಪಾ ದಿಯೊರಾ, ಪ್ರಾಚಿ ಅಂಕುಶ್ ದೇವಕರ್.

ಬಿಲಿಯರ್ಡ್ಸ್: ಭಾಸ್ಕರ್ ಚಾಂಪಿಯನ್



ಬೆಂಗಳೂರು: ಬಿ.ಭಾಸ್ಕರ್ ಇಲ್ಲಿ ಸೋಮವಾರ ನಡೆದ ರಾಜ್ಯ ರ‍್ಯಾಂಕಿಂಗ್ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಟೂರ್ನಿಯ ಸೀನಿಯರ್ ಪುರುಷರ ಬಿಲಿಯರ್ಡ್ಸ್ ಫೈನಲ್‌ನಲ್ಲಿ 4–0 ಯಿಂದ ಎಂ.ಎಲ್. ಲಕ್ಷ್ಮಣ್ ಅವರನ್ನು ಮಣಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯಲ್ಲಿ ನಡೆದ ಟೂರ್ನಿಯಲ್ಲಿ ಡಿ.ರಾಜ್‌ಕುಮಾರ್ ಮೂರನೇ ಸ್ಥಾನ ಪಡೆದರು. ಐ.ಎಚ್. ಮನುದೇವ್ ನಾಲ್ಕನೇ ಸ್ಥಾನ ಗಳಿಸಿದರು.

ಲಂಕಾ ತಂಡಕ್ಕೆ ಜಯಸೂರ್ಯ ಪೂರ್ಣಾವಧಿ ಕೋಚ್



ಕೊಲಂಬೊ (ಪಿಟಿಐ): ಸನತ್ ಜಯಸೂರ್ಯ ಅವರನ್ನು ಶ್ರೀಲಂಕಾ ಕ್ರಿಕೆಟ್ ತಂಡದ ಪೂರ್ಣಾವಧಿ ಮುಖ್ಯ ಕೋಚ್ ಆಗಿ ಸೋಮವಾರ ನೇಮಕ ಮಾಡಲಾಗಿದೆ. ಅವರು 2026ರ ಟಿ20 ವಿಶ್ವಕಪ್ ಟೂರ್ನಿಯವರೆಗೆ ಕಾರ್ಯನಿರ್ವಹಿಸುವರು.

ಲಂಕಾ ತಂಡದ ಮಾಜಿ ನಾಯಕ ಸನತ್ ಅವರು ಹೋದ ಜುಲೈನಲ್ಲಿ ಹಂಗಾಮಿ ಕೋಚ್ ಆಗಿ ನೇಮಕವಾಗಿದ್ದರು. ಇಂಗ್ಲೆಂಡ್ ಮತ್ತು ಭಾರತ ಎದುರಿನ ಸರಣಿಗಳಲ್ಲಿ ಉತ್ತಮ ಕಾರ್ಯನಿರ್ವಹಣೆಯ ಮೂಲಕ ಅವರು ಗಮನ ಸೆಳೆದಿದ್ದರು. ಅದರಿಂದಾಗಿ ಅವರನ್ನು ಪೂರ್ಣಾವಧಿ ಕೋಚ್ ಆಗಿ ನೇಮಕ ಮಾಡಲು ಶ್ರೀಲಂಕಾ ಕ್ರಿಕೆಟ್ ಮಂಡಳಿ (ಎಸ್‌ಎಲ್‌ಸಿ) ನಿರ್ಧರಿಸಿದೆ.

ಜಯಸೂರ್ಯ ಮಾರ್ಗದರ್ಶನದಲ್ಲಿ ಶ್ರೀಲಂಕಾ ತಂಡವು ಭಾರತದ ಎದುರು 27 ವರ್ಷಗಳ ನಂತರ ಏಕದಿನ ಸರಣಿ ಜಯಿಸಿತ್ತು. ಅದರ ನಂತರ ಇಂಗ್ಲೆಂಡ್ ತಂಡವನ್ನೂ ಸೋಲಿಸಿತ್ತು. ತವರಿನಲ್ಲಿ ನಡೆದಿದ್ದ ಟೆಸ್ಟ್ ಸರಣಿಯಲ್ಲಿ ಶ್ರೀಲಂಕಾ ಪಡೆಯು ನ್ಯೂಜಿಲೆಂಡ್ ವಿರುದ್ಧ 2–0ಯಿಂದ ಗೆಲುವು ಸಾಧಿಸಿತ್ತು.

‘2024ರ ಅಕ್ಟೋಬರ್ 1ರಿಂದ ಜಾರಿಯಾಗುವಂತೆ ಜಯಸೂರ್ಯ ಅವರನ್ನು ನೇಮಕ ಮಾಡಲಾಗಿದೆ. ಅವರು 2026ರ ಮಾರ್ಚ್ 31ರವರೆಗೆ ಕಾರ್ಯನಿರ್ವಹಿಸುವರು’ ಎಂದು ಎಸ್‌ಎಲ್‌ಸಿ ಪ್ರಕಟಣೆಯಲ್ಲಿ ತಿಳಿಸಿದೆ.


ಎಚ್‌ಎಎಲ್ ಎಫ್‌ಸಿಯ ಮೋಹಕ್ ಎಂ. ಮುತ್ತಲಮಣಿ (ಎಡ) ಮತ್ತು ರಿಯಲ್ ಚಿಕ್ಕಮಗಳೂರು ಎಫ್‌ಸಿಯ ಡೆಂಜಿಲ್ ಖರ್ಷಂಡಿ (ಬಲ) ಚೆಂಡಿಗಾಗಿ ಪೈಪೋಟಿ ನಡೆಸಿದರು —ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಸ್ಪೋರ್ಟಿಂಗ್ ಕ್ಲಬ್ ಶುಭಾರಂಭ

ಬೆಂಗಳೂರು: ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು ಇಲ್ಲಿ ಸೋಮವಾರ ಆರಂಭವಾದ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದೆ.

ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ತಂಡವು 2–0ಯಿಂದ ಬಿಯುಎಫ್‌ಸಿ ತಂಡವನ್ನು ಸೋಲಿಸಿತು. ಸ್ಪೋರ್ಟಿಂಗ್ ಪರ ರೋಷನ್ ಸಿಂಗ್ (28ನೇ), ಇಶಾನ್ ರಘುನಂದನ್ (88ನೇ) ತಲಾ ಒಂದು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಚಿಕ್ಕಮಗಳೂರು ಎಫ್‌ಸಿ ತಂಡವು ಎಚ್‌ಎಎಲ್ ಎಫ್‌ಸಿ ಜೊತೆ ಗೋಲುರಹಿತವಾಗಿ ಡ್ರಾ ಸಾಧಿಸಿತು.

ಇಂದಿನ ಪಂದ್ಯಗಳು

ರೂಟ್ಸ್ ಎಫ್‌ಸಿ– ಎಂಇಜಿ ಅಂಡ್ ಸೆಂಟರ್ ಎಫ್‌ಸಿ (ಮಧ್ಯಾಹ್ನ 12.45)

ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್– ರಿಯಲ್ ಬೆಂಗಳೂರು (ಮಧ್ಯಾಹ್ನ 3.45)